THE BOOK WAS DRENCHED

# MADRAS GOVERNMENT ORIENTAL SERIES

No. CXXXIII

200535

# ವ್ಯವಹಾರಗಣಿತಂ

11
3V

# VYAVAHARAGANITAM

UNIVERSAL LIBRARY
OU_200535
UNIVERSAL LIBRARY

**OSMANIA UNIVERSITY LIBRARY**

Call No. K 511 M33V

Accession No. K5483

Author [illegible]

Title [illegible] 1955

This book should be returned on or before the date last marked below.

## MADRAS GOVERNMENT ORIENTAL SERIES

PUBLISHED UNDER THE AUTHORITY OF
THE GOVERNMENT OF MADRAS.

*General Editor*
T. CHANDRASEKHARAN, M.A., L.T.,
Curator, Government Oriental Manuscripts Library,
Madras.

No. CXXXIII

# ವ್ಯವಹಾರಗಣಿತ

# VYAVAHARAGANITA

**Critically edited with Introduction**

BY

**M. MARIAPPA BHAT,** M.A., L.T.,

*(Head of the Kannada Department, University of Madras.)*

---

GOVERNMENT ORIENTAL MANUSCRIPTS LIBRARY, MADRAS.

1955

**[ Price Rs. 3—8—0**

PRINTED AT
THE SREEVATHSA PRESS
ROYAPETTAH, MADRAS.

# INTRODUCTION

The Government of Madras took up for consideration the question of publication of the various manuscripts in different languages on subjects like Philosophy, Medicine, Science, etc, early in May 1948. Important Manuscript Libraries in the Madras Presidency were requested to send a list of unpublished manuscripts with them for favour of being considered by the Government for publication. The Honorary Secretary of the Tanjore Maharaja Serfoji's Sarasvathi Mahal Library, Tanjore, alone complied with this requsst. This list as well as a similar list of unpublished manuscripts in the Government Oriental Manuscripts Library, Madras, were carefully examined and a tentative selection of manuscripts suitable for publication was made. The Government in their Memorandum No. 34913/48-10, Education, dated 4—4—1949, constituted an Expert Committee with the Curator of the Government Oriental Manuscripts Library, Madras, as the Secretary, for the final selection of manuscripts suitable for printing and for estimating the cost of publication.

The following are the members of the Committee :—

1. Sri T. M. Narayanaswami Pillai, M.A., B.L.
2. ,, R. P. Sethu Pillai, B.A., B.L.
3. ,, C. M. Ramachandra Chettiar, B.A., B.L.
4. ,, R. Krishnamoorthy, (Kalki).
5. Dr. N. Venkataramanayya, M.A., Ph. D.
6. Sri M. Ramanuja Rao Naidu, M.A.
7. ,, V. Prabhakara Sastri
8. ,, N. Venkata Rao, M.A.
9. ,, H. Sesha Ayyangar.
10. ,, Masti Venkatesa Ayyangar.
11. ,, M. Mariappa Bhat, M.A., L.T.
12. Dr. C. Achyuta Menon, B.A., Ph. D.
13. ,, C. Kunhan Raja, M.A., D. Phil.
14. ,, A. Sankaran M.A., Ph. D., L.T.
15. Sri Polakam Rama Sastri.
16. ,, S. K. Ramanatha Sastri.

17. Dr. M. Abdul Haq, M.A., D. Phil., (Oxon.)
18. Afzul-ul Ulama Hakim Khader Ahamed.
19. Sri P. D. Joshi.
20. „ S. Gopalan, B.A., B.L.
21. „ T. Chandrasekharan, M.A., L.T.

With the exception of Sri Masti Venkatesa Ayyangar, and Dr. C. Kunhan Raja, the above members continued to be members of the Expert Committee for 1950-51 also to which the following gentlemen were added in Govt. Memo. 7297-E/50-3, Edn., D/—19—'50 and Govt. Memo. No. 15875-E/50-4, Edn. D/—7—9—'50.

1. Dr. A. Chidambaranatha Chettiar, M.A., Ph. D.
2. Sri S. Govindarajulu, B.A., B.L., LL.B., Bar-at-law.
3. Capt. G. Srinivasamoorthy, B.A., B.L., M.B., & C.M.
4. Dr. Muhammad Hussian Nainar, M.A., Ph. D.
5. Sri T. V. Subba Rao, B.A., B.L.
6. Principal, College of Indian Medicine, Madras.

The members of the Committee formed into Sub-Committees for the various languages, Sanskrit, Tamil, Telugu, Kannada, Malayalam, Mahrathi and Islamic Languages. They met during the month of May, 1949, at Madras and at Tanjore to examine the manuscripts and make a selection. The recommendations of the Committee were accepted by the Government and they decided to call these publication as the "MADRAS GOVERNMENT ORIENTAL SERIES," and appointed the Curator, Government Oriental Manuscripts Library, Madras, as the General Editor of the publications under this series.

The following manuscripts were taken up for publication during 1949-50.

## "A" From The Government Oriental Manuscripts Library, Madras

### TAMIL

1. Kappal Sattiram
2. Anubhava Vaiddiya Murai
3. Attanakolahalam
4. Upadesa Kandam
5. Colan Purva Pattayam
6. Sivajnana Dipam

### TELUGU

1. Ausadha Yogamulu
2. Vaidya Nighantuvu
3. Dhanurvidya Vilasamu
4. Yoga Darsana Visayamu
5. Khadga Laksana Siromani

### SANSKRIT

1. Visanarayaniyam—(Tantrasarasangraha)
2. Bhargava Nadika
3. Hariharacaturangam
4. Brahmasutravrtti—Mitaksara
5. Nyayasiddhanata Tattvamrtam

### MALAYALAM

1. Garbha Cikitsa
2. (a) Vastulaksanam
   (b) Silpavisayam
3. Mahasaram
4. Kanakkusaram
5. Kriyakramam
6. Kanakkusaram—(Balaprabodham)

### KANNADA

1. Lokopakaram
2. Rattamatam

3. Asvasastram
4. Vividha Vaidya Visayagalu
5. Sangitaratnakara
6. Supasastra

## ISLAMIC LANGUAGES

1. Jamil-Al-Ashya
2. Tibb-E-Faridi
3. Tahqiq-Al-Buhran
4. Safinat-Al-Najat

---

## "B" FROM THE TANJORE MAHARAJA SERFOJI'S SARASVATHY MAHAL LIBRARY, TANJORE

## TAMIL

1. Sarabendra Vaiddya Murai (Diabetes)
2. Do. (Eyes)
3. Do. (Anaemia)
4. Do. (Svasakasam)
5. Agastiyar 2000
6. Konkanarsarakku Vaippu
7. Tiruccirrambalakkovaiyar with Padavurai
8. Talasamudram
9. Bharatanatyam
10. (a) Pandikeli Vilasa Natakam
    (b) Pururava Cakravarti Natakam
    (c) Madana Sundara Vilasa Natakam
11. Percy Macqueen's Collection of Folklore in the Madras University Library
12. Ramaiyan Ammanai

## TELUGU

1. Kamandakanitisaramu
2. Taladasapranapradipika

3. Raghunatha Nayakabhyudayamu
4. Rajagopala Vilasamu
5. Ramayanamu by Katta Varadaraju

MAHRATHI

1. Natyasastra Sangraha
2. (a) Book of Knowledge
   (b) Folk Songs
   (c) Dora Darun Veni Paddhati
   (d) Asvasa Catula Dumani
3. (a) Pratapasimhendra Vijaya Prabandha
   (b) Sarabhendra Tirthavali
   (c) Lavani
4. Devendra Kuravanji
5. Bhakta Vilasa
6. Sloka Baddha Ramayana

SANSKRIT

1. Asvasastra with Tricolour illustrations
2. Rajamrganka
3. Anandakandam
4. Ayurvedamahodadhi
5. Gita Govinda Abhinaya
6. (a) Colacampu
   (b) Sahendra Vilasa
7. Dharmakutam—Sundra Kanda
8. Jatakasara
9. Visnutattvanirnaya Vyakhya
10. Sangita Darpana
11. Bijapallava

During 1950, only the Sub-committees for TAMIL, TELUGU and KANNADA met in the month of July 1950 at Madras.

The following books were taken up for publication in the various languages during 1950-51.

## TAMIL

1. Datcanayanar-Vaiddiya-Attavanai
2. Vaiddiyak Kalanciyam
3. Anubhava Vaiddiya Murai Vol. 3

## TELUGU

1. Saivacarasangrahamu
2. Anubhava Veidyamu
3. Abhinayadarpanamu

## SANSKRIT

1. Arogyacintamani
2. Tattvasara with Ratnasarini
3. Sutrarathamrta Lahari
4. (a) Ratnadipika
   (b) Ratnasastra

## MALAYALAM

1. Asvacikitsa
2. Phalasarasamuccaya

## KANNADA

1. Vaidya Sara Sangraha, Vol. I

During 1951-52, only the Sub-committees for TAMIL, TELUCU and MALAYALAM met in the month of April 1951.

The following books were taken up for publication in the various languages :—

## TAMIL

1. Saptarisinadi Vol. I, Mesa Lagna
2. Karnatakarajakkal Savistara Caritram
3. Bharata Siddantam
4. Pillaippinivakatam Vol. I
5. Anubhava Vaiddiyam Vol. 4
6. Mattuvakatam

## TELUGU

1. Brahmavidya Sudharnavamu
2. Ragatalacintamani
3. Vaidyacintamani
4. Kumararamuni Katha
5. Katamaraju Katha

## SANSKRIT

1. Devakeralam—Candrakala Nadi
2. Patanjala Yogasutra Bhasya Vivarana by Sri Sankara-carya

## MALAYALAM

1. Kilivandusamvadam
2. Advaita Vedantam
3. Barhaspatyasutra with Malayalam commentary
4. Karanapaddhati

## KANNADA

1. Sadgururahasyam

## ARABIC

1. Shawakil-Ul-Hur

In Government Memorandum No. 18947-E/52-2, Edn., dated 7-8-1952, a few changes were made in the personnel of the Expert Committee :

The names of the following members were deleted :-

1. Sri V. Prabahakara Sastri
2. Professor M. Hiriyanna
3. ,, C. Achyuta Menon
4. ,, M. Abdul Haq

The following gentlemen were included as members of the Expert Committee :—

1. Sri M. Somasekhara Sarma
2. Dr. V. Raghavan, M.A., Ph. D.
3. „ R. Nagaraja Sarma, M.A., Ph. D.
4. „ S. Krishnan Nayar, M.A., Ph. D.
5. Professor S. A. Bukhari, M.A.

The Sub-Committees for all the languages met during September 1952 for selecting manuscripts for publication.

The following manuscripts were taken up for publication during 1952-53 :—

TAMIL

1. Saptarisinadi Valume II—VRSABHA LAGNA
2. Temple Inscriptions of South India, Vol. I

TELUGU

1. Sariramu

KANNADA

1. Bijjalaraya Carite
2. Vaidyasara Sangraha, Volume II

MALAYALAM

1. Vidyamadhaviyam
2. Sarvasadharana Cikitsa.
3. Visacikitsa and Visappattusaram

SANSKRIT

1. Nyayaratnam with the commentary Dyutimalika
2. Cikitsatilakam
3. Nrttaratnavali

The Government in their G.O.Ms. No. 1820 Education dated 4—8—1952 sanctioned a grant of rupees 9,000 to the Dr. V. Swaminatha Iyer's Library, Adyar, towards the publication of the following Tamil Manuscripts as part of the "Madras Government Oriental Series."

1. Tiruvacaka Vyakhyanam.
2. Mahabharata Cudamani

The following books were taken up for publication during 1953-54 .—

TAMIL

1. Saptarisinadi Volume III (MITHUNA LAGNA).
2. Temple Inscriptions of South India Volume II

TELUGU

1. Bharathasarasangraha

KANNADA

1. Manmathavijaya

MALAYALAM

1. Jnanapiyusam

SANSKRIT

1. Daivajnabharana

PERSIAN

1. Baharisthan Sukhan

Out of the seven books taken up for publication, five books excepting one in Telugu and one in Persian were printed during the year.

The following books were taken up for publication during 1954-55 :—

TAMIL

1. Pillaippinivakatam (on Infantile disease), Vol. II.
2. Saptarisinadi, Vol. IV, Kataka Lagna
3. Perur Kovai
4. Siddhantavilakkam
5. Samudrikalaksanam
6. Anandaranga Kovai

## KANNADA

1. Abhidhanaratnamala
2. Vyavaharaganita

## MALAYALAM

1. Vetalapancavimsati
2. Yudhisthiravijayam

## SANSKRIT

1. Abhoga
2. Aumapatam
3. Mahabhaskariyam

## PERSIAN

1. Nuskha-e-Shajahani

On account of the separation of the Andhra State, the printing of the Telugu manuscripts could be undertaken only in consultation with that State. Since the concurrence of that State has not been received so far, no work in Telugu was taken up for publication although three works, namely, Bobbili-Yuddhakatha, Haider Caritramu and Aryabhtiya Siddhanta Vyakhya were selected for publication during 1954-55.

It is hoped that the publication of most of the important manuscripts will be completed within the next few years.

Some of the manuscripts taken up for publication are represented by single copies in the Library and consequently the mistakes that are found in them could not be corrected by comparing them with other copies. The editors have, however, tried their best to suggest correct readings. The wrong readings are given in round brackets and correct readings have been suggested in square brackets. When different readings are found, they have been given in the footnotes except in the case of a few books in which the correct readings have been given in the footnote or incorporated in the text itself.

The Government of Madras have to be thanked for financing the entire scheme of publication although there is a drivc for economy in all the departments. My thanks are due to the members of the Expert Committee who spared no pains in selecting the manuscripts for publication. I have also to thank the various editors, who are experts in their own field, for readily consenting to edit the manuscripts and see them through the press. The various Presses that have co-operated in printing the manuscripts in the best manner possible also deserve my thanks for the patience exhibited by them in carrying out the corrections made in the proofs.

This edition is based on three palm-leaf manuscripts, D. No. 1419, 1422 and 1478 and one paper manuscript D. No. 1435 preserved in this library. The palm-leaf manuscript bearing D. No. 1419 is $17\frac{3}{4} \times 1\frac{3}{4}$ inches in size and the other two palm-leaf manusceripts D. No. 1422 and 1478 are $10\frac{1}{2} \times 1\frac{1}{8}$ inches in size.

This work deals with arithmatic (Practical and Commercial) under the title "Vyavaharaganita." This is written in Kanda and Vrtta metres. The author is Rajaditya who lived in 12th century A. D.

Govt. Oriental Manuscripts Library,
Madras.

T. CHANDRASEKHARAN,
*General Editor,*
Madras Govt. Oriental Series.

# ಅ ನು ಕ್ರ ಮ ಣಿ ಕೆ


| | | |
|---|---|---|
| 1. | ಮುನ್ನುಡಿ | 1 — 8 |
| 2. | Introduction | 9 — 12 |
| 3. | ಪೀಠಿಕಾ ಪ್ರಕರಣಂ | 1 — 8 |
| 4. | ಪರಿಭಾಷಾ ಪ್ರಕರಣಂ | 9 — 14 |
| 5 | ತ್ರೈರಾಶಿಕ ಪ್ರಕರಣಂ | 15 — 32 |
| 6. | ಪಂಚರಾಶಿ, ಜೆಸ್ತರಾಶಿ, ಮಿಶ್ರರಾಶಿ ಇತ್ಯಾದಿ | 33 — 68 |
| 7. | ಪಂಚಸಪ್ತ ನವರಾಶಿ | 69 — 99 |
| 8. | ಅನುಬಂಧ ೧ | 1 — 48 |
| 9. | ಅನುಬಂಧ ೨ | 49 — 51 |

# ಮುನ್ನುಡಿ

ರಾಜಾದಿತ್ಯನು ಜೈನಕವಿ. ಕನ್ನಡದಲ್ಲಿ ಗಣಿತಗ್ರಂಥಗಳನ್ನು ಬರೆದವರಲ್ಲಿ ಈತನೇ ಮೊತ್ತಮೊದಲಿನವನೆನ್ನಬಹುದು. ವ್ಯವಹಾರಗಣಿತ, ಕ್ಷೇತ್ರಗಣಿತ, ವ್ಯವಹಾರರತ್ನ, ಲೀಲಾವತಿ, ಜೈನಗಣಿತ ಸೂತ್ರಟೀಕೋದಾಹರಣ ಮೊದಲಾದ ಅನೇಕ ಗಣಿತ ಗ್ರಂಥಗಳನ್ನು ಈ ಕವಿ ಬರೆದಿರುವುದಾಗಿ ಕರ್ಣಾಟಕ ಕವಿಚರಿತಕಾರರು ಹೇಳಿರುವರು. ಆದರೆ ಯಾವೊಂದು ಗ್ರಂಥವೂ ಸ್ಖಾಲಿತ್ಯವಿಲ್ಲದೆಯೂ, ಸಮಗ್ರವಾಗಿಯೂ ದೊರಕದಿರುವುದು ಕನ್ನಡಿಗರ ದೌರ್ಭಾಗ್ಯವೇ ಸರಿ.

ಈತನಿಗೆ ರಾಜ, ರಾಜವರ್ಮ, ಭಾಸ್ಕರ, ಬಾಚಯ ಎಂಬ ಹೆಸರುಗಳೂ ಗಣಿತವಿಳಾಸ ಓಜೆವೆಡಂಗ, ಪದ್ಯವಿದ್ಯಾಧರ, ಉತ್ತಮಭವ್ಯಭೂಷಣ, ಜಿನಪದಕಮಲಮಧುಕರ ಇತ್ಯಾದಿ ಬಿರುದುಗಳೂ ಇದ್ದಂತೆ ತಿಳಿದುಬರುತ್ತದೆ. ಈತನು ಗಣಿತಜ್ಞ ಮಾತ್ರವಲ್ಲ ಉತ್ತಮ ಕವಿಯಾಗಿಯೂ ಇದ್ದಂತೆ ಈತನ ಪದ್ಯ ರಚನಾಸೌಂದರ್ಯವು ಸಾರುತ್ತದೆ. ವ್ಯವಹಾರಗಣಿತದ ಪೀಠಿಕಾ ಸಂಧಿಯಲ್ಲಿ ತನ್ನ ಹುಟ್ಟೂರಾದ ಪೂವಿನಬಾಗೆಯನ್ನು ವರ್ಣಿಸಿರುವುದು ಬಹಳ ಹೃದಯಂಗಮವಾಗಿದೆ. ಇದೊಂದು ಅದರೊಳಗಿನ ಪದ್ಯ,

ವನತತಿಯಿಂ ನದೀನದಕುಭೃತ್ಕುಲದಿಂ ಧನಧಾನ್ಯವರ್ಗದಿಂ |
ಜನಪದರಾಜಿಯಿಂ ಬೆಳೆವ ಕೆಯ್ಯೊಲದಿಂದೆನೆಪ್ಪೂರ್ಗಳಿಂ ಜಗ ||
ಜ್ಜನನುತ ಜೈನಧರ್ಮದ ನೆಗಳ್ತೆಯೊಳಿಂಬಿನ ಕೊಂಡಿಮಂಡಲ |
ಕ್ಕನುಪಮರತ್ನಮಂಡನಮೆನಿಪ್ಪುದು ಪೂವಿನಬಾಗೆ ಸಂತತಂ ||

ಈ ಪೂವಿನಬಾಗೆ ಕೊಂಡಿಮಂಡಲಕ್ಕೆ ಎಣೆಯಿಲ್ಲದಂಥ ರತ್ನಭೂಷಣದಂತಿರುವುದಂತೆ. ಹೂವಿನಬಾಗೆ ಎಂಬುದು ಉತ್ತರಕರ್ಣಾಟಕದಲ್ಲಿರಬೇಕು. ಹೂವಿನಹಡಗಲಿ, ಬಾಗೆವಾಡಿ ಇತ್ಯಾದಿಯನ್ನು ಹೋಲುವಂತಿದೆ ಈ ಊರ ಹೆಸರು.

ತನ್ನ ವಿಷಯವಾಗಿ ಕವಿ ಈ ಕೆಳಗಿನ ಪದ್ಯದಲ್ಲಿ ಹೀಗೆ ನುಡಿಯುತ್ತಾನೆ.

ಜನನಾಥಂ ನೇಮಿನಾಥಂ ನಿಜಗುರು ಶುಭಚಂದ್ರೋತ್ತಮಂ ತಂದೆ ಸರ್ವಾ |
ವನಿಸಂಸ್ತುತ್ಯಾಸ್ಪದಂ ಶ್ರೀಪತಿ ಜನನಿ ವಸಂತಾಖ್ಯೆ ತನ್ನಗ್ರಜಂ ಶಾಂ ||
ತನುಮಂತಾಯೋಗನುಂ ಬಾಹುಬಲಿ ಭರತರಾತ್ಮೇಶ್ವರರ್ ತಾಮೆನಲ್ ಭಾ |
ಪ್ಪನೆ ರಾಜಾದಿತ್ಯನೇಂ ಧನ್ಯನೊ ವಿನಯಶಂ ಸದ್ಗುಣಾಂಭೋಧಿಚಂದ್ರಂ ||
ಅನುರೂಪಂ ಸತ್ಯವಾಕ್ಯಂ ಪರಹಿತಚರಿತಂ ಸುಸ್ಥಿರಂ ಭೋಗಿ ಗಂಭೀ |
ರನುದಾರಂ ಸಚ್ಚರಿತ್ರಂ ಸಕಲಗನಖಿಲವಿದ್ಯಾವಿದಂ ಭವ್ಯಸೇವ್ಯಂ ||
ಜನತಾಸಂಸ್ತುತ್ಯನುರ್ವೀಶ್ವರಸಿಕರಸಭಾಯೋಗ್ಯನೆಂದಾಗಳುಂ ಪೇ |
ಳಿಸಿ ರಾಜಾದಿತ್ಯನಂ ಬಣ್ಣಿಪ್ಪುದಜಂ ಪೊಲವಿಂ ಸಂತತೋತ್ಸಾಹದಿಂದಂ ||

ಈತನ ಗುರು ಶುಭಚಂದ್ರ. ತಂದೆಯ ಹೆಸರು ಶ್ರೀಪತಿ. ತಾಯಿಯ ಹೆಸರು ವಸಂತಿ. ಅಣ್ಣನ ಹೆಸರು ಶಾಂತ. ಆತ್ಮೇಶ್ವರರ (ಪೋಷಕರ), ಹೆಸರು ಬಾಹುಬಲಿಭರತರು. ಸುಂದರನೂ ಸತ್ಯವಂತನೂ, ಪರೋಪಕಾರಿಯೂ ಅಖಿಲವಿದ್ಯಾವಿದನೂ ಎಂದೆನಿಸಿಕೊಂಡು ರಾಜರ ಸಭೆಗಳನ್ನಲಂಕರಿಸುವ ಯೋಗ್ಯತೆಯಿಂದ ಕೂಡಿದವನು. ಇದರಿಂದ ರಾಜಾದಿತ್ಯನು ರಾಜಸಭೆಗಳಲ್ಲಿ ಶೋಭಿಸಿದವನು ಎನ್ನಬಹುದು.

ಈತನ ಕಾಲದ ವಿಚಾರವಾಗಿ ಕವಿಚರಿತೆಕಾರರಿಗೂ ಡಾ|| ವೆಂಕಟಸುಬ್ಬಯ್ಯನವರಿಗೂ ಸ್ವಲ್ಪ ವಾದವಿವಾದಗಳು ನಡೆದಿವೆ. ಗ್ರಂಥದಲ್ಲಿ ಬರುವ ಕೆಲವೊಂದು ಉದಾಹರಣೆ ಪದ್ಯಗಳಲ್ಲಿ ವಿಷ್ಣುನೃಪಾಲನ ಹೆಸರು ಬರುತ್ತದೆ.

ಈ ವಿಷ್ಣುನೃಪಾಲನು 1111-1141 ಅವಧಿಯಲ್ಲಿ ಆಳಿದ ವಿಷ್ಣುವರ್ಧನನಾಗಿರಬೇಕೆಂದೂ, ಅಲ್ಲದೆ ಶ್ರ. ಬೆ. 117ನೆಯ ಶಾಸನದಲ್ಲಿ ಒಬ್ಬ ಶುಭಚಂದ್ರ ಗುರುವು 1123ರಲ್ಲಿ ಗತಿಸಿದಂತೆ ಹೇಳಿರುವುದರಿಂದ ಈತನೇ ರಾಜಾದಿತ್ಯನ ಗುರುವಾಗಿದ್ದಿರಬಹುದೆಂದೂ ಕವಿಚರಿತಕಾರರು ಅಭಿಪ್ರಾಯಪಟ್ಟು, ವಿಷ್ಣುವರ್ಧನನ ಆಸ್ಥಾನದಲ್ಲಿ ಈ ಕವಿಯು ಸುಮಾರು 1120ರಲ್ಲಿ ಇದ್ದಿರಬಹುದು ಎಂಬ ನಿರ್ಧಾರಕ್ಕೆ ಬಂದಿದ್ದರು.

ಡಾ|| ವೆಂಕಟಸುಬ್ಬಯ್ಯನವರು ವಿಷ್ಣುವರ್ಧನ ಎಂಬ ಹೆಸರು ಹೊಯ್ಸಳರಲ್ಲಿ ಅನೇಕ ರಾಜರಿಗಿದ್ದಿತೆಂದೂ. ಶುಭಚಂದ್ರನೆಂಬ ಹೆಸರೂ ಕೂಡ ಬೇರೆ ಬೇರೆ ಕಾಲಗಳಲ್ಲಿದ್ದ ಅನೇಕ ಜೈನ ಗುರುಗಳಿಗೆ ಇದ್ದಿತೆಂದೂ ತೋರಿಸಿಕೊಟ್ಟು, ಕವಿಯ ಕಾಲವನ್ನು ನಿರ್ಣಯಿಸುವುದಕ್ಕೆ ಮೇಲಿನ ಪದ್ಯದಲ್ಲಿ ಹೇಳುವ ಭರತಬಾಹುಬಲಿಗಳ ವಿಚಾರವನ್ನು ಪರಿಶೀಲಿಸುತ್ತಾರೆ. ಡಾಕರಸ ದಂಡನಾಯಕನ ವಂಶವೃಕ್ಷವನ್ನು ಶಾಸನಗಳ ಆಧಾರದಿಂದ ನಿರೂಪಿಸಿ, ಅಲ್ಲಿ ಎರಡನೆಯ ಮರಿಯಾನೆ ದಂಡನಾಯಕನ ಪುತ್ರರಾದ ಈ ಬಾಹುಬಲಿಭರತರು ಎರಡನೇ ಬಲ್ಲಾಳನ ಪಟ್ಟಾಭಿಷೇಕ ಕಾಲದಲ್ಲಿ ದಂಡನಾಯಕರಾಗಿಯೂ ಮಹಾಪ್ರಧಾನ ಸರ್ವಾಧಿಕಾರಿ ಮಾಣಿಕ್ಯಭಂಡಾರಿಗಳಾಗಿಯೂ ಇದ್ದರೆಂಬುದನ್ನು ತೋರಿಸುತ್ತಾರೆ. ಇವರು ಶಕವರ್ಷ 1105ರಲ್ಲಿ (ಕ್ರಿ. ಶ. 1183) ತಮ್ಮ ರಾಜನಾದ ಎರಡನೆಯ ಬಲ್ಲಾಳನ ಜನ್ಮದಿನ ಅವನಿಗೆ ಸೇಸೆಯನ್ನು ತೆತ್ತು ಸಿಂಧಗೆರೆ ಮೊದಲಾದ ಊರುಗಳ ಸ್ವಾಮಿತ್ವವನ್ನು ಅವನಿಂದ ಪಡೆದರು. ಹೊಯ್ಸಳರಲ್ಲಿ ವಿಷ್ಣುವರ್ಧನನೆಂಬ ಹೆಸರಿನಿಂದ ಅನೇಕ ರಾಜರು ನಿರ್ದೇಶಿಸಲ್ಪಟ್ಟಿರುವರೆನ್ನುತ್ತಾರೆ.

ಈ ಎರಡನೆಯ ಬಲ್ಲಾಳನನ್ನುದ್ದೇಶಿಸಿಯೇ ಕವಿಯು ವಿಷ್ಣುವರ್ಧನನೆಂದು ಹೇಳಿರಬೇಕು. ಹಾಗೆಯೇ ರಾಜಾದಿತ್ಯನು ಸ್ತುತಿಸಿದ ತನ್ನ ಜೈನಗುರು ಶುಭಚಂದ್ರನೂ ಆಗ ಇದ್ದನೆಂಬುದಕ್ಕೆ ಆಧಾರಗಳುಂಟು. ಮಾತ್ರವಲ್ಲ, ಗ್ರಂಥದಲ್ಲಿನ ಉದಾಹರಣೆಗಳಲ್ಲಿ ಇದೊಂದು ಪದ್ಯವಿದೆ.

ಮುದದಿಂ ಸೇವುಣರತ್ತಿ ಮಾರ್ಮಲೆಯೆ ಪೊಮ್ಮಿ...ಟ್ಟಲಾ |
ನದಿಯೊಳ್ ಬಿಟ್ಟುದು ಪಂಚಭಾಗೆ ಹಯಮುಂ ಭಾಗಂ....ಪಟ್ಟವಾ ||
ದುದು ಷಡ್ಭಾಗ ಸಮರ್ಚಿಸಲ್ಗಿರ್ದುದು ಚಾತುರ್ಭಾಗೆ ಲಾಯಕ್ಕೆ ಮಿ |
ಕ್ಕುದು ವಾಜಿಸಹಿತಂ......ಕೆಟ್ಟೋಡಿದಂ ಭಿಲ್ಲಮಂ ||

ಇಂಥವು ಇನ್ನೂ ಕೆಲವುಂಟು. ಇಲ್ಲಿ ಹೇಳುವ ಸೇವುಣರ ಸರಾಜಯ ಸೊರಟೂರಿನಲ್ಲಿ ಸೇವುಣರಾಜನಾದ ಭಿಲ್ಲಮನಿಗೆ ಕ್ರಿ. ಶ. 1191ರಲ್ಲಿ ಹೊಯ್ಸಳ ವೀರಬಲ್ಲಾಳನಿಂದ ಸಂಭವಿಸಿದ್ದು. ಈ ಮಹಾಘಟನೆಯನ್ನೊಳಕೊಂಡ ವಿಷಯಗಳನ್ನು ವಸ್ತುವನ್ನಾಗಿಟ್ಟುಕೊಂಡು ಗಣಿತ ಸೂತ್ರಗಳನ್ನು ರಚಿಸಿದ ರಾಜಾದಿತ್ಯನು ನಿಶ್ಚಯವಾಗಿಯೂ ಕ್ರಿ. ಶ. ಸು 1190ರ ಸಮಯ ಇದ್ದನೆಂಬುದು ಸುಸ್ಪಷ್ಟ.

ತದನಂತರ ಶ್ರೀ ನರಸಿಂಹಾಚಾರ್ಯರೂ (ಕವಿಚರಿತೆಕಾರರು) ರಾಜಾದಿತ್ಯನ ಈ ಕಾಲ ನಿರ್ಣಯವನ್ನು (1190) ಒಪ್ಪಿಕೊಂಡಿರುವಂತಿದೆ.

# 3

## ಗ್ರಂಥ ವಿಚಾರ

ವ್ಯವಹಾರಗಣಿತ ಎಂಬೀ ಗ್ರಂಥವನ್ನು ಮದ್ರಾಸು ಪ್ರಾಚ್ಯ ಹಸ್ತ ಲಿಖಿತ ಪುಸ್ತಕ ಭಂಡಾರದಲ್ಲಿರುವ ಮೂರು ಪ್ರತಿಗಳ ಸಹಾಯದಿಂದ ಮುದ್ರಿಸಲಾಗಿದೆ. [D. 1435, ಕಾಗದ ಪ್ರತಿ D. 1422 ಓಲೆ ಪ್ರತಿ D. 1419 ಓಲೆ ಮತ್ತು D. 1478 ಓಲೆ ಪ್ರತಿ] ಇವುಗಳಲ್ಲಿ ಯಾವುದೊಂದು ಪ್ರತಿಯೂ ಸಮಗ್ರವಾಗಿಲ್ಲದಿರುವುದು ದುರ್ದೈವ ಅದು ಮಾತ್ರವಲ್ಲ ಪ್ರತಿ ಮಾಡುವವರ ಅಕ್ಷರಸ್ಖಾಲಿತ್ಯಗಳೂ ಬಹಳವುಂಟು. ಅನೇಕಕಡೆ ಛಂದೋಭಂಗವೂ ಉಂಟು. ಪಾಠಗಳನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲದಷ್ಟು ತಪ್ಪುಗಳು ನುಸುಳಿಕೊಂಡಿವೆ. ಆದರೂ ವಿಷಯ ಪ್ರಾಮುಖ್ಯದಿಂದ ಕೆಲವನ್ನು ಹಾಗೆಯೇ ಕೊಟ್ಟಿದೆ. ಇನ್ನೊಂದು ವಿಷಯ. ಈ ಗ್ರಂಥವನ್ನು ಕರ್ಣಾಟಕದ ಅನೇಕ ಕಡೆಗಳಲ್ಲಿ 12ನೆಯ ಶತಮಾನದಿಂದ ಪ್ರತಿ ಮಾಡಿಸಿಕೊಂಡು ಮಕ್ಕಳಿಗೆ ಗಣಿತ ಕಲಿಸಲು ಉಪಯೋಗಿಸುತ್ತಿದ್ದಂತೆ ತಿಳಿದುಬರುವುದು. ಒಂದು ಪ್ರತಿಯ ಕೊನೆಯಲ್ಲಿ ಹೀಗೆ ಉಲ್ಲೇಖವುಂಟು: ''ಸ್ವಸ್ತಿಶ್ರೀ ಶಾಲೀವಾಹನ ಶಕ ವರುಷಂಗಳು ೧೫೮೨ನೆಯ ಶಾರ್ವರಿ ಸಂವತ್ಸರದ ಆಶ್ವಯುಜ ಶುದ್ಧ ೧೫ರಲ್ಲೂ ಗೂಳೂರಿಗೆ ಪಡುವಲಾಗಿದ್ದ ಅರೆವೂರ ಸ್ಥಳದಲ್ಲಿಯಿದ್ದ ಬೆಳುಗೆರೆ....ದ ಕೃಷ್ಣರಾಯಪುರವೆಂಬ ಸರ್ವಮಾನ್ಯದ ಅಗ್ರಹಾರದ ಯಜಮಾನ ತಿರುಮಲ ಭಟ್ಟನ ಮಗ ವಾಸುದೇವಯ್ಯನು ತನ್ನ ಸ್ವಹಸ್ತದಲ್ಲಿ ಬರೆದುಕೊಂಡ ಗಣಿತ. ಶುಭಮಸ್ತು" ಮತ್ತೊಂದು ಪ್ರತಿಯ (D. 1445ರ) ಅಂತ್ಯದಲ್ಲಿ ಹೀಗಿದೆ, "ಶ್ರೀಮನ್ಮಲಯೂರ ಆದಿನಾಥಾಯ ನಮಃ-ಶ್ರೀ ಕನಕಗಿರಿ ವಿಜಯನಾಥಾಯನಮಃ ಬೆಟ್ಟದ ಬ್ರಹ್ಮ ಪದ್ಮಾವತ್ಯೈ ಕೂಷ್ಮಾಂಡಿನಿ ಉದ್ಯೋಗಪುರ ವಚ್ಚಾರಿಣ್ಯೈನಮಃ, ಮಲೆಯೂರ ಆದಪಯ್ಯನ ಮಗ ವಿಜಯಪ್ಪಯ್ಯನು ತಮಗೆ ಬೇಕಾಗಿ ಶ. ೧೬೧೬ ಭಾವಸಂವತ್ಸರದ ವೈಶಾಖ ಬಹುಳ ೧೧ ಬುಧವಾರ ಬರೆದ ಗಣಿತ ಪುಸ್ತಕಕ್ಕೆ ಮಂಗಳಂ ಮಹಾ ಶ್ರೀಶ್ರೀಶ್ರೀ..." ಈ ಹಸ್ತಲಿಖಿತ ಪ್ರತಿಗಳು ಸುಮಾರು ೩೫೦ ಮತ್ತು ೩೦೦ ವರ್ಷಗಳಿಗೆ ಹಿಂದಿನವೆಂಬುದನ್ನು ನೆನೆಯುವಾಗ, ಅಂದು ಬರಿಯ ಕಾವ್ಯಕ್ಕೆ ಮಾತ್ರವಲ್ಲ ಉಪಯುಕ್ತ ಶಾಸ್ತ್ರಗಳಿಗೆ ಕೂಡ ಜನರು ಮಾರುಹೋಗುತ್ತಿದ್ದರೆಂಬುದನ್ನು ನೆನೆಯುವಾಗ ಹೃದಯ ತುಂಬಿ ಬರುವುದು. ರಾಜಾದಿತ್ಯ ಜೈನನಾಗಿದ್ದರೂ, ಆತನ ಗಣಿತ ಗ್ರಂಥವನ್ನು ಜೈನರೂ, ಬ್ರಾಹ್ಮಣರೂ ಇತರರೂ ಅಭ್ಯಾಸಮಾಡುತ್ತಿದ್ದರೆಂಬುದು ಮೇಲಿನ ಹಸ್ತ ಪ್ರತಿಗಳ ಲಿಪಿಗಾರರ ವಾಕ್ಯಗಳು ಸಾಧಿಸುತ್ತಿವೆ.

ಬೇರೆ ಬೇರೆ ಉಪಾಧ್ಯಾಯರುಗಳ ಕೈಗೆ ಬಿದ್ದ ಈ ಗಣಿತಗ್ರಂಥದಲ್ಲಿ ಅವರವರ ವ್ಯವಹಾರಾನುಭವಕ್ಕನುಸಾರವಾಗಿ ಕೆಲವು ಹೆಚ್ಚಿನ ಸೂತ್ರೋದಾಹರಣೆಗಳೂ ಸೇರಿಕೊಂಡಂತಿದೆ. ಕೆಲವು ಉದಾಹರಣೆಗಳು ಅನಾವಶ್ಯಕವಾಗಿ ಬರಿಯ ಸಂಖ್ಯೆಗಳ ಕಿಂಚಿತ್ ವ್ಯತ್ಯಾಸಗಳಿಂದ ಮರಳಿ ಮರಳಿ ಉಲ್ಲೇಖವಾಗಿವೆ. ಆದುದರಿಂದ ರಾಜಾದಿತ್ಯನಿಂದಲೇ ರಚಿತವಾಗದೆ ಇತರ ಗಣಿತದ ಉಪಾಧ್ಯಾಯರುಗಳಿಂದ ರಚಿತವಾದ ಕೆಲಕೆಲವು ಉದಾಹರಣೆಗಳು ಈ ಗ್ರಂಥದಲ್ಲಿ ನಡುನಡುವೆ ಸೇರಿಕೊಂಡಿರಬೇಕೆಂದು ಅನುಮಾನಿಸುವುದಕ್ಕೆ ಕಾರಣವುಂಟು.

ಪ್ರಸ್ತುತ ಗ್ರಂಥದಲ್ಲಿ ಅನೇಕ ತಪ್ಪುಗಳು ತಿದ್ದಲು ಸಾಧ್ಯವಿಲ್ಲದೆ ಉಳಿದುಕೊಂಡಿವೆ. ಆದರೂ ಅಂದಿನ ಕಾಲದ ವ್ಯವಹಾರ ಗಣಿತದ ಮಟ್ಟವನ್ನೂ ಮತ್ತು ಉದಾಹರಣೆಗಳಲ್ಲಿ ಕಂಡು

ಬರುವ ಅನೇಕ ವ್ಯವಹಾರಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳನ್ನೂ ತಿಳಿದುಕೊಳ್ಳಲು ಅನುಕೂಲವಾಗಬಹುದೆಂಬ ನಿರೀಕ್ಷೆಯಿಂದ ಈ ಉದ್ಯಮವನ್ನು ಕೈಗೊಂಡಿದೆ.

ಈಗ ಪ್ರಕಟಿಸಿರುವ ಗ್ರಂಥದೊಳಗಣ ಇನ್ನೊಂದು ಕೊರತೆ ಏನೆಂದರೆ ವಿಷಯಗಳ ಪರಿವಿಡಿ ಕ್ರಮವಾಗಿಲ್ಲದಿರುವುದು. ಪೀಠಿಕಾಸಂಧಿಯ ಕೊನೆಯಲ್ಲಿ ಕೆಲವು ಪರಿಭಾಷಾಸೂತ್ರಗಳೂ ಕೋಷ್ಟಕವೂ ಕೊಡಲ್ಪಟ್ಟಿವೆ. ಮತ್ತೆ ಪರಿಭಾಷಾ ಪ್ರಕರಣವೊಂದು ಕೊಡಲ್ಪಟ್ಟಿದೆ. ಇದರೊಳಗೆ ಸ್ಥಾನಸಂಜ್ಞೆ, ಗುಣಕಾರ, ಭಾಗಹಾರ ಇತ್ಯಾದಿ ವಿವರಗಳು ಹೇಳಲ್ಪಟ್ಟಿವೆ. ಮುಂದೆ 74 ಸೂತ್ರಗಳಲ್ಲಿ ತ್ರೈರಾಶಿಕ ಪ್ರಕರಣ ಕೊಡಲ್ಪಟ್ಟಿದೆ. ಮತ್ತೆ ಪಂಚರಾಶಿ ಎಂಬ ಪ್ರಕರಣ ಬರುವುದು. ಇದರಲ್ಲಿ ೧೨೮ ಸೂತ್ರಗಳುಂಟು. ಇಲ್ಲಿ ಬೆಸ್ತ ತ್ರೈರಾಶಿ (Inverse rule of three) ಮಿಶ್ರ ತ್ರೈರಾಶಿಗಳು ಬಂದಿವೆ. ಕೊನೆಯದಾಗಿ ಪಂಚ ಸಪ್ತ ನವರಾಶಿಗಳು (Compound proportions) ಎಂಬ ಪ್ರಕರಣ ಕೊಡಲ್ಪಟ್ಟಿದೆ. ಇದರಲ್ಲಿ ೧೧೨ ಸೂತ್ರಗಳುಂಟು.

ಈ ಗ್ರಂಥದಲ್ಲಿ ಸೇರಬಹುದಾಗಿದ್ದ ಹೆಚ್ಚಿನ ಕೆಲವು ಉದಾಹರಣೆಗಳು ಮತ್ತೊಂದು ಹಸ್ತಲಿಖಿತ ಪ್ರತಿಯಲ್ಲಿ ದೊರೆತುವು. ಅವುಗಳಲ್ಲಿ ಅನೇಕವಾಗಿ ತ್ರೈರಾಶಿಕಕ್ಕೆ ಪಂಚರಾಶಿಕಕ್ಕೆ ಸಂಬಂಧಿಸಿದುವು. ಆದರೂ ಅವುಗಳಲ್ಲಿ ಕಂಡುಬರುವ ಆ ಕಾಲದ ಕೆಲವು ಸಾಮಾಜಿಕ ವ್ಯಾವಹಾರಿಕ ವಿಷಯಗಳನ್ನು ತಿಳಿದುಕೊಳ್ಳಲನುವಾಗುವುದೆಂತಲೂ ಇನ್ನು ಕೆಲವಂಲ್ಲಿ ವಿವರವಾದ ಟೀಕೆಗಳನ್ನು ಕೊಟ್ಟಿರುವುದರಿಂದಲೂ ಅವನ್ನಿಲ್ಲಿ ಮೊದಲನೆಯ ಅನುಬಂಧವಾಗಿ ಪೋಣಿಸಿದೆ. ಇದರಲ್ಲಿಯೂ ಅಸಮಗ್ರತೆ, ಸ್ಖಾಲಿತ್ಯ ದೋಷಗಳು ತುಂಬಿವೆ. ಎರಡನೆಯ ಅನುಬಂಧದಲ್ಲಿ ಪಂಡಿತ ಹೆಚ್. ಶೇಷಯ್ಯಂಗಾರ್ಯರಲ್ಲಿರುವ ವ್ಯವಹಾರಗಣಿತದ ಕಾಗದ ಪ್ರತಿಯೊಂದರ ಪೀಠಿಕಾ ಪ್ರಕರಣದೊಳಗಣ ಕೆಲವು ಪಾಠಾಂತರಗಳನ್ನು ಕಾಣಿಸಿದೆ-ಮುಂದೆ ಗ್ರಂಥ ಶರೀರದಲ್ಲಿ ಅಂಥ ಮಹತ್ವದ ವ್ಯತ್ಯಾಸಗಳೇನೂ ಇರುವುದಿಲ್ಲ

ಈ ಗ್ರಂಥದಲ್ಲಿ ಇನ್ನೂ ಕೆಲವು ಅಧ್ಯಾಯಗಳು ಇದ್ದಿರಬೇಕು.

ಇಲ್ಲಿನ ಪರಿಭಾಷಾ ಪ್ರಕರಣದಲ್ಲಿ ಏಕದಿಂದ ಮಹಾಪರಿಮಿತದವರೆಗೆ 40 ಸ್ಥಾನಗಳನ್ನೂ ಅವುಗಳ ಸಂಜ್ಞೆಗಳನ್ನೂ ಹೇಳುತ್ತಾನೆ. ತದನಂತರ ಒಂದರಿಂದ ಒಂಬತ್ತರವರೆಗೆ ಮತ್ತು ಸೊನ್ನೆ ಇವುಗಳಿಗಿರುವ ವಿವಿಧ ಸಂಕೇತ ಶಬ್ದಗಳ ಪಟ್ಟಿಯನ್ನು ಕೊಟ್ಟಿದೆ. ಆಮೇಲೆ ಗಣಿತ ಜೀವಾಧಾರವಾಗಿರುವ ನಾಲ್ಕು ಮೂಲಕ್ರಿಯೆಗಳು (Fundamental operations) ಎಂದೆನಿಸಿಕೊಂಡ ಕೂಡುವುದು, ಕಳೆಯುವುದು, ಗುಣಿಸುವುದು ಮತ್ತು ಭಾಗಿಸುವುದು-ಇವುಗಳಿಗಿರುವ ಬೇರೆ ಬೇರೆ ಪರ್ಯಾಯ ನಾಮಗಳನ್ನು ಹೆಸರಿಸಿದೆ. ಮತ್ತೆ ವರ್ಗ ಮತ್ತು ವರ್ಗಮೂಲಗಳನ್ನು ಕುರಿತು (ಪುಟ 14) ಒಂದಿಷ್ಟು ಹೇಳಿರುತ್ತದೆ. ಇಲ್ಲಿ ಹೇಳಿರುವ ರೀತಿಯಲ್ಲಿ ಅನೇಕ ತಪ್ಪುಗಳು ನುಸುಳಿಕೊಂಡುದರಿಂದ ಸ್ಪಷ್ಟತೆಯಿರುವುದಿಲ್ಲ. ಆದರೂ ವರ್ಗಮೂಲ ತೆಗೆಯುವ ಕ್ರಮ ನಾವಿಂದು ವರ್ಗಮೂಲ ತೆಗೆಯಲು ಪ್ರಯೋಗಿಸುವಂಥದ್ದೇ ಎಂಬುದು ನಿರ್ವಿವಾದ-ಸಂಖ್ಯೆಯನ್ನು ಎರಡೆರಡಾಗಿ ವಿಂಗಡಿಸಿ, ("ಓಜಾರೇಷೇ?) ನಿಂದಲ್ಲಿಯೇ ವರ್ಗಮೂಲಗೊಂಬುದು, ಆ ವರ್ಗಮೂಲಗೊಂಡು ಬಂದರೆ, ಎರಡರಿಂದ ಗುಣಿಸೋದು, ಮುಂದಣ ಬಿಂದುಶ್ಶುದ್ಧ್ಯಂ ಮಾಡಿ ಯುಗ್ಮಸ್ಥಾನದಲ್ಲಿಟ್ಟು ಭಾಗಂಗೊಂಬುದು. ದ್ವಿಗುಣಿಸಿ ಬಂದ ಲಬ್ಧವನ್ನು ಅರ್ಧಿಸಲು ವರ್ಗಮೂಲ ಫಲಮಕ್ಕುಂ" ಇತ್ಯಾದಿ ಅವನ್ನೇ ವಿವರಿಸುವುದು.

ಮುಂದಿನ ಅಧ್ಯಾಯಗಳಲ್ಲಿ ತ್ರೈರಾಶಿ, ಪಂಚರಾಶಿ, ಸಪ್ತರಾಶಿ, ನವರಾಶಿ ಮುಂತಾದ ವಿವಿಧ ನಿಷ್ಪತ್ತಿ ಅನುಪಾತಗಳಿಗೆ(Ratio, proportion, Compound proportion) ಬಿಸ್ತರಾಶಿಗೆ (Inverse proportion), ನಿಷ್ಪತ್ತಿಗಳಿಗೆ ಅನುಸಾರವಾಗಿ ವಿಭಜನೆಗೆ (Proportinate Division) ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಕೊಟ್ಟಿದೆ. ಮಾತ್ರವಲ್ಲ ಲಾಭನಷ್ಟ, ಬಡ್ಡಿ, ವೇಗ, ದೂರ, ಮುಂತಾದುವುಗಳಲ್ಲಿ ಅನೇಕ ಲೆಕ್ಕಗಳನ್ನು ಕೊಟ್ಟಿದೆ. ಸಾಮಾನ್ಯ ಜೀವನಕ್ಕೆ ಬೇಕಾಗುವ ಕೂಡಿಸುವುದು, ಕಳೆಯುವುದು, ಗುಣಿಸುವುದು, ಭಾಗಿಸುವುದು - ಎಂಬೀ ಸುಲಭ ಸರಳ ವಿಧಾನಗಳಲ್ಲಿದೆ, ಶ್ರೇಣಿ (Arithmetic Progression) ಸೂತ್ರಜ್ಞಾನವನ್ನೊಳಕೊಂಡ ಪ್ರಶ್ನೆಗಳನ್ನು ಕೊಟ್ಟಿದೆ

ಉದಾಹರಣೆ (ಪು 91).

ಕರಿನೊಱೆಂಟುಮನೆಯ್ದು ಕಾವದಿವಸಕ್ಕೊಂದೊಂದು ಗದ್ಯಾಣಮಂ |
ಸ್ಥಿರಮಾವೆಂ ನಿನಗೆಂದದಗ್ಗದ ದಿವಸಕ್ಕೊಂದಾನೆಯುಂ ಮಾಱಲಾ ||
ಕರಿಯಾರೋಹಕನಿಪ್ಪತಯ್ದುದಿವಸಂ ಕಾಯ್ದೊಲ್ಲೆನೆಂದಾಗಳ್ |
ಬ್ಬರ ಸಂವಾದದ ಲೆಕ್ಕಮಂ ತಿಳಿಪಿದಂ ನಿರ್ವ್ಯಾಜದಿಂ ಭಾಸ್ಕರಂ ||

ವಿವರಣೆ—ಒಬ್ಬ ಶ್ರೀಮಂತ 108 ಆನೆಗಳನ್ನು ಕಾಯುವುದಕ್ಕೆ ಒಬ್ಬ ಕರಿಯಾರೋಹಕನನ್ನು ದಿವಸಕ್ಕೊಂದು ಗದ್ಯಾಣ ಕೂಲಿಯ ದರದಲ್ಲಿ ನೇಮಕ ಮಾಡುತ್ತಾನೆ. ಆದರೆ ಆತ ದಿವಸಕ್ಕೊಂದಾನೆಯನ್ನು ಮಾರುತ್ತಾ ಬರುತ್ತಾನೆ. ಹೀಗ 25 ದಿನಗಳ ಕೆಲಸವಾಗುವಾಗ ಕರಿಯಾರೋಹಕನು ಇನ್ನು ತಾನು ಕೆಲಸ ಮಾಡಲೊಲ್ಲೆನೆಂದು ಬಿಟ್ಟನು. ಹಾಗಾದರೆ ಆ 25 ದಿವಸಗಳ ಕೆಲಸಕ್ಕೆ ಈ ಶ್ರೀಮಂತ ಆ ಮಾಹುತನಿಗೆ ಎಷ್ಟು ಕೊಡಬೇಕೆಂಬುದು ಪ್ರಶ್ನೆ. ಇಲ್ಲಿ ಗಮನಿಸಬೇಕು-ಎಲ್ಲ 25 ದಿನಗಳಲ್ಲಿ ಮಾವುತ 108 ಆನೆಗಳ ಕಾವನ್ನು ಮಾಡಿರಲಿಲ್ಲ. ಮೊದಲನೆಯ ದಿನ 108, ಎರಡನೆಯ ದಿನ 107 106, 105.... . ಹೀಗೆ ದಿನಕ್ಕೆ ಒಂದು ಕಡಿಮೆಯಾಗುತ್ತಾ ಹೋಗುತ್ತಿದೆ. 25ನೆಯ ದಿನ ಈತ ಕಾದದ್ದು 84 ಮಾತ್ರ.

ಇದನ್ನು ಮಾಡಲು ಈ ಸೂತ್ರವನ್ನು ಹೇಳಿದೆ.

ದಂತಿಯೊಳೊಂದನೊಂದಿಸಿ ದಿನಂಗಳನೊತ್ತುವುದಾದಿನಂಗಳಂ
ಸಂತತ ವರ್ಗಿಸುತ್ತೆ ದಿವಸಂಗಳನೊಂದಿಸು ಅರ್ಧಿಸುತ್ತಮುಂ |
ತಂತದ ಸೋದಿಸಲ್ಕುಳಿದ ಶೇಷಮುಮಂ ಗುಣಿಸಂತೆ ಕೂಲಿಯುಂ
ದಂತಿಯೊಳಿಂಬಿನಿಂ ತೆಗೆಯೆ ಭಾಸ್ಕರನೋಜೆಯೆ ಬರ್ಕುಮಾಪಳಂ

ಸೂತ್ರವಿವರಣೆ, ಕರಿ 108ಕ್ಕೆ 1ನ್ನು ಕೂಡಲು 109. ಈ 109ನ್ನು ಕಡೆಯ ದಿನ 25 ರಿಂದ ಗುಣಿಸಲು 2725. [ಇಲ್ಲಿ 108, 107 .. ಇತ್ಯಾದಿ ತೆಗೆದುಕೊಳ್ಳಬೇಕಾದಲ್ಲಿ, ಹೀಗೆ $109 \times 25$ನ್ನು ತೆಗೆದುಕೊಂಡುದರಿಂದ $1+2+3+4+5+\cdots+24+25$ ಹೆಚ್ಚು ತೆಗೆದುಕೊಂಡ ಹಾಗಾಯಿತು. ಈ ಹೆಚ್ಚಿನ ಮೊತ್ತವನ್ನು 2725ರಿಂದ ಕಳೆಯಬೇಕು.] ಅದಕ್ಕೆ 25ನ್ನು ವರ್ಗಗೊಂಡು ಅದಕ್ಕೆ 25ನ್ನು ಕೂಡಿಸಿ, 650 ಮಾಡಿಕೊಂಡು, ಅದನ್ನು ಅರ್ಧಿಸಲು 325, ಇದನ್ನು ಹಿಂದಿನ 2725ರಿಂದ ಕಳೆಯಲು, 2400 ಬರುವುದು. ಅಂದರೆ 108 ಆನೆ

ಗಳನ್ನು 1 ದಿನ ಕಾಯುವುದು, 107ನ್ನು 1 ದಿನ ಕಾಯುವುದು, 106ನ್ನು 1 ದಿನ... ಇತ್ಯಾದಿಗೆ 2400 ಆನೆಗಳನ್ನು 1 ದಿನ ಕಾಯುವ ಕೆಲಸಕ್ಕೆ ಸಮ, ಇನ್ನು ಮುಂದಿನದು ಸುಲಭ ತ್ರೈರಾಶಿಕ. 108 ಆನೆಗಳಿಗೆ (1 ದಿನ) ಕಾದರೆ ಕೂಲಿ ಗ 1

2400 ,, ಗ ?

ಲಬ್ಧ $\frac{2400}{108}=\frac{200}{9}=$ ಗ.22 ವೀ......

ವಿ. ಸೂ: ಇಲ್ಲಿ $1+2+3+\dots+25$ನ್ನು ಕೂಡಿಸಲು ಉಪಯೋಗಿಸಿದ ಸೂತ್ರ ಬಹಳಪ್ರೌಢವಾದುದು. $\frac{25^2+25}{2}$ ಇದು ಇಂದು ಬೀಜಗಣಿತದಲ್ಲಿ ಮೊದಲಿನ n ವರಿಸೆಯಾದ ಸಂಖ್ಯೆಗಳ ಮೊತ್ತವನ್ನು ಕಂಡು ಹಿಡಿಯಲಿರುವ $s=\frac{n(n+1)}{2}=\frac{n^2+n}{2}$ ಎಂಬ ಸೂತ್ರವೆಂಬುದನ್ನು ಗ್ರಹಿಸುವಾಗ ಎಷ್ಟು ಸಂತೋಷವಾಗುತ್ತದೆಂದು ಹೇಳಲಳವಲ್ಲ.

ಮನೋಹರವಾದ ಆಯವ್ಯಯಗಳ ಲೆಕ್ಕ ಕೊಟ್ಟಿದೆ. ಪು 90ರಲ್ಲಿ ''ಕ್ಷಿತಿಪತಿ ವಿಷ್ಣು ಬೀಡಿನೊಳಗೊರ್ವ ವಣಿಕ್ಸುತನಾದಿನಂ ಪ್ರತಿ 16 ಹೊನ್ನನ್ನು ಪಡೆದು, ಹತ್ತು ದಿನಗಳಲ್ಲಿ 60 ಹೊನ್ನು ವ್ಯಯ ಮಾಡುತ್ತಿದ್ದನಂತೆ. ಹಾಗಿದ್ದರೆ ಲಕ್ಷ ಹೊನ್ನನ್ನುಳಿಸಲು ಆತನಿಗೆ ಎಷ್ಟು ಕಾಲ ಬೇಕೆಂಬ ಪುಟ್ಟ ಪ್ರಶ್ನೆ.

| | |
|---|---|
| ದಿನ ೧ | ದಿನ ೧೦ |
| ಆಯ ೧೬ | ಬೀಯ ೬೦ |

ಇಲ್ಲಿ ಆಯದ ದಿನ 1ನ್ನು ಬೀಯ 60ರಿಂದ ಗುಣಿಸಲು 60, ಬೀಯವ ದಿನ 10ನ್ನು ಆಯ ದಿನ 16ರಿಂದ ಗುಣಿಸಲು $10\times16=160$ ಈ 160ರೊಳಗೆ 100 ಕಳೆಯಲು, 60, ಇದ ಬೇರಿರಿಸಿ, ಲಕ್ಷವನ್ನು ಬೀಯುದ 10ರಿಂ ಗುಣಿಸಲು, 1000000, ಇದನ್ನು 100ರಿಂ ಭಾಗಿಸಲು ಬಂದುದು ದಿನ. ಲಬ್ಧ ವರುಷ ೨೭, ತಿಂಗಳು ೯, ದಿನ ೧೦.

ಸಮಯ ದೂರ (Time & Distance) ಲೆಕ್ಕಗಳಲ್ಲಿ ಇಬ್ಬರ ಗತಿವೇಗಗಳನ್ನೂ, ಹೊರಡುವ ಸಮಯಗಳನ್ನೂ ಕೊಟ್ಟು ಇಬ್ಬರ ಸಂಯೋಗ ಕಾಲದೂರಗಳನ್ನುಕೇಳುವುದೇ ಮುಂತಾದ ಅನೇಕ ವಿಧ ಪ್ರಶ್ನೆಗಳನ್ನು ಪು. 96–97ರಲ್ಲಿ ನೋಡಬಹುದು.

ವ್ಯಾಪಾರ ಲೆಕ್ಕಗಳಲ್ಲಿ ಲಾಭ, ನಷ್ಟ, ಮೊದಲು ಇತ್ಯಾದಿಯನ್ನು ಕಂಡು ಹಿಡಿಯುವ ಪ್ರಶ್ನೆಗಳನ್ನು ಕೊಟ್ಟಿರುತ್ತದೆ.

ಪು. 94ರಲ್ಲಿ ಹಡಗಿನಲ್ಲಿನ ಭಾರದ ಲೆಕ್ಕಗಳೂ ಅಲ್ಲಿ ಸರಾರಿ ತೆಗೆಯುವುದೂ ಬಂದಿವೆ. ಇಲ್ಲಿ ಒಂದು ವಿಚಿತ್ರವಾದ ಸೂತ್ರವುಂಟು.

ನುಡಿದಿರ್ದ ಛೈತ್ರಸಂಖ್ಯೆಯ |
ಗಡಣೆಯೊಳೊಂದೊಂದ ಕೂಡಿ ತದ್ವಿಗುಣಂಗೆ ||
ಯ್ದೊಡನೊಂದಂ ಕಳೆಯಲು |
ಕಡೆವರ ವಿಕ್ರಮದಿನಕ್ಕುಮದು ಸಮಭಾರಂ ||

ಹಡಗುಗಳು 5 ಇದ್ದರೆ, ಮೊದಲು ಇದ್ದ ಪ್ರಮಾಣ ಮೇಲಿನ ಸೂತ್ರ ಪ್ರಕಾರ $5+1=6$, $6\times2-1=11$, $11\times2-1=21$,

$21\times2-1=41$, $41\times2-1=81$: ಈ ಐದು ರಾಶಿಯನ್ನೂ ಕೂಡಲು 160. ಇದನ್ನು 5ರಿಂದ ಭಾಗಿಸಲು 32 ಸಮಭಾರ.

ಮಿಶ್ರ ಬಣ್ಣಾಂತರಕ್ಕೆ ಸೂತ್ರ (ಪು. 54):

ಇಲ್ಲಿ $12\frac{1}{2}$ ಬಣ್ಣದ 8 ಗದ್ಯಾಣವನ್ನು $7\frac{1}{2}$ ಬಣ್ಣದ 12 ಗದ್ಯಾಣಗಳೊಡನೆ ಕರಗಿಸಿ ಸೇರಿಸಿ ಮಿಶ್ರಣ ಮಾಡಿದ್ದಾರೆ. ಹಾಗಾದರೆ ಹೊಸ ಬಂಗಾರದ ಬಣ್ಣವೆಷ್ಟು?

ಬಣ್ಣಂಗಳ ಹಾಗವ ಮಾಡಿ ತಮ್ಮ ತಮ್ಮ ತೂಕದಿಂ ಗುಣಿಯಿಸಿ ಪ್ರತಿಯಿಟ್ಟು ಕೂಡುವುದು.

$12\frac{1}{2}$ಯ ಹಾಗ 50: ಗುಣಿಸು 8; 400 }
$7\frac{1}{2}$ ,, 30; ಗುಣಿಸು 12, 360 } 760

ಈ 760ಕ್ಕೆ ಒಟ್ಟು ತೂಕದಿಂದ (20) ಭಾಗಿಸುವುದು. 38 (ಹಾಗ) ಹಾಗಾದರೆ ಮಿಶ್ರಣದ ಬಣ್ಣ $9\frac{1}{2}$,

ಇನ್ನೂ ಅನೇಕ ಮನೋಹರವಾದ ಉದಾಹರಣೆಗಳನ್ನು ಈ ಗ್ರಂಥದುದ್ದಕ್ಕೂ ಕಾಣಬಹುದು.

ಈ ಉದಾಹರಣೆಗಳಿಂದ ಅಂದಿನ ಕರ್ಣಾಟಕದಲ್ಲಿನ ವ್ಯವಹಾರ ವಾಣಿಜ್ಯಗಳ ಚಿತ್ರ ಸುಂದರವಾಗಿ ಕಣ್ಣುಮುಂದೆ ಕಟ್ಟಿದಂತಿದೆ. ಜವುಳಿ, ಮುತ್ತು, ರತ್ನ, ವಜ್ರಗಳು, ಹೊನ್ನು, ಬೆಳ್ಳಿ, ತಾಮ್ರ ಇತ್ಯಾದಿಲೋಹಗಳು, ಗೋಧಿ, ನೆಲ್ಲು, ತೊಗರಿ, ಕಡಲೆ, ಜೋಳ, ಎಳ್ಳು, ಕಬ್ಬು, ಹಾಲು, ತುಪ್ಪ, ಎಣ್ಣೆ, ಎಲೆ, ಅಡಕೆ–ಇವುಗಳ ಕೊಂಡುಕೊಳ್ಳುವಿಕೆ ಮಾರಾಟಗಳ ವಿವರಗಳು ಅಲ್ಲಲ್ಲಿ ಸಹಜವಾಗಿ ಬಂದಿವೆ. ಅಂದಿನ ತೂಕ ಅಳತೆಗಳ ಮತ್ತು ಬೆಲೆಗಳ ವಿಚಾರವನ್ನು ಸರಿಯಾಗಿ ವಿಮರ್ಶಿಸಿದಲ್ಲಿ ವಿವಿಧ ವಸ್ತುಗಳಿಗೆ ಅಂದಿನ ಪೇಟೆ ಧಾರಣೆ ಹೇಗಿದ್ದಿರಬೇಕೆಂಬುದೂ ತಿಳಿದುಬರುವುದು ಮಾತ್ರವಲ್ಲ ಅಂದು ದವಸಗಳನ್ನು ಹೆಚ್ಚಾಗಿ ವಿನಿಮಯದ ಮೂಲಕ ಕೊಂಡುಕೊಳ್ಳುತ್ತಿದ್ದರೆಂಬುದನ್ನು ತಿಳಿಯಬಹುದು. ಪು 25ರಲ್ಲಿ ಸೂತ್ರ 47ರಲ್ಲಿ: 6 ಖಂಡುಗ ಕಡಲೆಗೆ 7 ಖಂಡುಗ ತೊಗರಿ ಅಂದು "ನಡೆವ ಅರ್ಘ" ವಂತೆ. 60 ಖಂಡುಗ ಭತ್ತವನ್ನು ಕುಟ್ಟಿದರೆ 35 ಖಂಡುಗ ಚಿಲ್ಲರೆ ಕೊಳಗ ಅಕ್ಕಿ ಬರುವುದಂತೆ. 60 ಖಂಡುಗ ಎಳ್ಳಿನಿಂದ 14 ಖಂಡುಗ $1\frac{1}{4}$ಕೊಳಗ ಎಣ್ಣೆ ಲಭಿಸುವುದಂತೆ. ಅಲ್ಲದೆ ವ್ಯಾಪಾರದಲ್ಲಿ ಮೋಸವೂ ಇತ್ತೆಂಬುದಕ್ಕೆ ಹೆಚ್ಚಿನಕೊಳಗದಲ್ಲಿ ಕೊಂಡು ಕಮ್ಮಿಯ ಕೊಳಗದಲ್ಲಿ ಮಾರಿದ ಉದಾಹರಣೆಗಳೂ ಇವೆ.

ಇವಲ್ಲದೆ ಊರಿಂದೂರಿಗೆ ಅಳತೆಗಳಲ್ಲಿದ್ದ ವ್ಯತ್ಯಾಸಗಳನ್ನೂ ಕಾಣಬಹುದು. ಒಂದೂರಿನಲ್ಲಿ ಅಳೆದುಕೊಂಡು ಇನ್ನೊಂದೂರಿಗೆ ಹೋಗಿ ಅಲ್ಲಿನ ಚಿಕ್ಕದಾದ ಅಥವಾ ದೊಡ್ಡದಾದ ಅಳತೆ ಪಾತ್ರಗಳಲ್ಲಿ ಅಳೆದರೆ ಎಷ್ಟಾಗುವುದೆಂಬ ಪ್ರಶ್ನೆಗಳೂ ಉಂಟು.

ಇದರಲ್ಲಿ ಹೇಳಿದ ಕೆಲವು ಕೋಷ್ಟಕಗಳನ್ನು ಇಲ್ಲಿ ಕೆಳಗೆ ಕೊಟ್ಟಿದೆ.

| | | | | |
|---|---|---|---|---|
| 1 | ಖಂಡುಗ | = | 4 | ಪಂಚಕ |
| 1 | ಪಂಚಕ | = | 5 | ಕೊಳಗ |
| 1 | ಕೊಳಗ | = | 4 | ಬಳ್ಳ |
| 1 | ಬಳ್ಳ | = | 4 | ಮಾನ |
| 1 | ಮಾನ | = | 4 | ಸೊಲ್ಲಿಗೆ |
| 1 | ಸೊಲ್ಲಿಗೆ | = | 4 | ಗಿದ್ದಗೆ |

| | | | | |
|---|---|---|---|---|
| 1 | ಭಾರ | = | 20 | ತೊಲ |
| 1 | ತೊಲೆ | = | 5 | ಬೀಸಗೆ |
| 1 | ಬೀಸಗೆ | = | 20 | ಪಲ |
| 1 | ಪಲ | = | 4 | ಕರ್ಷ |
| 1 | ಕರ್ಷ | = | 4 | ಸುವರ್ಣ |

| | | | | |
|---|---|---|---|---|
| 1 | ಯೋಜನ | = | 4000 | ಕ್ರೋಶ |
| 1 | ಕ್ರೋಶ | = | 2C00 | ದಂಡ |
| 1 | ದಂಡ | = | 4 | ಮೊಳ |
| 1 | ಮೊಳ | = | 2 | ಗೇಣು |
| 1 | ಗೇಣು | = | 12 | ಬೆರಳು |

| | | | | |
|---|---|---|---|---|
| 4 | ಕಾಣಿ | = | 1 | ವೀಸ |
| 5 | ವೀಸ | = | 1 | ಹಾಗ |
| 4 | ಹಾಗ | = | 1 | ಹಣ |
| 10 | ಹಣ | = | 1 | ಗದ್ಯಾಣ |

ಈ ಗ್ರಂಥದಲ್ಲಿ ಅಲ್ಲಲ್ಲಿ ಬರುವ ಅಚ್ಚಗನ್ನಡ ಪದ ಪ್ರಯೋಗಗಳು ಬಹಳ ಅಮೂಲ್ಯವಾಗಿವೆ. ಮೊದಲು (Principal), ಕೊಟ್ಟಣ ಇತ್ಯಾದಿ.

ಈ ಗ್ರಂಥ ಪ್ರಕಾಶನಕ್ಕೆ ಅಪ್ಪಣೆಯಿತ್ತು ಎಲ್ಲ ವಿಧದಿಂದ ಸಹಕರಿಸಿದ ಮದ್ರಾಸು ಸರ್ಕಾರಕ್ಕೂ, ಆ ಕುರಿತು ಪ್ರಾಚ್ಯಪುಸ್ತಕಭಂಡಾರದ ಕ್ಯೂರೇಟರಾದ ಶ್ರೀ ಟಿ. ಚಂದ್ರಶೇಖರ ಅಯ್ಯರ್ ಎಂ. ಎ. ಎಲ್. ಟಿ. ಅವರಿಗೂ ಇದರ ಪರಿಶೋಧನೆಯಲ್ಲಿ ಸಹಕರಿಸಿದ ಶ್ರೀ ಪಂಡಿತ ಎಚ್. ಶೇಷಯ್ಯಂಗಾರ್ಯರಿಗೂ ಇದನ್ನು ಅಂದವಾಗಿಮುದ್ರಿಸಿ ಕೊಟ್ಟ ಶ್ರೀವತ್ಸ ಪ್ರೆಸ್ಸಿನವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಇತಿ,

ಮದ್ರಾಸು. ಎಂ. ಮರಿಯಪ್ಪಭಟ್ಟ,

25—7—55 ಸಂಪಾದಕ.

# INTRODUCTION

The history of Kannada literature dates back to the 5th century A. D., the auspicious century which produced the Halmidi Sasana. Before that date, undoubtedly, Kannada poets did flourish, but precious little is known about that dark period. Literature and history are silent over the dim beginnings. However, it is held on all quarters that next toTamil Kannada is the oldest of the cultivated languages of South India.

Kannada literature is vast and varied. Besides innumerable poetical and prose works of great literary value, there are to be found a host of scientific treatises on subjects so diverse as Mathematics, Medicine, Veterinary Science, Astronomy, Cookery, Omens, Palmistry, Music, General Knwoledge and the like.

Kirtivarma, a Chalukya prince (1100 A. D) was the pioneer in scientific literature in Kannada and his work "Govaidya," holds an honoured place in the early development of veterinary science.

Chavundaraya's (1150 A D.) "Lokopakara,"* a mine of information on almost all useful topics under the sun, is practically a miniature encyclopaedia. Jagaddala Somanath's "Kalyana Karaka" (1175) and Mangaraja's Khagendra Manidarpana (1360) are considered to be great works on medicine. Under astronomy, Jataka Tilaka by Sridharacharya is a great work. In mathematics too, we have several interesting and useful works by eminent scholars like Rajaditya and Thimmarasa.

Almost all the scientific works are in the form of verse, thereby testifying to a rare combination of poetic genius and scientific knowledge.

The persent work Vyavahara Ganita as the very title suggests, is mainly commercial arithmetic of olden times having the following sections:

1. Technical terms.
2. Proportion - both direct and inverse.
3. Proportionate Division.
4. Mixture.
5. Interest.
6. Profit and Loss.
7. Discount.
8. Miscellaneous.

*The mode of procedure*: In almost every topic the principle is first stated and this is followed by a good number of problems bearing on that principle. All these are set in Kanda metre. Every problem is followed by a brief analysis with the answer which is always termed "labdha." If one has not been able to follow this brief analysis, a fairly clear explanation under the title "tika" is appended. But the terminology employed in several of these operations being archaic for the modern student, it requires some effort to grasp the subject dealt herein. Terms such as Haga, Kagini, Pana, Pon under coins, Sollige, Mana, balla, Kolaga, Khanduga under measures,

---

*This work has been recently edited by Pandit Sri H. Sesha Ayyangar and published under the auspices of the Government Oriental MSS. Library, Madras.

Suvarna, Karsha, Panam, Bisige, Tole, Bhara under weights are not in vogue today. In many problems, due to the imperfect knowledge of the subject on the part of the scribe, mistakes have crept in and consequently they are unintelligble.

Just to have an idea of the weights and measures employed in the Karnataka of the 12th century, the following tables (detailed in the Text) are given below :-

**MEASURES**

| | | | | |
|---|---|---|---|---|
| 1 | Khanduga | is equal to | 20 | Kolagas |
| 1 | Kolaga | ,, | 4 | Ballas |
| 1 | Balla | ,, | 4 | Manas |
| 1 | Mana | ,, | 4 | Solliges |
| 1 | Sollige | ,, | 4 | Giddiges |

**WEIGHTS**

| | | | | |
|---|---|---|---|---|
| 1 | Bhara | is equal to | 20 | Tolas |
| 1 | Tola | ,, | 5 | Bisiges |
| 1 | Bisige | ,, | 20 | Palams |
| 1 | Palam | ,, | 4 | Karshas |
| 1 | Karsha | ,, | 4 | Suvarnas |

**LENGTH OR DISTANCE**

| | | | | |
|---|---|---|---|---|
| 1 | Yojana | is equal to | 4000 | Krosas |
| 1 | Krosa | ,, | 2000 | Dandas |
| 1 | Danda | ,, | 4 | Molas |
| 1 | Mola | ,, | 2 | Gens (Spans) |
| 1 | Gen | ,, | 12 | fingers (inches) |

**COINS AND FRACTIONS**

| | | | | |
|---|---|---|---|---|
| 1 | Pon | is equal to | 10 | Pana |
| 1 | Pana | ,, | 4 | Haga |
| 1 | Haga | ,, | 5 | Visa |
| 1 | Visa | ,, | 4 | Kagini |

**TIME**

| | | | | |
|---|---|---|---|---|
| 1 | Varsha (year) | is equal to | 12 | tingal |
| 1 | Tingal | ,, | 30 | dina |
| 1 | Dina | ,, | 8 | Jamas |
| 1 | Jama | ,, | $7\frac{1}{2}$ | Galiges |

For land measurements, terms such as, Pada, Kambha, Mattar have been employed.

Let us give our attention to two problems, by way of specimens. One is on Time and Work and the other is on Mixtures.

*Problem*: An employer engages 400 men to do a piece of work and agrees to pay them 9 gadyanas a day If after the first day one worker goes on dropping out each day, tell quickly, how much the workmen have to be paid at the end of a month :-

*Analysis:* 400 men - 1 day - 9 gadyanas : One man leaves each day. For 30 days, the total wages will be 260 gadyanas 2 panas.

*Explanation* : Add 1 to 400, i. e. 401. Multiply 401 by (the number of days) 30, i. e 12030. Then square 30, i. e. 900. Add 30 to this last; i. e. 930 Halve this; i, e, 465. Subtract this 465 from the previous 12030, you get 11565. Then multiply 11565 by 9, you get 104085. Divide this by 400; you arrive at the required answer, which is 260 gadyanas and odd.

In the working adopted here, we are unconsciously passing through an ingenious method involving the formula for the summation of natural numbers. The effective mumber of workmen is to be calculated

| | | | | |
|---|---|---|---|---|
| 1st day | 400 | men worked | | 2nd day 399 men worked |
| 3rd day | 398 | ,, | and so on .. ............... | |
| 29th day | 372 | ,, | | 30th day 371 men worked |

So, what is wanted is the sum of a series of thirty terms, running 400, 399, 398, 372, 371 The author begins by asking us to take 401, 401, 401... 401 and 401, thirty times (i. e., 401×30 i. e. 12030). But he knows that in so doing we have taken 1, 2, 3 29, 30 men too many, and they ought to be subtracted from 12030. How do we get at the sum of 1, 2, 3, 29, 30 ? The author asks us to square 30, add 30 to the product and divide the sum by 2. Expressed symbolically it comes to $(n^2+n) - 2$ which is nothing but our familiar formula for the sum of the first n natural numbers. This comes to 465. So, the effective work is that of (12030—465) i. e. 11565 men for 1 day.

The rest is easy proportion :

If 400 men for one day receive 9 gadyanas ?

What do 11565 men for 1 day receive in gadyanas ?

Let us now pass on to the second illustration.

*Problem:* 8 gadyanas of 12½ fineness are mixed together with 12 gad yanas of 7½ fineness. What is the fineness of the resulting mixture ?

*Analysis*: Convert 12½ fineness into *hagas* (quarters)=50. Multiply it by its weight 8 gadyanas The result is 400 units Convert 7½ into hagas=30. Multiply it by its weight, 12 gadyanas. The result is 360 units.

Total units 400+360=760
Total weight 12+8=20 gadyanas.

Fineness in quarters 760—20=38; *i. e.*, 38—4, *i. e.*, 9½.

This is just the way in which such problems are taught in a modern class room, except the *haga* step, i e. the conversion of the fineness into quarters. Perhaps this method of rounding off was adopted so as to avoid strain on the young fellows for whom the problem was propounded

The pupils' interest in the things around them was so keen that they took pains even to count the number of seeds in various fruits and inductively arrive at formulae for stating the number of seeds inside them. Scientific curiosity could not have been keener.

Rule to find the number of seeds in a certain fruit: Multiply the number of bold stripes in the fruit by 88, you get the number of seeds.

In a fruit having 9 stripes the number of seeds is 88×9, i. e., 792.

The work abounds in hundreds of problems, almost all taken from life. It enables us, incidentally, to have a peep into the socio-economic conditions obtaining in the Karnataka of the 12th century. Business flourished; ships carried cargo such as paddy, areca and cocoanut; big works were executed; coins were very much in circulation. Society was prosperous,—and, we hope, happy too.

## ABOUT THE AUTHOR

Rajaditya has given some details about himself in the Introductory Chapter. He is the first to write in Kannada on Mathematics and it is said that he wrote the following other works: Vyavaharaganita, Vyavahararatna, Lilavathi, Chitra Hasuge, Jaina Ganita Sutra Tikodaharana, ete. It is very unfortunate that none of these has so far been traced in a complete and correct form. Due to several hands handling this very useful subject and their making use of different works of Rajaditya as occasions arose, they have got mixed up in the main work Vyavaharaganita.

Rajaditya was a Jain. He wss so pre-eminent in his field of work that the titles of *Ganita Vilasa, Ojevedanga, Padydavidyadhara* were conferred on him. He was a native of Puvina Bage ( a place in North Karnataka) whose exact identity is not known now. He was a great scholar-poet in some royal court. From internal evidences (specially reference to Vishnuvardhana 1190, the Hoysala King) it has been established beyond any doubt that the date of composition of Vyavahara Ganita should be some time round about 1190.

The present work is based on three manuscripts D. No. 1419, 1422, 1478 and 1435 deposited in the Government Oriental Manuscripts Library, Madras. Special mention must be made of the encouragement given by the Government of Madras who sanctioned the publication of this useful Mathematical Work of the 12th century. Now it is my duty to thank Sri T. Chandrarekharan, M. A. L. T., the Curator of the Library for having given his hearty co-operation in the execution of this work and the Sri Vatsa Press for their neat printing and get-up.

Madras, **M. Mariappa Bhat,**

28th July, 1955. EDITOR.

|| ಶ್ರೀರಸ್ತು ||

ಶ್ರೀಪಂಚಗುರುಭ್ಯೋ ನಮಃ

# ವ್ಯವಹಾರಗಣಿತಂ-ರಾಜಾದಿತ್ಯವಿರಚಿತಂ ||

ಕಂ|| ಶ್ರೀಮದವಿಚಲಿತ ಲಕ್ಷ್ಮೀ |
ಪ್ರೇಮಂ ತ್ರೈಲೋಕ್ಯಧಾಮನಾನತಶಕ್ರ ||
ಸ್ತೋಮಂ ಸ್ವಾಧೀನಸುಖಂ |
ನೇಮಿಜಿನಂ ಮಾೞ್ಕೆ ನಮಗೆ ಬೋಧೋದಯಮಂ || ೧ ||

ಶ್ರೀಮನ್ನಮ್ರಸುರೇಂದ್ರ ಶಿ |
ಖಾಮಣಿ ಸುಖನಿಲಯನಮಲಕೇವಲ ಬೋಧಂ ||
ಸಾಮಜರಿಪುಪೀಠಂ ಶ್ರೀ |
ನೇಮಿಜಿನಂ ನಮಗೆ ಮಾೞ್ಕೆ ಮತಿವಿಕಸನಮಂ || ೨ ||

ಶ್ರೀಜಯಜಿತಾಂಗಜಂ ಸುರ |
ರಾಜಸಮಾಜಪ್ರಪೂಜ್ಯನಧಿಗತಬೋಧಂ ||
ಭ್ರಾಜಿಷ್ಣು ನೇಮಿಜಿನಪತಿ |
ರಾಜಾದಿತ್ಯಂಗೆ ಮಾೞ್ಕೆ ಸುಖಸಂಪದಮಂ || ೩ ||

ಕಮಲಾನಂದಕರಂ ನಿಜ |
ಕಮನೀಯಾಸನಪಯೋಜಕರನೆಂದೊಲವಿಂ ||
ಕಮಲಷ್ಟಿ ರಾಜವರ್ಮನ |
ವಿಮಲಮುಖಾಂಭೋಜದಲ್ಲಿ ಸಲೆ ನೆಲಸಿರ್ಪಳ್ || ೪ ||

ಚಂ|| ವನತತಿಯಿಂ ನದೀನದಕುಭೃತ್ಕುಲದಿಂ ಧನಧಾನ್ಯವರ್ಗದಿಂ |
ಜನಪದರಾಜಿಯಿಂ ಬೆಳೆವ ಕೆಯ್ವೊಲದಿಂದೆಸೆವೂರ್ಗಳಿಂ ಜಗ |
ಜ್ಜನನುತಜೈನಧರ್ಮದ ನೆಗೞ್ತೆಯೊಳಿಂಬಿನ ಕೊಂಡಿಮಂಡಲ |
ಕ್ಕನುಪಮರತ್ನಮಂಡನಮೆನಿಪ್ಪುದು ಪೂವಿನಬಾಗೆ ಸಂತತಂ || ೫ ||

ಉ|| ಆವೆಡೆಯೊಳ್ ಮನಂಬಯಸಿ ಪಾಂಥಜನಂ ನಿಲಲಲ್ಲಿಗಲ್ಲಿಗ |
ಬ್ಜಾವಳಿಯಲ್ಲಿಗಲ್ಲಿಗೆ ಸುಸೌರಭದಿಂದೆಸೆದಿರ್ಪ ಪುಷ್ಪವಾ ||
ಟಾವಳಿಯಲ್ಲಿಗಲ್ಲಿಗೆ ನವಭ್ರಮರಾವಳಿ ಹಂಸಭೃಂಗಕೇ |
ರಾವಳಿಯಿಂದಮೊಪ್ಪುವುದು ಬಾಗೆಯದೊಂದುಮಹೀಪ್ರದೇಶದೊಳ್ || ೬ |

ಮ|| ಪೊಸಪೊಂಗೇದಗೆ ಜಾಜಿ ಪಾದರಿ ಲಸತ್ಸೇವಂತಿ ನೀಲಾಬ್ಜಮು |
ದ್ಭಸರೋಜಂ ಸುರಹೊನ್ನೆ ಸಂಪಗೆ ನವೋದ್ಯನ್ಮಲ್ಲಿಕಾದಿಪ್ರಸೂ ||
ನಸಮೂಹಂ ತನಿಗಂಪನೆಣ್ದೆಸೆಗೆ ಸಿಚ್ಚಂ ಬೀಱಲನ್ವರ್ಥಮಾ |
ಗೆಸೆಗುಂ ಪೂವಿನಬಾಗೆಯೆಂಬ ಪೆಸರಿಂದಿಂಬಾಗಿ ಚೆಲ್ವಾಗಿರಲ್ ||೭||

ಕಂ|| ವಿನುತರ್ ನೀತಿವಿದರ್ ಕರ |
ಮನುನಯದಿಂ ದಾನಧರ್ಮವಿವಿಧಾಕಾರರ್ ||
ಧನಕನಕ ಸಮೃದ್ಧರ್ ಪೂ |
ವಿನಬಾಗೆಯ ವಿಪ್ರವೈಶ್ಯಶೂದ್ರಾದಿ ಜನಂ || || ೮ ||

ಚಾಗದ ಚಲದ ನೆಗೞ್ತೆಯ |
ಭೋಗದ ಮಾನ್ಯತೆಯ ಜೈನತನದ ಮಹತ್ವ ||
ಕ್ಕಾಗರಮೆನೆ ಗಾರ್ಹಸ್ಥ್ಯಂ |
ಬಾಗೆ ನಿಜಾನ್ವಯದ ಜನ್ಮಭೂಮಿಯೆನಿಕ್ಕುಂ || ೯ ||

ಮ ಸ್ರ|| ಜಿನನಾಥಂ ನೇಮಿನಾಥಂ ನಿಜಗುರು ಶುಭಚಂದ್ರೋತ್ತಮಂ ತಂದೆ ಸರ್ವಾ |
ವನಿಸಂಸ್ತುತ್ಯಾಸ್ಪದಂ ಶ್ರೀಪತಿ ಜನನಿ ವಸಂತಾಖ್ಯೆ ತನ್ನಗ್ರಜಂ ಶಾಂ |
ತನುಮಂತಾಯೋಗಮಂ ಬಾಹುಬಲಿ ಭರತರಾತ್ಮೀಯರುಂ ತಾಮೆನಲ್ ಭಾ ||
ಪ್ಪೆನೆ ರಾಜಾದಿತ್ಯನೇಂ ಧನ್ಯನೊ ವಿಶದಯಶಂ ಸದ್ಗುಣಾಂಭೋಧಿಚಂದ್ರಂ || ೧೦ ||

ಅನುರೂಪಂ ಸತ್ಯವಾಕ್ಯಂ ಪರಹಿತಚರಿತಂ ಸುಸ್ಥಿರಂ ಭೋಗಿ ಗಂಭೀ |
ರನುದಾರಂ ಸಚ್ಚರಿತ್ರಂ ಸೊಬಗನಖಿಲವಿದ್ಯಾವಿದಂ ಭವ್ಯಸೇವ್ಯಂ ||
ಜನತಾಸಂಸ್ತುತ್ಯನುರ್ವೀಶ್ವರನಿಕರಸಭಾಯೋಗ್ಯನೆಂದಾಗಳುಂ ಮೇ |
ದಿನಿ ರಾಜಾದಿತ್ಯನಂ ಬಣ್ಣಿಪುದಱಿಂದೊಲವಿಂ ಸಂತತೋತ್ಸಾಹದಿಂದಂ || ೧೧ ||

ಕಂ|| ಎನಿಸಿದ ಗುಣಿ ರಾಜಾದಿ |
ತ್ಯನ ವಿರಚಿತಮಪ್ಪ ಗಣಿತತತ್ವಜ್ಞತೆಯಿಂ ||
ಜನತೋಪಕಾರದೊಳ್ಮೆಱೆ |
ವನೆನಲ್ ವ್ಯವಹಾರಗಣಿತಮೆನೆ ಮೆಚ್ಚದರಾರ್ || ೧೨ ||

ಧಾರುಣಿಯೊಳ್ ಸಕಲಬುಧಾ |
ಧಾರಮೆನಲ್ ಸ್ವಲ್ಪಮಾಗಿಯುಂ ವ್ಯವಹಾರಾ ||
ಧಾರಮೆನಲ್ ಸಾರಮೆನಲ್ |
ಶ್ರೀರಾಜಾದಿತ್ಯನೞ್ತಿಯಿಂ ವಿರಚಿಸಿದಂ || ೧೩ |

ಕಂ || ಪಿರಿದಂ ಪೇೞ್ವೊಡೆ ಸಾಲದೆ |
ಪುರಾತನರ ಗಣಿತವೊಂದೆ ಪಲಕಾಲಂ ಬೆ ||
ಚ್ಚರಮೋದಿ ಕಿಱಿದಱಿಂ ವ್ಯವ |
ಹರಿಸಲ್ ವ್ಯವಹಾರಗಣಿತಮಂ ವಿರಚಿಸಿದಂ || ೧೪ ||

ಕಾಗಿಣೆ ವೀಸಂಗಳನನು |
ರಾಗದೆ ಭಾಗಿಪ ಫಲಂ ಬರಲ್ ಗುಣಕಾರೋ ||
ದ್ಯೋಗದೊಳೆ ತಕ್ಕುಮೆನೆ ಮತಿ |
ಸಾಗರಮಾರಳವೊ ರಾಜವರ್ಮೋತ್ತಮನಾ || ೧೫ .|

ಲೆಕ್ಕದ ಕವಿತೆಯ ಬಲ್ಮೆ ಜ |
ಗಕ್ಕೆಸೆದಿರೆ ಸಕಲಗಣಿತಮಾಗ್ರಂಥದೊಳಂ ||
ತೆಕ್ಕನೆ ತೀವಿರಲಯ್ದು ದಿ |
ನಕ್ಕಂ ನೆಱೆ ಪೇೞ್ವನಲ್ತೆ ರಾಜಾದಿತ್ಯಂ || ೧೬ ||

ಉದಧಿಪರೀತಾವನಿ ಕೋ |
ವಿದರೆಲ್ಲಂ ಪೊಗೞೆ ಸುಕವಿ ರಾಜಾದಿತ್ಯಂ |
ಮೃದುಪದ ವಿಲಾಸಮೆಸೆಯ |
ಲ್ಕಿದು ಜಿನಪದಕಮಲಮಧುಕರಂ ವಿರಚಿಸಿದಂ || ೧೭ ||
ಆಶ್ರಿತಕಲ್ಪಮಹೀಜಂ
ವಿಶ್ರುತಭೂಭುವನಕೀರ್ತಿ ಶಿಷ್ಟೇಷ್ಟಜನ್ನೈ |
ಕಾಶ್ರಯನಮಳ ಚರಿತ್ರಂ |
ಮಿಶ್ರವ್ಯವಹಾರ ಗಣಿತಮಂ ವಿರಚಿಸಿದಂ || ೧೮ ||

ಕಾಗಿಣೆಗಳಂ ಹಾಗಂ ಮಾೞ್ಪುದರ್ಕೆ ಸೂತ್ರಂ:—

ಕಂ|| ಒದವಿದ ಕಾಗಿಣೆಗಳೊಳಂ |
ತದನೆ ದಶಸ್ಥಾನಮಿರಿಸಿ ಪೆಱಗಣಮಂ ಬಾ ||
ಣದಿನಿಱಿಯೆ ಪಾಗಮುಗಲಿ |
ರ್ದುದಾ ಕಾಗಿಣೆ ಕಾಗಿಣೆಯೆಂದನಲ್ತೆ ರಾಜಾದಿತ್ಯಂ || ೧೯ |

ವೀಸಂಗಳಂ ಹಾಗವ ಮಾಡುವುದಕ್ಕೆ ಸೂತ್ರಂ:—

ಕಂ|| ವೀಸದ ರಾಸಿಯೊಳಂತ್ಯದ |
ರಾಸಿಯನಗಲಿಟ್ಟನುನಯದಿಂ ಗುಣಿಯಿಸಲಾ ||
ವೀಸದ ರಾಸಿಯೆ ಹಾಗದ |
ರಾಸಿಗಳಂ ಕಂಡನಲ್ತೆ ರಾಜಾದಿತ್ಯಂ || ೨೦ ||

ವೀಸಂಗಳಂ ಪಣಂ ಮಾಳ್ಪುದಕ್ಕೆ ಸೂತ್ರಂ:—

ಕಂ|| ಪದೆದಿರ್ದ ವೀಸದಂಕದೊ |
ಳೊದವೆ ದಶಸ್ಥಾನದಂಕಮಂ ಬೇಱಿಟ್ಟಾ ||
ನಿಧನವ ಶರಹರಿಪಣ ಕುಂ |
ದದೆ ನಿದುವೆ ವೀಸವೆಂದ ರಾಜಾದಿತ್ಯಂ || ೨೧ ||

ಪಾಗಂಗಳಂ ಪಣಂ ಮಾಡುವುದಕ್ಕೆ ಸೂತ್ರಂ:—

ಕಂ|| ಪಾಗದ ರಾಶಿಯೊಳಂತಮ |
ನಾಗಳೆ ಬೇಱಿಟ್ಟು ಬಾಣಹತಿಗೆಯ್ದರ್ಧಂ ||
ಭಾಗಿಸೆ ಪಣವೀ ತೆಱದಿಂ |
ಪಾಗಂಗಳ್ ಪಣಮುಮತ್ತೆ ರಾಜಾದಿತ್ಯಂ || ೨೨ ||

ಪರಿಭಾಷಾಸೂತ್ರಂ:—

ಮ ಸ|| ಪಣವೇ ವೊಂಭತ್ತು ಪತ್ತೆಂಟುವರೆ ಎನಿಪ ನಾನಾವಿಧಂ ಪೊಂಗಳಾಗಲ್ |
ಗಣಿತಕ್ಕೆಲ್ಲಂದದಿಂದಂ ವ್ಯವಹರಿಪೊಡವಂಗಕ್ಕುಮಂತಾಗೆ ಪತ್ತುಂ ||
ಪಣದಿಂ ಪೊನ್ನಕ್ಕುಮಾಗಳ್ ವ್ಯವಹರಣದೊಳೀ ಗ್ರಂಥದೊಳ್ ತಾನಿವೆಂದುಂ |
ಗಣಿತಜ್ಞರ್ ಮೆಚ್ಚಲುಂ ಭಾವಿಸಲುಮಱಿಯಲುಂ ಪೇಳ್ದನೀ ರಾಜವರ್ಮಂ || ೨೩

ಕಂ|| ಅಂತುಂ ಕಾಣಿಯು ನಾಲ್ಕಿರ |
ಲಂತದುವೇ ವೀಸಮೈದು ವೀಸಂ ಹಾಗಂ ||
ಪಣಮಾ ಹಾಗಂ ನಾಲ್ಕುಂ |
ಪಣ ಪತ್ತಾಗಿರೆ ಸಮನಿಸಿರ್ಕು ಗದ್ಯಾಣಂ || ೨೪ ||

ನಾಲ್ಕುಂ ಸುವರ್ಣ ಕರ್ಷಂ |
ನಾಲ್ಕುಂ ಕರ್ಷಂ·ಪಲಮಾ ದಶದ್ವಯಪಲದಿಂ ||
ನಿಲ್ಕುಂ ಬೀಸಿಗೆ ಬೀಸಿಗೆ |
ಪಂಚಕದೊಳ್ ತೊಲೆಯಿಪ್ಪತ್ತುತೊಲೆಗಳಕ್ಕುಂಭಾರಂ || ೨೫ ||

ಗತಿಗಿದ್ದನೊಂದು ಸೊಲ್ಲಗೆ |
ಗತಿಸೊಲ್ಲಗೆಯದುವೆ ಮಾನಮಾ ಗತಿಬಳ್ಳಂ ||
ಗತಿಬಳ್ಳಂ ಕೊಳಗಂ ಐಂ |
ಶತಿಕೊಳಗಂ ಖಂಡುಗಂಗಳಳತೆಯೊಳೆಲ್ಲಂ || ೨೬ ||

ವರುಷ ಪರಿಭಾಷಾ ಸೂತ್ರಂ—

ಕಂ|| ಅಱುವತ್ತುಗಳಿಗೆಗಳ್ ತಾಂ |
ನೆಱೆದೊಡಹೋರಾತ್ರಿಯಾ ದಿನಂಗಳ್ ಮೂವ ||
ತ್ತಱೊಳೊಂದು ಮಾಸ ಮಾಸಂ |
ನೆಱೆ ಪನ್ನೆರಡಾದೊಡಂತದಕ್ಕುಂ ವರುಷಂ || ೨೭ ||

ಯೋಜನಪರಿಭಾಷಾಸೂತ್ರಂ:—

ಬೆರಳೀರಾಱನೆ ಗೇಣುಂ |
ಎರಡಾಗಲ್ ಮೊೞನೆ ಹಸ್ತನಾಲ್ಕೆನೆ ದಂಡಂ ||
ತೆರಡುಸಹಸ್ರಂ ಕ್ರೋಶಂ |
ಶರಧಿಕ್ರೋಶಂಗಳೊಂದು ಯೋಜನಮಕ್ಕುಂ || ೨೮ ||

ಇನ್ನೊಂದು ಪರಿಭಾಷಾ ಸೂತ್ರ:-

ಕಾಗಿಣಿ ನಾಲ್ಕವು ವೀಸಮು |
ಮಾಗಿರಲವನಿತ್ತರಿಂದೆ ವಾಗಮೆನಿಕ್ಕುಂ ||
ಕಾಗಿಣಿಯಷ್ಟದಶದೆ ಪಣ |
ಕಾಗಿಣೆಗಾ ಪುಷ್ಪಶತದಿ ಹೊನ್ನೆನಿತಕ್ಕುಂ || ೨೯ ||

ವೀಸಮುದ್ವೈದೆನೆ ಹಾಗಂ |
ವೀಸಮುದಿಪ್ಪತ್ತಱಿಂದೆ ಪಣಮೆನಿಸಿಕ್ಕುಂ ||
ವೀಸಮುದಿನ್ನೂಱಾಗಲ್ |
ಲೇಸೆನಿಸುವ ಪೊನ್ನೆನಿಕ್ಕು ರಾಜನ ಮತದಿಂ || ೩೦ ||

ವಾಗಂ ನಾಲ್ಕಕ್ಕೆ ಪಣಂ |
ಪಾಗಂ ನಾಲ್ವತ್ತಱೊಳೆ ಪೊನ್ನೆನಿಸಿಕ್ಕುಂ ||
ರಾಗದೊಳೆ ತಿಳಿವುದಖಿಳಕ |
ಳಾಗಮುವಿದನಪ್ಪ ರಾಜವರ್ಮ್ಕೋರ್ತ್ತಮನಿಂ || ೩೧ ||

ನಾಲ್ಕುಂ ಸೊಲ್ಲಗೆ ಮಾನಂ |
ಸೊಲ್ಲಗೆಪದಿನಾಱರಿಂದೆ ಬಳ್ಳಮೆನಿಕ್ಕುಂ ||
ಸೊಲ್ಲಗೆ ಗತಿರುತು ಕೊಳಗಂ ||
ಸೊಲ್ಲಗೆ ನಭಗಜಯುಗೇಂದು ಖಂಡುಗಮಕ್ಕುಂ || ೩೨ ||

ಕಂ|| ಕರಿರೇಣುವೊಂದುರೇಣುಂ |
ಕರಿರೇಣುವುದೊಂದುರೋಮ ರೋಮಂ ಕರಿಯಾ ||
ದೊರೆಕೊಳೆ ಸಾಸಂ ಸಾಸಂ |
ಕರಿಯಾಗಲ್ಕೊಂದು ಜವೆ ಕರಿಯಿಂದೋಜನಮಕ್ಕು (?) || ೩೩ ||

ಒದವಿದಕಾಗಿಣಿ ನಾಲ್ಕಱೊ |
ಳದು ವೀಸಂ ಐದುವೀಸಮುಂತದು ಪಾಗಂ ||
ತದು ನಾಲ್ಕುಂಪಾಗ ಪಣಂ |
ವಿದಿತಪಣಂ ಪತ್ತುನಿಲ್ಕೆ ಪೊನ್ನುಮದಕ್ಕುಂ || || ೩೪ ||

ಜವೆಯಿಂದೊಂದಂಗುಲಮುಂ |
ರವಿಯಂಗುಲದಿಂದೆ ಗೇಣುಂ ಗೇಣುಂ ನಾಲ್ಕುಂ ||
ಭುವನದೊಳೆ ಹಸ್ತಮಕ್ಕುಂ |
ಸವಿನಯದಿಂ ನಾಲ್ಕು ಹಸ್ತಮಕ್ಕುಂ ದಂಡಂ | || ೩೫ ||

ಎರಡುಂ ದಂಡಸಹಸ್ರಂ |
ನಿರುತಂ ತಾನೊಂದು ತ್ರಾಸ ತ್ರಾಸಂ ನಾಲ್ಕುಂ ||
ಗಿರಿಯೋಜನಂಗಳಕ್ಕುಂ |
ಧರೆ ಬಣ್ಣಿಸೆ ಪೇೞನಲ್ಕೆ ರಾಜಾದಿತ್ಯಂ || ೩೬ ||

ಜಾವಕ್ಕೆ ಗಳಿಗೆ ಎಂಟುಂ |
ಜಾವಮುದೆಂಟಾದೊಡೊಂದು ದೆವಸಮುದಕ್ಕುಂ ||
ದೆವಸಂ ಮೂವತ್ತೊದವಿರ |
ಲವು ಮಾಸಂ ಪನ್ನೆರಡರಿಂದೆ ವರುಷಮುದಕ್ಕುಂ || ೩೭ ||

ಉಕ್ತಂಚ—

ಅಱುವತ್ತು ನಾಲ್ಕನರ್ಧಿಸೆ |
ಯದನರ್ಧಿಸೆ ಉತ್ತಮಾದಿಪಾದಮುದಾಗಲ್ ||
ನೆಱೆ ಕಂಭಮೊಂದದಕ್ಕುಂ |
ನವಶತದಿಂ ಮತ್ತಮಱೊಂದು ಗಣಿತವಿಳಾಸಾ || ೩೮ ||

ತ್ರೈರಾಶಿಕವೊಡ್ಡಿಡುವ ಸೂತ್ರಂ:—

ಮ|| ಮೊದಲೊಳ್ ತೋಱುವ ರಾಶಿಗಂ ಕಡೆಯೊಳಿರ್ಪಾರಾಶಿಗಂ ನಾಮಮೊಂ |
ದೆ ದಲಕ್ಕುಂ ವ್ಯತಿರಿಕ್ತರಾಶಿ ನಡುವಿರ್ಕುಂ ನಿಶ್ಚಿತಾನಿಶ್ಚಿತಂ (ಶ್ಚಯಂ) ||
ಮೊದಲೊಳ್‌ಮಿಕ್ಕೆಸೆವಂತೆ ಮತ್ತಮಱೊಳಂ ತ್ರೈರಾಶಿಕಕ್ಕೊಡ್ಡುತ |
ಪ್ಪದೆನಲ್ ತಪ್ಪದಿದೆಂದು ತಾಮಱಿಗೆ ರಾಜಾದಿತ್ಯನಿಷ್ಟೋಕ್ತಿಯಿಂ || ೩೯ ||

ತ್ರೈರಾಶಿಕದ ಪಂಚಪ್ರಕಾರವನಱಿವುದರ್ಕೆ ಸೂತ್ರಂ

ಮ || ಪಡೆಮಾತೇಂ ಪಡೆದೊಡ್ಡನಿಟ್ಟು ಕಡೆ ಲೆಕ್ಕಂಗೂಡಿ ಮತ್ತಂತೆರ |
ಟ್ಕಡೆಯೊಳ್ ತೋಱುವರಾಶಿಗಳ್ಗೆ ಸಮಗಾಮುಂಮಾಡೆ ಸೂತ್ರೇಷ್ಟದಿಂ ||
ಬಿಡದೊತ್ತಿತ್ತುಗೆ ಮಧ್ಯನಾಮದ ಫಲಂ ತಾನಿಂತುಂಟೆಂದೀ ಕ್ರಮಂ |
ಬಿಡದಯ್ದುಂತೆಱನಿಂತುಟೆಂದಱಿಗೆ ರಾಜಾದಿತ್ಯನಿಷ್ಟೋಕ್ತಿಯಿಂ || ೪೦ ||

ತ್ರೈರಾಶಿಕದ ಗಣಿತಮಱಿವುದರ್ಕೆ ಸೂತ್ರಂ—

ಮ ||ಎರಡುಂಸ್ಥಾನದ ಮುಂದೆ ನಿಂತೆಸೆದು ತೋರ್ಪಾರಾಶಿಯಿಂಮುಂ ಪರ||
ಸ್ಪರಮೊತ್ತಂತದನೆತ್ತು ಪಿಂತೆಸೆದು ತೋರ್ಪಾರಾಶಿಯಿಂದಂ ಧನೋ |
ತ್ಕ (ರ) ಮಕ್ಕುಂ ವ್ಯವಹಾರಸೂತ್ರಮಿದು ದೀಪ್ತಿಸ್ಥಾನಮೆಲ್ಲಾ ಫಲೋ |
ತ್ಕರಮುಂ (1) ಪುಟ್ಟಿಸಲೆಂದು ತಾ[illegible]ಱಿಗೆ ರಾಜಾದಿತ್ಯನಿಷ್ಟೋಕ್ತಿಯಿಂ || ೪೧ ||

ಇದು ಶುಭ ಚಂದ್ರದೇವ ಯೋಗೀಂದ್ರ ಪಾದಾರವಿಂದ ಮಧುಕರಾಯಮಾಣ
ಮಾನಸಾನಂದಿತ ಸಕಲಗಣಿತತತ್ವವಿಲಾಸ ವಿನೇಯಜನ
ವಿನುತ ಶ್ರೀರಾಜಾದಿತ್ಯ ವಿರಚಿತಮಪ್ಪ
**ವ್ಯವಹಾರಗಣಿತದೊಳ್**
ಪೀಠಿಕಾಪ್ರಕರಣಂ
|| **ಸಮಾಪ್ತಂ** ||

1 ಪುಟ್ಟಿಪುದೆಂದು ಪೇಟ್ದನಿದುಮಂ ರಾಜರ್ಕನಿರ್ವ್ಯಾಜಾದಿಂ ||

# ಗಣಿತ ವ್ಯವಹಾರ ಸೂತ್ರೋದಾಹರಣಂ

## ಪ ರಿ ಭಾ ಷಾ ಪ್ರ ಕ ರ ಣ ಂ

ಸ್ಥಾನಸಂಜ್ಞೆಯನಱುವುದಕ್ಕೆ ಸೂತ್ರ:ಂ—

ಏಕಂತು ಪ್ರಥಮಂ ಸ್ಥಾನಂ ದ್ವಿತೀಯಂ ದಶಸಂಜ್ಞಿಕಂ
ತೃತೀಯಂಶತಮಿತ್ಯಾಹುಃ ಚತುರ್ಥಂ ತು ಸಹಸ್ರಕಂ
ಪಂಚಮಂ ದಶಸಾಹಸ್ರಂ ಷಷ್ಟಮಂ ಲಕ್ಷಮೇವ ಚ.
ಸಪ್ತಮಂ ದಶಲಕ್ಷಂ ತು ಅಷ್ಟಮಂ ಕೋಟಿರುಚ್ಯತೆ.
ನವಮಂ ದಶಕೋಟಿಸ್ತು ದಶಮಂ ಶತಕೋಟಿಕಂ.
ಅರ್ಬುದಂ ರುದ್ರಸಂಯುಕ್ತಂ ನ್ಯರ್ಬುದಂ ದ್ವಾದಶಂ ಭವೇತ್
ಖರ್ವಂ ತ್ರಯೋದಶಸ್ಥಾನಂ ಮಹಾಖರ್ವಂ ಚತುರ್ದಶಂ
ಪದ್ಮಂ ಪಂಚದಶಶ್ಚೈವ ಮಹಾಪದ್ಮಂ ತು ಷೋಡಶಂ.
ಕ್ಷೋಣಿ ಸಪ್ತದಶಶ್ಚೈವ ಮಹಾಕ್ಷೋಣಿ ದಶಾಷ್ಟಕಂ.
ಶಂಖಂ ನವದಶಸ್ಥಾನಂ ಮಹಾಕ್ಷಿತಿ ತು ವಿಂಶಕಂ.
ಕ್ಷಿತಿರೇಕವಿಂಶಸ್ಥಾನಂ ಮಹಾಕ್ಷಿತ್ಯಾ ದ್ವಿವಿಂಶಕಂ.
ತ್ರಿವಿಂಶಕಮಥ ಕ್ಷೋಭಂ ಮಹಾಕ್ಷೋಭಂ ಚತುರ್ನಯಂ ?
ಪಂಚವಿಂಶ ನದೀ ಚೈವ ಷಡ್ವಿಂಶತಿ ಮಹಾನದೀ
ಸಪ್ತವಿಂಶ ನಗಚ್ಚೈವ ಅಷ್ಟವಿಂಶ ಮಹಾನಗಃ.
ನವವಿಂಶ ರಥಶ್ಚೈವ ತ್ರಿಂಶಸ್ಥಾನಂ ಮಹಾರಥಃ
ಏಕತ್ರಿಂಶತ್ ಹರಿಶ್ಚೈವ ದ್ವಾತ್ರಿಂಶಸ್ತು ಮಹಾಹರಿಃ
ತ್ರಯಸ್ತ್ರಿಂಶತ್ ಫಣಿಶ್ಚೈವ ಚತುಸ್ತ್ರಿಂಶತ್ ಮಹಾಫಣಿಃ
ಪಂಚತ್ರಿಂಶತ್ ಕ್ರತುಶ್ಚೈವ ಷಡುತ್ರಿಂಶತ್ ಮಹಾಕ್ರತುಃ
ಸಪ್ತತ್ರಿಂಶತ್ ನಾಗರಂ ಚ ಅಷ್ಟತ್ರಿಂಶತ್ತು ಸಾಗರಂಮಹಾ
ನವತ್ರಿಂಶತ್ ಪರಿಮಿತಂ ಚತ್ವಾರಿಂಶ ಮಹಾಪರಿಮಿತಂ.

ಈ ನಾಲ್ವತ್ತು ಸ್ಥಾನಸಂಜ್ಞೆಯನಱುವುದು,

ಉಗ್ಗಡಣೆ—ಏಕ್ಕಂ, ದಾಹಂ, ಶತಂ, ಸಾವಿರ, ದಾಸಾವಿರ, ಲಕ್ಷ, ದಾಲಕ್ಷ, ಕೋಟಿ, ದಾಕೋಟಿ, ಶತಕೋಟಿ, ಅರ್ಬುದ, ನ್ಯರ್ಬುದ, ಖರ್ವ, ಮಹಾಖರ್ವ, ಪದ್ಮ, ಮಹಾಪದ್ಮ, ಕ್ಷೋಣಿ, ಮಹಾಕ್ಷೋಣಿ, ಶಂಖ, ಮಹಾಶಂಖ, ಕ್ಷಿತಿ, ಮಹಾಕ್ಷಿತಿ, ಕ್ಷೋಭ, ಮಹಾಕ್ಷೋಭ, ನದಿ, ಮಹಾನದಿ, ನಗ, ಮಹಾನಗ, ರಥ, ಮಹಾರಥ, ಹರಿ, ಮಹಾಹರಿ, ಫಣಿ, ಮಹಾಫಣಿ, ಕ್ರತು, ಮಹಾಕ್ರತು, ಸಾಗರ, ಮಹಾಸಾಗರ, ಪರಿಮಿತ, ಮಹಾಪರಿಮಿತ.

**ಈ ೪೦ ಸ್ಥಾನದ ಉಗ್ಗಡಣೆ**

ಶ್ಲೋ|| ಇತಿ ಸಂಜ್ಞಾಸಮಾಸೇನ ಭಾಷಿತಾ ಮುನಿಪುಂಗವೈಃ |
ವಿಸ್ತರೇಣಾಗಮಾದ್ವೇದ್ಯಂ ಚಾನ್ಯತ್ತು ವಿಧಿತಃ ಪರಂ ||

ಕಂ|| ಶಶಿಯಿಂದು (ಹಿಮಗುಹಿಮಕರ)
ಶಶಾಂಕ ಸೋಮಂ ಸುಧಾಂಶು ರಜನಿಕರಂ ಭೂ |
ವಸುಧಾತಳಮಾ ಸಿತಕರ
ರಸೆ ಧರೆ ಇಳೆ ರೂಪವೈಕಮೊಂದಱ ನಾಮಂ || ೧ ||
ಯಮನಯನ ಕರ್ಣ ಕರ ಪದ
ಯಮಳಂಘ್ರಿ ದ್ವಿಯಕ್ಷಿ ಪಕ್ಷ ನೇತ್ರಂ ಸೂತ್ರಂ |
ಕ್ರಮ ಚರಣಂ ಪದ ಯುಗಳಂ
ಸಮ ಉಭಯಂ ಬಾಹುಕಿವಿಗಳೆರಡಱ ನಾಮಂ || ೨ ||
ಹರನಯನ ವಹ್ನಿ ಪುರ ಶಿಖಿ
ವರರತ್ನಂ ಮೂರ್ತಿ ಲೋಕವಿಮಲತ್ರಿತಯಂ. |
ಪರಮ ಗುಣ ತ್ರಯಮನಲಂ
ಸುರನದಿ ಮಾರ್ಗತ್ರಯಮದು ಮೂಱಱ ನಾಮಂ || ೩ ||
ಗತಿವೇದಾಂಬುಧಿ ವಿಷನಿಧಿ
ಅತಿಶಯಚಾ ಚತು ಸಮುದ್ರ ಸೌಮ್ಯ ಕಷಾಯಂ |
ಚತುರಾಶ್ರಮ ವರ್ಣಂಗಳ್
ಸತತಂ ಜಳರಾಶಿ ಎಂದು ನಾಲ್ಕಱ ನಾಮಂ || ೪ ||
ಪುರಹರವಕ್ತ್ರಂ ಪಂಚಂ
ಪರಮವ್ರತಭೂತಮಿಂದ್ರಿಯಂ ಇಷು ಪತ್ರಂ |
ಶರ ಬಾಣ ವಿಷಯ ಪಾಂಡವ
ಪುರವೈರಿಮುಖಂಗಳೈದಱ ನಾಮಂ || ೫ ||
ಖರ ರಸ ರಿತು ಕರ್ಮಾಂಗಂ
ಅರಿಷಡ್ವರ್ಗಾದ್ರ ಲೇಶ್ಯ ಜೀವಂ ದ್ರವ್ಯಂ |
ಖರುವಾರ್ ರೋಹಕ ಪವನಂ ?
ದರುಶನ ಷಟ್ಕೃತ್ಯಯಂಗಳಾಱಱ ನಾಮಂ || ೬ ||
ಗಿರಿ ಮುನಿ ಋಷಿಪಂಚಾಂಗಂ
ತುರಗ ಹಯಂ ಧಾತು ಸಪ್ತಭೂಮಿಯನಿಳೆಯಂ |
ಖರಕಿರಣ ಸಭೆಯಭಯಂಗಳ್ ?
ಸ್ವರ ಸಾಗರ ಪರ್ವತಾದ್ರಿಯೇೞಱ ನಾಮಂ || ೭ ||
ದುರಿತಾಷ್ಟಕ ಕರ್ಮಂ ವಸು
ಕರಿ ದಿಙ್ನಾಗಂ ಮದವದನುಷ್ಟುಪ್ಛಂದಂ |
ಹರನತನು ಸಿದ್ಧಿ ವಾರಣ
ಮಾರಯೆಯೆಂಟಕ್ಕೆ ನಾಮಮಿದು ಸಿದ್ಧಾಂತಂ || ೮ ||
ವಸುಧಾಭಾವಂ ಕೇಶವ
ದಿಶವಂಕಂ ಭಾವರಂಧ್ರನಂದ ಪದಾರ್ಥಂ |
ರಸ ನಾಟ್ಯಾಂಗಂ ಗ್ರಹಣಂ
ಪೊಸತುಂ ನಿಧಿ ರತ್ನ ನವಮ ವೊಂಭತ್ತೆನಿಕುಂ || ೯ ||

ಕಂ|| ಗಗನಂ ಶೂನ್ಯಾಂಬರ ಖಂ
ಮಿಗೆಯಾಕಾಶಂ ವಿಯತ್ತಳಂ ವ್ಯೋಮಾಂಬರ।
ಮಿಗೆ ಘನಮಾರ್ಗಂ ನಭಮುಂ
ಸೊಗಯಿಪ ಬಿಂದುವಿನ ನಾಮ ನಾಸ್ತಿ ಸಮೇತಂ || ೧೦||
ವರ್ತಿಸು ವರ್ಗಿಸು ಈಡಿಱಿ,
ಯೊತ್ತರದಿಂ ಸೆಳದುಸೆಂದು ವೋಜೆಯ ಗುಣಿಸೈ।
ಮತ್ತಂ ಕಾದಿಸು ಪೂಜಿಸು
ಉತ್ತಮದಿಂ ಪೇೞ್ವೆ ಮೊದಲ ಗುಣಕಾರಂಗಳ್ || ೧೧ ||

ಏಗ, ಏಕ, ಹಿಮಗು, ಹಿಮಕರ, ಶಶಿ, ಶಶಿಧರ, ಚಂದ್ರ, ಹಿಮಾಂಶು, ಏಕ ರೂಪ, ಧರೆ, ಶಶಲಾಂಛನ, ಇಂದು, ಹರಿಣಧರ, ಪ್ರಳಯಾಂತ . . . . . . ಕಳಾಧರ ಲಿಂಗ, ಧಾತ್ರಿ, ರಾಜ್ಯ, ಶಶಾಂಕ, ಸೋಮ, ರಜನಿಕರ, ಸಿತಕರ, ಇಂತಿನಿತುಂ ೧ ಕ್ಕೆ ಹೆಸರು.

ಬೆ, ಬೆನ್ನಿ, ಯಮ, ನಯನ, ಅಕ್ಷಿ, ದ್ವಂದ್ವ, ದ್ವ, ದ್ವಿ, ದ್ವಯ, ನೇತ್ರ, ಯುಗ, ಯುಗಳ ದೃಷ್ಟಿ, ಉಭಯ, ಬಾಹು, ಪಾದ, ಪಕ್ಷ, ಚಕ್ಷು, ಕರ, ದ್ಯುಗು, ಯಮಳ, ಲೋಚನ, ದಂಪತಿ, ಇಂತಿನಿತುಂ ೨ಕ್ಕೆ ಹೆಸರು.

ತ್ರೈ, ತ್ರಯ, ಅಗ್ನಿ, ತ್ರಿಕ, ಗುಣ, ಅನಲ, ಹುತಾಶನ, ರತ್ನ, ಶಿಖಿ, ಹುತಭುಕ್, ವಾಯುಸಖ, ಪಾವಕ, ಹರನೇತ್ರ, ಹಳ್ವಗೆ? ಲೋಕ, ವಹ್ನಿ, ದಹನ, ಶಿಖಿ, ತ್ರಿ (ತಯ) ಮೂರ್ತಿ, ಶಂಕರನೇತ್ರ, ತ್ರಿ, ಪುರ . . . ಇಂತಿನಿತುಂ ೩ ಕ್ಕೆ ಹೆಸರು.

ಚೌ, ಚತು, ಜಲನಿಧಿ, ವಿಷನಿಧಿ, ಜಾತಿ, ಗತಿ, ಪಯೋಧಿ, ಅಂಬುಧಿ, ಸಾಗರ, ಜಳಸಬಂಧು ? ಶರಧಿ, ವೇದ, ವರ್ಣ, ವಾರಾಶಿ, ಮದಾಚಾರಿ? ಅಂಭೋನಿಚಯ, ಜಳಧಿ, ಸಮುದ್ರ, ಕಷಾಯ ಇಂತಿನಿತುಂ ೪ ಕ್ಕೆ ಹೆಸರು.

ಪಂಚವ್ರತ, ಇಂದ್ರಿಯ, ಶರ, ವಿಷಯ, ಸ್ಮರಬಾಣ, ಇಷು, ಬಾಣ, ಪಾಂಡವ, ಕಟುರಾ ಯುಧ, ? ಕುಸುಮಾಯುಧ, ಭೂತ, ಪನ್ನಗ, ಹರವಕ್ತ್ರ, ಪಾಂಚಜನ್ಯ, ಶುಕ್ಲ—ಇಂತಿನಿತುಂ ೫ ಕ್ಕೆ ಹೆಸರು.

ದಾ, ಖರ, ದ್ರವ್ಯ, ಋತು, ಲೇಶ್ಯ, ಷಡುಚ,? ಜೀವತಾ,! ಯಾಬ,? ರುತು, ದಯ ತತ್ವವ, ದತ ಖಗ, ಷಡು, ರಸ, ಷಣ್ಮುಖ, ದರ್ಶನ, ಷಡುವರ್ಗ, ಆಱು ಹಣಹಕ . . . . . ಗ, ವದನ,? ಇಂತಿನಿತುಂ ೬ ಕ್ಕೆ ಪೆಸರು.

ಸಪ್ತ, ಭಯ, ಅದ್ರಿ, ಗಿರಿ, ಮುನಿ, ಪಾತಾಳ, ಶಂಖ, ಸಾಗರ, ಮಹೀಧ್ರ, ಭೂಮಿಧ್ರ ಪೆ. . . . ಋಷಿ, ಶೃಂಗಿ, ಸ್ವರ, ಶೈಲ, ಅಚಲ, ನಗ, ಸಿತಾಂಶು? ಹಯ, ದ್ವೀಪ, ಅಶ್ವ ಇಂತಿ ನಿತುಂ ೭ ಕ್ಕೆ ಹೆಸರು.

ಅಷ್ಟ, ವಸು, ದಂತಿ, ದುರಿತ, ಕರ್ಮ, ದಿಸೆ, ದಿಕ್ಕು, ಕಾಷ್ಠಾ, ಸಿತೆ? ಇಭ, ಕರಿ, ಗಜ,

ದಿಗ್ಗಜ, ಮದಹಸ್ತಿ, ಮಾತಂಗ, ವಾರಣಾನ್ವಯ, ಪುಷ್ಕರ, ದಂತಿ, ವಾರಣ, ದಿಙ್ಮುಖ,? ದಿಗ್ದಂತಿ ಇಂತಿನಿತುಂ ೮ ಕ್ಕೆ ಪೆಸರು.

ನವ, ಪದಾರ್ಥ, ರಂಧ್ರ, ನಂದ, ಲಬ್ಧ, ನಿಧಿ, ನವನಿಧಿ, ಚಾಪಕ, ಕೌಶವ? ಅಂಕ, ನಳ, ಕೇತು, ಬುಧ, ಬಂಧ, ಗ್ರಹ, ಗ್ರಹಣ, ರಸ, ನಾಟ್ಯಾಂಗ, ಇಂತಿನಿತುಂ ೯ ಕ್ಕೆ ಪೆಸರು.

ದಿವಿ, ಕೈಕ,? ಶೂನ್ಯ, ಅಗ್ರ, ಅಂಬರ, ಗಗನ, ಮೇಘಮಾರ್ಗ ಆಕಾಶ, ಜಲಧರಮಾರ್ಗ ಬಂಧಯೋಗ, ವಿಯತ್. ಅಯನ, ಪಥ, ಅಭ್ರ, ಖಂ, ವೃತ್ತಂ, ಆಗಸ, ಜಲಧರಪಥ, ವ್ಯದ್ವಿತೆ, ಇಂತಿನಿತುಂ ಸೊನ್ನೆ (೦)ಗೆ ಹೆಸರು.

ತೀವಿಪ್ಪೊಯ್, ಪೆರ್ಚಿಸು, ನೂಂಕು, ಅರಂಕು, ಕುಂಕು, ಕುಸಿ, ಇಱು, ಅಕೆ, ಬಡಿ, ಮೋದು, ಒತ್ತು, ಹತು, ಹತಿಸು, ಗುಣಿಸು ತೂಹುವಿಂದಾಂಟಿಸು, ತಾಂಟಿಸು, ವರ್ಗಿಸು ಬಳಯಿಸು, ಅಘ್ನಂ, ಚಿತ್ತಂ ಘ್ನಯುಂಬ? ಬೆಳಸೆಂದು ಇಂತಿನಿತುಂ ಗುಣಿಸೋದಕ್ಕೆ ಹೆಸರು.

ಕಂ|| ಪೊಡೆ ಪೊಡವಿಸು ನಿಮ್ಮತ್ತಂ
ಬಿಡೆ ನೂಂಕೊತ್ತು ನೆರೆ ಮೋದು ಬಳಯಿಸು ಏಕೆಂ ||
ದೊಡರಿಪ ವಾಕ್ಯಂಗಳ್ ತಾಂ
ಪೊಡವಿಯ ನರರ್ಗಲ್ಲ ಗುಣಿಯಿಸೆಂಬುದು ನಿರತಂ || ೧೧ ||

ಒತ್ತಿರಿ ನಾಂಟಿಸಪ್ಪು? ಬಳ
ಸೊತ್ತು ಹತಂ ತೀವಿ ನೂಂಕು ಕೂಂಕು ದಾಂಟಿರು ||
ಮತ್ತಾದರದೆಪೊಯಿ ಗುಣಿಸು
ಪೆರ್ಚಿಸೆನಲಿವು ಗುಣಕಾರ ಭಾಷೆಗಳ್ ಪೇೞ್ ಗಣಕಾ || ೧೨ ||

ಯುತಂ, ಯುಕ್ತಂ, ಮಿಶ್ರಂ, ಸಮ್ಮಿಶ್ರಂ, ಸಂಯೋಗಂ ,ದತ್ತಾತಿಕ್ಷಂ ಅನುಬಂಧಂ, ಯೋಗಂ, ಬೆರಸು, ಮದಿಸು ಸಹಿತಂ, ಕೂಡು, ಬತಂ ಇಂತಿನಿತುಂ ಕೂಡೂದಕ್ಕೆ ಹೆಸರು.

ರಜತಂ, ರಜಿತಂ, ಉವಿತಂ, ತ್ಯಜಂ, ನುನ್ನಂ, ವಿವರಣಂ, ವಿಶೋಧ್ಯಂ, ಶೋಧ್ಯಂ, ತ್ಯಜಿಸು,·ಕಳೆ ಇಂತಿನಿತುಂ ಕಳೆವುದಕ್ಕೆ ಪೆಸರು.

ದಳಿತ, ಆರ್ದಿತ . . . . (ಖಂ) ಡಿತ. ಇಂತಿನಿತುಂ ಅರ್ಧಿಸೋದಕ್ಕೆ ಹೆಸರು.

ವರ್ಗಮೆಂದುಂ ಕೃತಿಯೆಂದುಂ ವರ್ಗಂಗೊಂಬುದರ್ಕ್ಕೆ ಹೆಸರು.

ಆರ್ಯಾ || ವಿನ್ಯಸ್ಯಭಾಗರಾಸಿಃ ಕವಾಟಸಂಧಿಕ್ರಮೇಣ ಸಂಗುಣಯೇತ್ |
ರಾಸ್ಯರ್ಧಖಂಡಸ್ತತ್ರೈದನುಲೋಮ ವಿಲೋಮಮಾರ್ಗಾಭ್ಯಾಂ || ೧ ||

ಟೀ|| ವಿನ್ಯಸ್ಯ-ನಿರಿಸುವುದು. ಭಾಗರಾಸಿಂ-ಗುಣ್ಯಮಾನಂ, ಗುಣಕಾರಮೆಂಬೆರಡು ರಾಸಿಗಳ,

ಕವಾಟ ಸಂಧಿಕ್ರಮೇಣ-ಅಮಳ್ಳಡಿಯನಮರ್ಚಿಸುವ ಪ್ರಕಾರದಿಂ, ಸಂಗುಣಯೇತ್-ಒಳಿತಾಗಿ ಗುಣಿಸೋದು, ರಾಶ್ಯರ್ಘಖಂಡಂ-ರಾಸಿಖಂಡಮೆಂಬುದು ರಾಸಿಯಂ ಖಂಡಿಸಿ ಅರ್ಘಮಂ. . ದ್ವಿ ಗುಣಿಸಿ ಗುಣಿಸೋದು. ಅರ್ಘ ಖಂಡಾ, ಅರ್ಘಖಂಡವೆಂಬುದುಂ ಅರ್ಘಮಂ ಖಂಡಿಸಿ ರಾಸಿಯಂ ದ್ವಿಗುಣಿಸಿ ಗುಣಿಸೋದು. ಸ್ತತ್ರ್ಯ-ಸ್ತತ್ರಮೆಂಬುದು ಗುಣಿಯಿಸಲಿರ್ದ ಲೆಕ್ಕ ಪ್ರಮಾಣವಾಗಿ ರಾಸಿಯನೂ ಒಂದರ ಕೆಳಗೆ ಒಂದನಿಟ್ಟು ಗುಣಗಳ ಕ್ರಮದಿಂದ ಗುಣಿಸಿಕೊಡುವುದು. ಅನುಲೋ ಮ-ಅನುಲೋಮವೆಂಬುದು ರಾಸಿಯಮೊದಲಿಂದಂ ತುದಿವರಂ ಗುಣಿಸೋದು,ವಿಲೋಮ-ವಿಲೋ ಮವೆಂಬುದು ರಾಸಿಯತುದಿಯಿಂದಂ ಮೊದಲುವರಂ ಗುಣಿಸೋದು. ಮಾರ್ಗಾಭ್ಯಾಂ-ಈ ಮಾರ್ಗ ದಿಂದ ಪಂಚ ಪ್ರಕಾರದಿಂ ಗುಣಿಸುವುದು.

ಇತಿ ಪರಿಕರ್ಮವಿಧೌ—ಪ್ರಥಮ ಗುಣಕಾರಕ್ಕೆ ಲೆಕ್ಕ ಸಂಜ್ಞೆ, ಲೆಕ್ಕ ಸ್ಥಾನ,
ಗುಣಕಾರ ಪರಿಭಾಷೆ ಸಮಾಪ್ತಂ.

---

ಶ್ರೀಪಂಚಗುರುಭ್ಯೋನಮಃ

ಭಾಗಂ ಎಂಬುದಕ್ಕೆ ಪೆಸರು-ತವಿಸು, ಭಾಗಿಸು, ಉಗಿ, ಎತ್ತು, ಕೊಡು, ಕೊಳು, ಹೃತಂ ಹೃತ್ವಾಂಶ, ತಮೊದನ್ನಂ? ವಿದಿನ್ನಂ, ಪಸು, ಪಸಲು, ಭಾಗಂಗೊಳು, ಸೆಳೆ, ಉಚ್ಛಿಂ ದುಂ, ಇಂತಿನಿತುಂ ಭಾಗಂಗೊಂಬುದಕ್ಕೆ ಪೆಸರು.

ಸತ್ತುತಗೆಯಂ, ಸಂಹ್ರಿತಂ, ತವೆ, ಭಕ್ತಿ ಭಿನ್ನ, ಚಿನ್ನದಿತಂ, ದಾಪ್ತ ಭಾಷೆಗಳ್.

ಭಾಗಿಸೂದೆಂದಱ ನೀನವಂ ಬುಧಾ?

ದ್ವಿತೀಯ ಭಾಗಹಾರ ಪರಿಕರ್ಮಣಿಕರಣಸೂತ್ರಂ ಯಥಾ;—
ವಿನ್ಯಸ್ಯ ಭಾಜ್ಯಮಾನಂ ತಸ್ಯಾಧಸ್ಥೇನ ಭಾಗಹಾರೇಣ ।
ಪ್ರವರ್ತಿತೇ ನ ಹಿ ಭಾಗಂ ಹಿತ್ವಾ ಫಳಂ ಪ್ರಮಾದರೇತ್ ? || ೨ ||

ಟೀ|| ವಿನ್ಯಸ್ಯ-ನಿರಿಸುವುದು, ಭಾಜ್ಯಮಾನಂ-ಭಾಗಂಗೊಂಬರಾಸಿಯಂ, ತಸ್ಯ ಅಧ:-ಆ ಲೆಕ್ಕದ ಕೆಳಗಂ_ಹಾರಮನಿಟ್ಟು ಭಾಗಹಾರೇಣ, ಸದೃಶಮಾನವಾಗಿಟ್ಟು ಲೆಕ್ಕವನು, ಪ್ರವರ್ತಿತೇ ನಹಿ ಭಾಗಂ-ಒಂಭತಾದಿಯಾಗಿ ಒಂದು ಪರಿಯಂತರ ಪ್ರವರ್ತಿಸಿ ಹಿಡಿ ಭಾಗಿಸುವುದು. ಹಿತ್ವಾ- ಭಾಗ ಹೋಗದಿರ್ದಡೆ ಭಾಗಕ್ಕಿಲ್ಲ ಭಾಗಂ ನಾಸ್ತಿಯೆಂದು ಸೊನ್ನೆಯಂ ಬರೆವುದು. ಮುಂದಕ್ಕೆ ಹಾರಮಂ ಉಚ್ಚಾಟ್ಯಂಮಾಡಿ ಲೆಕ್ಕವುಳ್ಳನ್ನಬರ ಭಾಗಂಗೊಂಬುದು. ಈ ಮಾರ್ಗದಿಂ ಭಾಗಿ ಸಿದರೆ ಬಂದಫಳ ಮಕ್ಕಾರಂ, ಪ್ರಮಾತಯತ್ ? ಭಾಗಹಾರಂ ಹೇಳಲ್ಪಟ್ಟುದು.ಉದಾಹರಣೆ.

ತೃತೀಯಂ ವರ್ಗ ಪರಿಕರ್ಮಣಿ ಕರಣಸೂತ್ರಂ—ಯಥಾ
ವರ್ಗಮವಸಾನರಾಶೇ ಕೃತ್ವಾಂತ್ಯಕೃತಿಂ ಅನ್ಯಪದಶೇಷೈಃ ।
ದ್ವಿಗುಣಮಂತ್ಯದ್ವಿಷಂ ಗುಣಂ ತಸ್ಮಾದುತ್ಸಾದ್ಯ ಪದೈಃ ಶೇಷಮಾತ್ಯ ಯೇವಂ ಕರ ಣೀಯಂ ವಿಧಿಯಂ ವರ್ಗೇ || ೩ ||

ವರ್ಗಮವಸಾನರಾಶೇಃ ಕೃತ್ವಾ ಅಂತ್ಯಪದಂ ದ್ವಿಸಂಗುಣ್ಯಾಂ ||
ತಸ್ಮಾದುತ್ಸರ್ಯಪದ್ಯೈಃ ಶೇಷೈಃ ಕುಹಿಣ್ಯಾಂ ದೇಶವರ್ಗವಿಧಿಃ ? || ೪ ||

ಎಂದು ಓಜರೇಖೆಯಂ ತೆಗೆದು, ವರ್ಗಮವಸಾನ ರಾಶೇಃ-ವರ್ಗದಕಡೆಯ ಲೆಕ್ಕಮಂ ಕೃತ್ವಾ-ವರ್ಗಂ ಗೊಂಬುದು. ಅಂತ್ಯಪದಂ–ಆ ವರ್ಗಂಗೊಂಡ ಲೆಕ್ಕಮುಂ, ದ್ವಿಸಂಗುಣ್ಯಾಂ-ಎರಡರಿಂದ ಗುಣಿಸೂದು–ತಸ್ಮಾದುತ್ಸಾದ್ಯ ಪದ್ಯೈ-ಆ ಎರಡರಂ ಗುಣಿಯಿಸಿದ ಲೆಕ್ಕಮುಂ ಮುಂದಕುತ್ಸಾರ್ಯ ಮಾಡಿ ಮುನ್ನಿನಂತೆ ವರ್ಗಂಗೊಂಬುದು. ಶೇಷೈಃ–ಶೇಷಸ್ಯ ಭಾಗಂ ಶೇಷಂಗಳಂ ಗುಣಿಯಿಸೂದು. ಕುಹಿಣ್ಯಾಂ ಉಳಿದ ಲೆಕ್ಕಮುಂ ಮುಂದಕ್ಕುತ್ಸಾರ್ಯಂ ಮಾಡಿ ದೇಶವರ್ಗವಿಧಿಯೆಂದು ವರ್ಗಂ ಮಾದಿ ಗೊಂಬುದು, ರಾಶಿ ತೀರ್ವನ್ನೆವರಂ ವರ್ಗಂ,ಧನಮಿಕ್ಕುಂ

ರೂಪಗುಣ ಸ್ಯೈತಾದರ್ನವ ಪರಿಯುತಸ್ಯ |
ರಾಸಿಷ್ಟಯೋ ವರ್ಗತಃ ಸತ್ರಂ ಪ್ರಗುಣಾರ್ಯ ಚಕ್ಷುಷೇಶೀಘ್ರಂ ? || ೫ ||

| | | | | | | | | | |
|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೦. |
| ೧ | ೪ | ೯ | ೧೬ | ೨೫ | ೩೬ | ೪೯ | ೬೪ | ೮೧ | ೦. |

ಸೂ|| ೧ ಪರಿಭಾಷೆಗಳ ಲೆಕ್ಕ

ಪಂಚದಶ ಪಂಚವಿಂಶತಿ ಷಡುತ್ರಿಂಶತ್ ಷಟ್ಪಂಚ ಸಪ್ತದಿನಾಂಚ |
ವರ್ಗಂ ಕಥಯ ಸಂಖೆಯಿತ್ವಂ ಚತುಃಕೃತೇ ಸ್ಥಾಪ್ಯ ಕಥಯ ಸಂಗುಣ್ಯಾಂ. || ೬ ||

ಒಡ್ಡುಗಳು— ೧೫, ೨೫, ೩೬, ೭೫, ೧೬, ಲಬ್ಧಕಂಭ ೨೨೫, ೬೨೫, ೧೨೯೬, ೫೬೨೫, ೨೫೬. ಉದಾಹರಣೆ.

ಸೂ|| ೨ ಸಾಷ್ಟ ತ್ರಿಂಶತ್ ತ್ರಿಶತಿ, ಚತುಃ ಸಹಸ್ರ ಷಷ್ಟಿಷಟ್ ಶತಂ ಸ್ಯೆಕಂ |
ದ್ವಿಶತ ಪಂಚಾಶತ್‌ಷಟ್ಕಂಚ ಸಂಮಿಶ್ರಂ ವರ್ಗೀಕೃತಾನಿ ಕಿಂಸ್ಯಾತ್. || ೭ ||

ಒಡ್ಡು ೩೩೮, ೪೬೬೧, ೨೫೬, ಲಬ್ಧಕಂಭ ೧೧೪೨೪೪,
೨೧೭೨೪೯೨೧, ೬೫೫೩೬

ಸೂತ್ರ || ೩ ಲೇಶ್ಯ ಗುಣೇಷು ಬಾಣದ್ರವ್ಯಾಣಾಂ, ಶರಗತಿ ತ್ರಿಸೂರ್ಯಾಣಾಂ |
ಗುಣರತ್ನಾಗ್ನಿ ಪುರಾಣಾಂ ವರ್ಗಂ ಭಗಣಗಣಕ ಯದಿ ನೇತಿ

ಒಡ್ಡು|| ೬೫೫೩೬, ೧೨೩೪೫, ೩೩೩೩ ಲಬ್ಧಕಂಭ ೪೨೯೪೯೬೭೨೯೬ – ೧೫೨೩೯೯೦೨೫, ೧೧೧೦೮೮೮೯.

ಸೂತ್ರ೪ || ಸಪ್ತಾಶೀತಿತ್ರಿಶತಸಹಿತಂ ಷಟ್ ಸಹಸ್ರಂ ಪುನಶ್ಚ|
ಪಂಚತ್ರಿಂಶತ್‌ಸಪ್ತನಿಘ್ನಂ ಸಹಸ್ರಂ |
ದ್ವಾವಿಂಶತ್ಯಯುತದಶಶತಂ ಸಂವರ್ಗಿತಂ ತತ್ರ ಯಾ ನಾಶಾದಿ |
ಬ್ರೂಹಿತ್ವಂ ಮೇ ಗಣಕ ಗುಣವಾನ್...ಣಾರ್ಯ ಪ್ರಮಾಣಂ. || ೮ ||

ಒಡ್ಡು || ೬೩೮೭, ೭೧೩೫, ೧೦೨೨. ಲಬ್ಧಕಂಭ ೪೦೭೯೩೭೭೯, ೫೦೯೦೮೨೨೫ ೧೦೪೪೪೮೪,

ಶ್ರೀಗುರುಭ್ಯೋನಮಃ

ಸೂ. || ೫ || ಚತುರ್ಥಂ ವರ್ಗಮೂಲ ಪರಿಕರ್ಮಣಿ ಕರಣಸೂತ್ರಂ ಯಥಾ:—

ಓಜಾದವಹೃತ್ಯ ಕೃತಿಮೂಲೇನ ದ್ವಿಗುಣಿತೇನ ಶೇಷಸ್ಯಭಾಗಂ |
ತದ್ವರ್ಗ ಗೋ ದ್ವಿಗುಣಾರ್ಧಂ ವರ್ಗ ಮೂಲಫಲಮೇತತ್. || ೯ ||

ಟೀ-ಓಜಾತ್-ಓಜೆಯರೇಖೆ ನಿಂದಲ್ಲಿಯೇ ವರ್ಗಮೂಲಂಗೊಂಬುದು ಆ ವರ್ಗ ಮೂಲಂಗೊಂಡು ಬಂದರೆ, ಕ್ರಮಂ ದ್ವಿಗುಣಿತೇನ-ಎರಡರಿಂದಗುಣಿಸೋದು. ತಸ್ಮಾತ್-ಮುಂದ ಣ ಬಿಂದು ಶ್ವದ್ಯಂಮಾಡಿ ಯುಗ್ಮಸ್ಥಾನದಲ್ಲಿಟು ಭಾಗಂಗೊಂಬುದು. ದ್ವಿಗುಣಾರ್ಧ ಮೂಲಫಲ ಮೇತತ್ ದ್ವಿಗುಣಿಸಿಬಂದ ಲಬ್ಧವನ್ನು ಅರ್ಧಿಸಲು ವರ್ಗಮೂಲ ಫಲಮಕ್ಕುಂ.

ಇನ್ನೊಂದು ಬಗೆಯ ಟೀಕು—ಓಜ ರೇಖೆಯೆಂದು ಸಲಾಕಾರೇಖೆಯಂ ತೆಗೆದು, ಓಜಾ ದಪಹೃತ್ಯ ಕೃತಿಮೂಲೇನ-ಓಜಾರೇಖೆಗಿಂದಲ್ಲಿಯೇ ವರ್ಗಮೂಲಂ ಗೊಂಬುದು ಮೂಲೇನ ದ್ವಿಗು ಣಿತೇನ-ಆ ವರ್ಗ ಮೂಲಂಗೊಂಡ ಲೆಕ್ಕವಂ ದ್ವಿಗುಣಿಸಿ ಗುಣಿಸೂದು. ಶೇಷಸ್ಯಭಾಗಂ-ಆ ದ್ವಿಗು ಣಿಸಿದ ಲೆಕ್ಕವಂ ಯುಗ್ಮ ಸ್ಥಾನದಲ್ಲಿಟ್ಟು ಭಾಗಂಗೊಂಬುದು. ತದ್ವರ್ಗ್ಗಗೋ-ಮುನ್ನಿನಂತೆ ಓಜಾ ರೇಖೆನಿಂದಲ್ಲಿಯೇ ವರ್ಗಮೂಲಂ ಗೊಂಬುದು. ದ್ವಿಗುಣಾರ್ಧಂ-ದ್ವಿಗುಣಿಸಿದ ಲೆಕ್ಕಮನರ್ಧಿಸಿದಡೆ, ವರ್ಗಮೂಲ ಫಲಮೇತತ್-ವರ್ಗ ಮೂಲವೆಂದು ಪೇಳಲ್ಪಟ್ಟುದು. ಉದಾಹರಣೆ.

ಸೂ. || ೬ || ಕಾನವಪರಿಯಂತೇಗತಾದಿ ವರ್ಗ ತಸ್ಯಪಿತತ್ರಲಾಸೇಸ್ತು |
ಮೂಲತ್ವಂ ಮೇ ಶೀಘ್ರಂ ಕಥಯ ವಿಚಿಂತ್ಯ ಸುಗಣಿತ ತತ್ವಜ್ಞ || ೧೦ ||

ವರ್ಗ ೧, ೪, ೯, ೧೬, ೨೫, ೩೬, ೪೯, ೬೪ ೮೧ ೦

ಸೂ. || ೭ || ದ್ವಾದಶಶತಸ್ಯ ಮೂಲಂ ಷಣ್ಣವತಿಯುತಸ್ಯ ಕಥಯ ಸಂಗುಣ್ಯ |
ಕಸ್ಯಚ ಮಿಶ್ರಿತಪಂಚಗೋವರ್ಗೇಣಮೂಲಂ ಗುಣಯಿತ್ವಾ || ೧— ||

ಒಡ್ಡು|| ೧೨೯೬ ಲಬ್ಧಕ್ಕೆ ಮಣಿಸರ ೩೬.

ಸೂ. || ೮ || ಷಡುವರ್ಗ ಪಂಚಶತಯುತ ಸಹಸ್ರ ಪಂಚಕಂ ಪಷ್ಟಿರುಹಂ |
ಪಂಚಶತ ಸ್ಯೆಕ ಷಷ್ಟಿ ಭರದಿಕಂ ಸಹಸ್ರಾಣಿ ಷಟ್ಕಂ ಚ ಕಿಂ ಮೂಲ್ಯಂ || ೧೨ ||
ಒಡ್ಡುಮಣಿ ೬೫೫೩೬, ೬೫೬೧ ಕ್ಕೆ ಲಬ್ಧ ಸರ ೨೫೬ ೮೧, ಸರಕ್ಕೆ ಮಣಿ ೨೫೬, ೮೧

ಸೂ. || ೯ || ದ್ರವ್ಯ ಪದಾರ್ಥಂ ಸಯಾಚಲಲೇಸ್ಯ ಲಬ್ಧಾಬ್ಧಿನನವ ನಯಾಂಬೋಗಿಜಯಂ ಶಶಿನೇತ್ರೇಂದ್ರಿಯ ಯುಗನಯ ಜೀವಸ್ಯಹವೂ:

**ಇಲ್ಲಿಗೆ ಪರಿಭಾಷಾ ಪ್ರಕರಣಸಮಾಪ್ತಿ**

## ತ್ರೈರಾಶಿಕ ಪ್ರಕರಣಂ

ಸೂತ್ರಂ || ೧ ||

ಕಂ|| ನವಭಕ್ತಿಯಿಂದಮರ್ಚಿಸಿ |
ನವಜಿನಗೇಹಕ್ಕೆ ನವನವೋದ್ಯನ್ಮಣಿಯಂ ||
ನವನವನವ ಜೈನಗೃಹಕೆ |
ತಾವಿನಿಸಿತಾಯ್ತೆಂದನಲ್ತೆ ರಾಜಾದಿತ್ಯಂ || ೧ ||

ಬ ೯ ಮ ೯೯ ಬ ೯೯೯ ಕ್ಕೆ ಲಬ್ಧರತ್ನಂ ೧೧೯೮೯ ಪ್ರಥಮಹಾರ ೯೯

ಸೂತ್ರ || ೨ ||

ಕಂ|| ಕೊಱಿ ಪನ್ನೀರ್ ಕಂಡುಗದಂ |
ನೆಱ ಗಿಳಿಗಳ್ ಮೇದುವವಱೊಳೊಂದಂ ಪಿಡಿಯಲ್ ||
ಕೊಱ ಮೂಱು ಸೊಲ್ಲಿಗಿರ್ದಪು |
ನೆಱೆಗಿಳಿಗಳ್ ಮೇದುವವಱಪವಣಂ ಪೇೞಾ || || ೨ ||

ಸೊ ೩ ಗಿ ೧ ೩ ೧೨ ಲಬ್ಧಗಿಳಿ ೫೭೨೦ || ಹಾ ೩ ||

ಕಂ|| ಹಾಗಕ್ಕಱುಗಳದೊಬ್ಬಳ |
ವಾಗಲ್ ತಾಂವೀಸರೆಯುರ್ಧ ಕಾಣಿಗೆಮೇನುಂ ||
ತೀಗಳೆ ಪೇೞ್ ಗಣಕ ಮನೋ |
ರಾಗದಿನೋರಂತೆ ರಾಜಜನರುಂ ಮೆಚ್ಚಲ್ || ೩ ||

ಗಂ ಹ। ಕ್ಕೆ ಖಂ । ೧ । ಲ್ಲು ನಿ ೧ ಕಾ. ಅ ೧ ಲಬ್ಧ ಖಂ ||೨|| ಹಾರ || ೮ ||

ಸೂತ್ರಂ || ೩ ||

ಕಂ|| ನೆಗೞ್ದೊಂದು ಹೊಂಗೆಯುಱುಖಂ |
ಡುಗವಱುಗಳದೆರಡುಬಳ್ಳದಿಂ ಮಾನಂ ಸೊ ||
ಲ್ಲಗೆಯಾಗ ಬಾಣ ಶಶಿ ನಗ |
ಯುಗ ಗದ್ಯಾಣಂ ಪಣತ್ರಯಕ್ಕೇನಕ್ಕುಂ || ೪ ||

ಗ ೧ ಖ ೬-೧-೨ ।ಲೂ ಗ ೨೭೧೫-೩ ಲಬ್ಧ ಖ ೧೭೮೯೨। ೨೯೦ ಗಿ ೧|| ಹಾರಂ ೧೦ ||
ದ್ವಿತೀಯಹಾರ ೧೨೮ಂ || ಮಧ್ಯರಾಶಿ ಕಡೆಯರಾಶಿಯ ಗುಣಿಸಿದ ರಾಶಿ ೨೨೦೦೭೫೦೬೫ ||

ಸೂತ್ರ || ೪ ||

ಕಂ|| ಪೊಂಗೇೞ್ಖಂಡುಗಮಾಗೆ ಮ |
ನಂಗೊಳೆ ಹಣವಡ್ಡವೀಸೆ ಕಾಣಿಗ ಮೇನುಂ ||
ಬಂಗೆ ತಿಳಿವಂತೆ ಪೇೞ್ದಂ |
ಪಿಂಗದೆ ಗಣಕಪ್ರಧಾನನೆನಿಪುದು ಪಿರಿದೇ ||

ಗ ೧ ಖ ೭ ೪ ಹ ೧|| ವಿ ೧ ಕಾ ೧ ಲಬ್ಧ ಖ ೧-೧

ಹಾರ ೮೦ ||

ಸೂತ್ರಂ ೫ ||

ಮೂಱುಂಗದ್ಯಾಣಂ ಪಣ |
ಮೂಱಕ್ಕೆಂಭತ್ತು ಖಂಡುಗಂ ಕೊಳಗಂ ತಾಂ ||
ಮೂಱಾಗಲ್ ಗದ್ಯಾಣಂ |
ನೂಱುಪಣಂ ಆಱುವಡ್ಡಮಾಗಲ್ಕೇನೋ ||

ಗ ೩ ಹ ೩ ಖ ೮೦ ಕೊ ೩ ಗ ೧೦೦ ಹ ೬|| ಲಬ್ಧ ಖ ೨೪೪೪ || ೧ || ಹಾರ ೧೩೨
ದ್ವಿತೀಯಹಾರ ೨೦ ಗುಣಿಸಿದ ವೊಡ್ಡು ೬೪೫೩೬೭೮.

ಸೂತ್ರಂ. ೬. ||

ಪದಿನೆಂಟುಕೊಳಗದೊಬ್ಬಳ |
ಮದು ಪಣವಿಂಗಾಗೆ ನೂಱನಾಲ್ಖಂಡುಗಮಂ ||
ಪದಿನೆಂಟುಕೊಳಗದೊಳ್ ಕೂ |
ಡಿದ ಮೂಱುಂಬಳ್ಳ ಜೋಳಮಿರೆ ಪೊಂಗಳವೇಂ ||

ಖ |||೩| ಹ ೧ ಖ ೧೦೪ |||೩||| ಲಬ್ಧ ಗ ೧೧||ಹಾರ ೭೩ ದ್ವಿತೀಯ
ಹಾರ ೧೦ ರಾಶಿ ೮೩೯೫.

ಸೂತ್ರಂ. ೭||

ಅಱುವತ್ತು ಖಂಡುಗದೀ |
ರಱುಗಳಮದು ಪೊಂಗಳಯ್ದು ಪಣಮಯ್ದಕ್ಕುಂ ||
ಪೆಱತೇನರ್ಗ್ಘಮದಾಗ |
ಲ್ಕಱುನೂಱ ಖಂಡುಗಕ್ಕೆ ಪೊನ್ನೆನಿತಕ್ಕುಂ ||

ಖ ೬೦|| ೨ ಗ ೫|| ಖ ೬೦೬ ಕ್ಕೆ ಲಬ್ಧ ಗ ೫೫ ಹಾರ ೧೨೧೨ದ್ವಿತೀಯಹಾರ ೧೦
ರಾಶಿ ೬೬೬೬೦೦

ಸೂತ್ರಂ. ೮ ||

ಪನ್ನೆರಡು ಪೊಂಗೆ ಖಂಡುಗ |
ದಿನ್ನೂಱುಂ ಕೊಳ್ಗ ಮತ್ತೆ ಆದಾರಣೆಯೊಳ್ ||
ಮುನ್ನೂಱು ಹೊಂಗೆ ಕೊಂಡೊಡೆ |
ಸನ್ನುತಮತಿ ಭತ್ತವೆನಿತು ಖಂಡುಗಮಕ್ಕುಂ ||

ಗ ೧೨ ಖ ೨೦೦ ಲ್ಲು ಗ ೩೦೦ ಕ್ಕೆ ಲಬ್ಧ ಖ ೫೦೦೦ ಹಾರ ೧೨ ರಾಶಿ ೬೦೦೦೦

ಸೂತ್ರಂ || ೯ ||

ಕಂ|| ಆಱುಂ ಹೊನ್ನಿಂಗಱುವ|
ತ್ತಾಱುಂ ಖಂಡುಗಮದಾಗೆ ಮುನ್ನಾಱುಱುವ ||
ತ್ತಾಱುಂ ಹೊನ್ನಿಗೆ ಭತ್ತವ |
ಬೇಱೊಬ್ಬಂ ಕೊಡುವೊಡೆನಿತುಖಂಡುಗಮಕ್ಕುಂ ||

ಗ ೬ ಕ್ಕೆ ಖ ೬೬ ಲ್ಲು ಗ ೩೬೬ ಕ್ಕೆ ಲಬ್ಧ ಖಂ ೪೦೨೬ ಹಾಗ ೬-ರಾಸಿ ೨೪೧೫೬

ಸೂತ್ರಂ || ೧೦ ||

ಹರನಯನ ಪೊನ್ನಿನರ್ಘಂ |
ಭರವಸದಿಂ ಮೂವತಯ್ದು ಖಂಡುಗಮಾಗಲ್ ||
ಇರೆ ವಿಷಯಾದ್ರಿಯ ಹೊನ್ನಿಗೆ |
ಭರವಸದಿಂ ತಿಳಿಯಪೇೞ ಗಣಿತವಿಳಾಸಾ ||

ಗ ೩ ಕ್ಕೆ ಖ ೩೫ ಗ ೭೫ ಕ್ಕೆಲಬ್ಧ ಖ ೮೭೫| ಹಾರ ೩ ರಾಸಿ ೨೬೨೫

ಸೂತ್ರಂ || ೧೧ ||

ಪಾಗಕ್ಕಿನ್ನೂಱಡಕೆಗ |
ಳಾಗಲ್ಕಿನ್ನೂಱುಮೂಱುಹೊಂಗೇನಕ್ಕುಂ ||
ಈಗಳೆ ಪೇೞ್ ಗಣಕ ಮನೋ |
ರಾಗದಿನೋರಂತೆ ರಾಜವರ್ಮಂ ಮೆಚ್ಚಲ್ ||

ಹ|ಕ್ಕೆ. ಅಡ ೨೦೦ ಲು ಗ ೨೦೩ ಗೆ ಲಬ್ಧ ಅಡ್ಕೆ ೧೬೨೪೦೦೦ ಹಾರ ೧

ಸೂತ್ರಂ ೧೨ ||

ಅಯ್ದುಪಣಂಗೂಡಿದ ಪದಿ |
ನಯ್ದುಂ ಪೊಂಗಡಕೆ ಲಕ್ಕಲೆಕ್ಕದಿನಿರಲಾ ||
ರಯ್ದು ನೆಱೆಯುಱೆಯಲೇಳ್ಪಣ |
ಮೆಯ್ದಿದ ಪಾಗಕ್ಕೆ ಮೂಱೆ ಲೆಕ್ಕಂ ನಿರುತಂ ||

ಗ ೧೫|| ಗೆ ಅಡ್ಕೆ ೧೦೦೦೦೦, ಗ||೨ಕ್ಕೆ ಅಡ್ಕೆ ಲಬ್ಧ ೫೦೦ ಹಾರ ೬೨೦

ಸೂತ್ರಂ || -೩ ||

ಪೂಗಫಲಂ ದ್ವಿಸಹಸ್ರಂ |
ಪಾಗಂಗೂಡಿದಪಣತ್ರಯಂ ವೀಸಕ್ಕಂ ||
ತಾಗಿರೆ ಮೂಱುಂ ಲಕ್ಕ |
ಕ್ಕೀಗಳೆ ತಾವೆನಿತು ಹೊಂಗಳುಂ ತಾನಕ್ಕುಂ||

ಅ ೨೦೦೦ ಗ ೩|ವಿ ೧ ಲೂ ಅಡ್ಕೆ ೩೦೦೦೦೦ ಲಬ್ದಗ ೪೯|| ಹಾರ ೨೦೦
ದ್ವಿತೀಯಹಾರ ೨೦೦

ಸೂತ್ರಂ ೧೪ ||

ವೆಚ್ಚದಪಣವಿಂಗಯ್ಯೊ |
ಅಚ್ಚಿಗೆ ತಾಂ ಕ್ರಮುಕವಾಗೆ ಪೊಂಗಳ್ ಸುತ್ತಾ ||
ನಿಶ್ಚಯದಿ ನೂಱಯಿಪ್ಪ |
ತ್ತಚ್ಚಿಂಗಂ ತಿಳಿಯ ಪೇೞ ಗಣಿತವಿಳಾಸಾ ||

ಹ ೧ ಕ್ಕೆ ಅಡಕೆ ೫೦೦ ಗ ೧೨೦ ಗೆ ಲಬ್ಧ ಅ ೬೦೦೦೦೦ ||

ಸೂತ್ರ || ೧೫ ||

ಕಮಲದಪೂವಂ ವಿಪ್ರೋ '
ತ್ತಮನೊರ್ವಂ ನಿಧಿಯನೀಯಲ್ಕವನೀ ||
ಯಮರರ ನಿಜನಿಲಯಂಗಳ್ |
ಹಿಮಕರಬಾಣೇಂದುವಾಗಲಾ ಪುಷ್ಪಚಯಂ

ವಿಪ್ರ ೧, ಪುಷ್ಪಂ ೯ ವಿಪ್ರ೧೫೧, ಲಬ್ಧ ಪುಷ್ಪಂ ೧೩೫೯.'ಪ್ರಥಮಹಾರಂ ದ್ವಿತೀಯ ಹಾರಂ ನಾಸ್ತಿ.

ಸೂತ್ರ ೧೬

ಶರನಿಧಿ ದಿವಸಕ್ಕರುಹನ |
ಚರಣದೊಳೆಳ್ಳೆಣ್ಣೆ ಮೂಱುಮಾನಮದಾಗಲ್ ||
ಇರದೇೞಿಕ್ಕೊಳಗದ ತೈಲಂ |
ನಿರುತಂ ತಾನೆನಿತು ದೆವಸ ಬರ್ಪುದು ಪೇೞಾ |

ಮಾನಂ ೩ ದಿನ ೪ ಎಣ್ಣೆ ಕೊ ೭, ಲಬ್ಧ ತಿಂಗಳು ೪ ದಿನ ೨೯ ಜಾಮ ೨ ಘಳಿಗೆ, ೫ ವಿಘಳಿಗೆ ೨೦. ಹಾರ ೩. ದ್ವಿತೀಯ ಹಾರ ೩೦.

ಸೂತ್ರ ೧೭

ನೇೞುಲಮರಮಂ ಗಿಳಿಮ |
ತ್ತೇೞುಯೆ ತಾಂ ದಿನಕೆ ಮೇದ ಪಣ್ಣೆನಿತೆನೆ ೮೦ ||
ಬರಗತಿಗಜಶಿಖಿಯಾಗಲ್ |
ವಿಘಳಿಗೆ ಎಂಟಕ್ಕೆ ಕೊಂಡ ಕುಟಕಂ ಪೇೞಾ ||

ದಿನ ೧ ಕ್ಕೆ ಹಣ್ಣು ೩೮೪೦ ಲು, ವಿಘಳಿಗೆ ೮ಕ್ಕೆ ಲಬ್ಧ ಹಣ್ಣು ೮.
ಪ್ರ ಥಮಹಾರ ೩೮೪೦, ದ್ವಿತೀಯಹಾರ ನಾಸ್ತಿ.

ಸೂ|| ೧೮ ||

ಸಿರಿವಡೆದನೂಱು ಎಲೆ |
ಗರೆಹಾಗನುದಾಗೆ ಮೂಱುಪಣಹಾಗಕ್ಕಂ ||
ಕರೆಯೆಲೆಯೆನಿತೆಂಬುದ ನೀಂ |
ನಿರುತದೊಳಂ ತಿಳಿಯ ಪೇೞ ಗಣಿತವಿಳಾಸಾ ||

ವಿ ೨ || ಎಲೆ ೧೦೦' ಹ ೩|೦ ಲಬ್ಧ ೨೬೦೦, ಪ್ರಥಮಹಾರ ೧೦
ದ್ವಿತೀಯಹಾರ ನಾಸ್ತಿ.

ಸೂತ್ರಂ || ೧೯ ||

ಲಕ್ಕಸಂಕಡಕೆ ಮಾಱಲ್ |
ಚಿಕ್ಕನೆ ತಾಂ ಪೊಂಗಳಯ್ದು ಮಿಪ್ಪತ್ತಾಗಲ್ ||
ಚೊಕ್ಕಡಿಕೆಗೆ ನೂಱಕೆ |
ಲೆಕ್ಕಮುದೇನಕ್ಕುಮೆಂಬುದಂ ಪೇೞ್ಗಣಕಾ ||

ಅಡಕೆ ೧ ೦೦೦೦೦ ಗ ೨೦ ಅಡ್ಕೆ ೧೦೦ ಲಬ್ಧವಿ ೪ ಹಾರ ೧೦೦೦೦೦

ಸೂತ್ರಂ|| ೨೦ ||

ಲಕ್ಕಕೆ ಮೂವತ್ತಯ್ದುಂ |
ಮಿಕ್ಕುಪಣಂ ಮೂಱದಾಗೆ ಪೇೞ್ದೆಯೊಳೆಲ್ಲಂ ||
ಲಕ್ಕದಶಮಬ್ಧಿಕೋಟಿಗೆ |
ಲೆಕ್ಕಮುದೆನಿತೆಂದು ಪೇೞ ಗಣಿತವಿಳಾಸಾ ||

ಅ ೧೦೦೦೦೦ ಗ ೩೫ ಹ ೩ ಅಡ್ಕೆ ೪೧೦೦೦೦೦೦ ಲಬ್ಧಗ ೧೪೪೭೩ ಹಾರ ೧೦೦೦೦೦ ದ್ವಿತೀ
–ಹಾರ ೧೦.

ಸೂತ್ರಂ|| ೨೧ ||

ಮುಪ್ಪಾಗಮೂಱುವೀಸ |
ಕ್ಕುಪ್ಪಾಗಲ್ ತಪ್ಪದಯ್ದುಳಂ ತಾನಾಗಲ್ ||
ಇಪ್ಪತುಪಣ ಮುಪ್ಪಾಗಕೆ |
ತಪ್ಪಿಲ್ಲದೆ ತಿಳಿಯೆ ಪೇೞ ಗಣಿತವಿಳಾಸಾ ||

ಹ ||| ವಿ ೩ ಕ್ಕೆ ಉಪ್ಪು ಕೊ ೫ ಲ್ಲು ಗ ೨ ಹ ||| ಕ್ಕೆ ಲಬ್ಧ ಖ ೫||| ಬ ||೧
ಹಾರ ೧೮| ದ್ವಿತೀಯಹಾರ ೨೦.

ಸೂತ್ರಂ || ೨೨ ||

ಜೀವಿತದ ಸೂತ್ರಂ-

ಕಂ|| ವರುಷಕ್ಕೆ ಜೀವಿತಂ ಪೊ |
ನ್ನೆರಡುಪಣಂ ಪೊಂಭತಾಗಲೇೞುಂ ತಿಂಗಳ್ ||
ವರೆ ನಡೆದು ಮಾಣ್ದವಂಗೊ |
ಪ್ಪಿರೆ ಕೊಡುವೊಡವಂಗೆ ಲೆಕ್ಕದಿಂದೇನಕ್ಕುಂ ||

ವ ೧ಕ್ಕೆ ಜೀವಿತ ಗ೨|| ಹ೪ ತಿಂ ೭ ದಿನ ೧೫ ಲಬ್ಧ ಗ ೧ ಹ ೮ ವಿ ೨|| ಹಾರ ೩೬೦ ದ್ವಿತೀಯ ಹಾರ೧೦ ಗುಣಿಸಿದ ರಾಶಿ ೭೫೨೫

ಸೂತ್ರ || ೨೩ ||

ವರುಷದ ಮೇಲಿತ್ತಿಂಗ |
ಳ್ವರೆಗಂ ಗದ್ಯಾಣವಯ್ದು ಪಣವೆಂಟಾಗಲ್ ||
ಅರೆದಿಂಗಳಿರ್ದು ಮಾಣ್ದವ |
ಗಿರದೆನಿತೆಂಬುದನೆ ಪೇೞ ಗಣಿತವಿಳಾಸಾ ||

ವ, ೧ ತಿಂ ೨ ದಿ ೧೫ ಕ್ಕೆ ಗ ೫|| ಹ ೩ ದಿನ ೧೫ ಕ್ಕೆ ಲಬ್ಧ ಹ ೨ ಹಾರ ೪೩೫ ದ್ವಿತೀಯ ಹಾರ ೧೦

ಸೂತ್ರಂ|| ೨೪ ||

ದಿನವೆರಡುಮಾಸವೊಂದ |
ಕ್ಕನುನಯದಿಂ ಪೊಂಗಳೊಂದು ಪಣವೆಂಟಾಗಲ್ ||
ವಿನಯದೊಳೆ ಮಾಸವೆಂಟಕೆ |
ಮನವೊಲಿಯಲ್ ತಿಳಿಯೆ ಪೇೞ ಗಣಿತವಿಳಾಸಾ ||

ತಿಂ ೧ ದಿನ ೨ಕ್ಕೆ ಗ ೧|| ೩ ತಿಂ ೮ಕ್ಕೆ ಲಬ್ಧ ಗ ೧೩|| ಹಾರ ೩೨ ದ್ವಿತೀಯ ಹಾರ ೧೦ ಗುಣಿಸಿದ ರಾಶಿ ೪೩೨೦

ಸೂತ್ರಂ || ೨೫ ||

ಎರಡುಂ ಗದ್ಯಾಣಂ ಪಣ|
ವೆರಡುಂ ಪಾಗಂಗಳೆರಡು ವರುಷಕ್ಕಾಗು ||
ತ್ತಿರೆ ಮುನ್ನವೆಂಡುಪಣಮುಂ|
ಸಿರುತಂ ತಾನೆಷ್ಟು ದಿವಸ ಬರ್ಪುದು ಪೇೞಾ ||

ಗ ೨ ಹ ೨||ವರು ೧ ಮುಂಜೀವಿತ ಹ ೨ ಲಬ್ಧ ತಿಂ ೧ ದಿ ೨ ಹಾರ ೯೦

ಸೂತ್ರಂ || ೨೬ ||

ವರುಷಕ್ಕೆ ಮೂಱುವೊನ್ನಂ |
ನಿರುತಂ ಸ್ಥಿತಾಂ ಪಡೆವ ಭಂಟನುಱುದೆವಸಂ ಪ ||
ನ್ನೆರಡುಂ ದಿವಸಮದಾಗಲ್ |
ಧರೆ ಮೆಚ್ಚಲ್ ತಿಳಿಯೆ ಪೇೞ ಗಣಿತವಿಳಾಸಾ ||

ವ ೧ ಗ ೩ ಲ್ಲು ವುಱು ದಿನ ೧೨ ಕ್ಕೆ ಲಬ್ಧಗಂ ಹ ೧ ಹಾರ ೩೬೦

ಸೂತ್ರಂ || ೨೭ ||

ಮಾಸಕ್ಕೆ ಮೂಱುಪಣಮಂ |
ಲೇಸಾಗಿಯೆ ಪಡೆವ ಭಂಟನುಱುದೆವಸಂ ತಾಂ ||
ವಾಸವಸಂಖ್ಯೆಯ ಲೆಕ್ಕಮು |
ನೋಸರಿಸದೆ ತಿಳಿಯೆ ಪೇೞ ಗಣಿತವಿಳಾಸಾ ||

ತಿಂ ೧ ಕ್ಕೆ ಜೀವಿತ ಹ ೩ ಲು ವುಱುದಿನ ೧೨ ಕ್ಕೆ ಲಬ್ಧಗ ಹ ೧ ವೀ ೪ ಹಾರ ೩೦.

ಸೂತ್ರಂ || ೨೮ ||

ತಿಂಗಳಿಗಾಱುಂಪಾಗವು |
ಜಂಗುಳಿಗಾವಂಗೆ ಕೊಡಲು ವುಱುದೆವಸಂ ತಾಂ ||
ಅಂಬುಧಿ ಸಂಖ್ಯೆಯ ಲೆಕ್ಕಮು |
ಪಿಂಗದೆ ನೀಂ ತಿಳಿಯೆ ಪೇೞ ಗಣಿತವಿಳಾಸಾ

ತಿಂ ೧ ಗೆ ಜೀವಿತ ಹ ೧|| ವುಳಿ ದಿನ ೪ ಕ್ಕೆ ಲಬ್ಧವೀ ೪ ಹಾರ ೩೦.

ಸೂತ್ರಂ || ೨೯ ||

ದಿನಪಡಿಯ ಸೂತ್ರ

ಮೂಱುದೆವಸಕ್ಕೆ ಖಂಡುಗ |
ದಃಱುಂ ಕೊಳಗಂಗಳೆರಡು ಬಳ್ಳಂ ಮಾನಂ ||
ಮೂಱಾಗಲ್ ವರುಷದ ಮೇ |
ಲಾಱುಂ ದಿವಸಕ್ಕೆ ಭತ್ತ ತಾನೆನಿತಕ್ಕುಂ ||

ದಿ ೩ ಕ್ಕೆ ಖ ೧| ೧|| ೩ ವ ೧ ದಿ ೬ ಕ್ಕೆ ಲಬ್ಧ ಖಂ ೧೬೨||| ಬ ೩||ಹಾರ ೩
ದ್ವಿತೀಯ ಹಾರ ೩೨೦ ರಾಸಿ ೧೫೬೨೮೨

ಸೂತ್ರಂ || ೩೦ ||

ದಿನವೊಂದಕ್ಕಿಕ್ಕೊಳಗಿಂ |
ಮನಜೋಳಂ ಬೀಯಮಾಗಲೊಂದಬ್ದದ ಮೇ ||
ಲೆನಿಸುವ ಮೂಱುಂದಿಂಗಳು |
ದಿನವೊಂಭ (ತ್ತ) ಕ್ಕೆ ಭತ್ತ ತಾನೆನಿತಕ್ಕುಂ ||

ದಿ ೧ ಕ್ಕೆ ೩೦ ಕೊ ೨ ಮಾ ೨ ವ ೧ ತಿಂ ೩ ದಿ ೯ ಕ್ಕೆ ಲಬ್ಧ ೩ ೪೮|||೦|೨ ಹಾರ ೧
ದ್ವಿತೀಯಹಾರಂ ೩೨೦ ಬಂದರಾಸಿ ೧೫೬೦೬

ಸೂತ್ರಂ || ೩೧ ||

ಮಿಗಿಲೇಟು ದಿನಕ್ಕಜುಖಂ |
ಡುಗದಟುಗಳ ಬೀಯಮಾಗೆಪೇಲ್ ಸಾಸಿರ ಖಂ |
ಡುಗದೆರಡು ಕೊಳಗ ದಿಬ್ಬಳ ||
ಮಿಗಿಲೆನಿಸುವ ಜೋಳಮೆನಿತುದಿವಸಕ್ಕಕ್ಕಂ

೩ ೬|ಕೊ ೧ ದಿ ೭ ಕ್ಕೆ ಜೋಳ ೩ ೧೦೦೦ |ಕೊ ೨|| ಲಬ್ಧ ವ ೩. ತಿಂ ೧ ದಿನ ೧ ಚೌ೨೧
ಹಾರಂ ೫೦೪ ದ್ವಿತೀಯಹಾರಂ ೩೬೦ ರಾಶಿ ೫೬೦೦೭೦.

ಸೂತ್ರ || ೩೨ ||

ರಾಸಿಯ ಗಡಿಬದ ಲೆಕ್ಕಮು |
ನೋಸರಿಸದೆ ದಶಕದಿಂದೆ ಪೊಯ್ದಾ ಧನಮುಂ ||
ಸಾಸಿಗನಾಗಿಯೆ ಲೆಕ್ಕಮು |
ನೋಸರಿಸದೆ ವೊತ್ತೆ ಬರ್ಕುಮೆಂಬುದು ನಿರುತಂ ||

ಸೂತ್ರಂ || ೩೩ ||

ತೊಂಭತ್ತುಮೆಟ್ಟಗಡಿಬ ।
ಕ್ಕಂಬಾಗಿರ್ದಱಿಮುಗದ್ಯಾಣಂ ತೆಱೆಯಾಗಲ್ ||
ಕಂಭವ ಟುವತ್ತು ವಾಜಿಗೆ |
ಪೊಂಬೆನಿತೆಂಬುದನು ಪೇಟ ಗಣಿತ ವಿಳಾಸಾ

ಗಡಿಬ ೯೦ ಗ ೧೦ ಗಡಿಬ ೬೦ ಪ್ರಥಮ ಹಾರಂ ೩೬೦೦ ದ್ವಿತೀಯ
ಹಾರಂ ೩೬೦೦ ದ್ವಿತೀಯ ಹಾರಂ ೧೦ ೧೦. ?

ಸೂತ್ರಂ || ೩೪||
ಮತ್ತರಸೂತ್ರಂ:–

ಮತ್ತರು ಪದಿನಾಱಕ್ಕೊಂ |
ಭತ್ತುಂ ಗದ್ಯಾಣಮಾಗ ತೆಱೆ ಸಾಸಿರದೆ ||
ಪ್ಪತ್ತೇಟು ಹೊಂಗೆ ಉಗೆಯಲ್|
ಮತ್ತರೆನಿತ್ತೆಂಬುದನೆ ಪೇಟ ಗಣಿತವಿಳಾಸಾ
ಗ ೯ ಮ ೩೬ ಗ ೧೦೭೭ ಲಬ್ಧ ಮತ್ತ ೧೯೧೪ ಕ್ಕಂ ೬೦೦ ಹಾರಂ

೮, ದ್ವಿತೀಯ ಹಾರಂ ೪ ರಾಸಿ ೧೪೧೧೫ ಗುಣಿಸಿದುದು ೧೭೨೩೨

ಸೂತ್ರಂ || ೩೫ ||

ಎರಡುಂ ಮತ್ತರುಮೆಂಭ |
ತ್ತೆರಡುಂ ಕಂಭಕ್ಕೆ ಮೂಱುಹಣ ಮುಪ್ಪಾಗಂ ||
ನಿರುತಂ ತೆಱೆಯಾಗಲ್ ಮ |
ತ್ತರುನಾಲ್ವತ್ತೊಂದು ಕಂಭ ಕ್ಕೈಗೇನಕ್ಕುಂ

ಮ| ೨ ಕಂ ೮೨ಕ್ಕೆ ಗಂ ೩|| ಲ್ಲು ಮತ್ತ ೧ ಕಂಭ ೪೧ ಕ್ಕೆ ಲಬ್ದ
ಹ ೧||| ವೀ ೨|| ಹಾರ ೧೮, ದ್ವಿತೀಯ ಹಾರಂ ೪ ರಾಸಿ ೧೪೧೧೫

ಸೂತ್ರಂ || ೩೬ ||

ನಿರುತಂ ತಾನೆನಲೊವ್ಮ |
ತ್ತರಿಗೆ ಪಣಂ ಮೂಱುಪಾಗವೆರಡುತೆಱೆಯಾಗೆ ||
ಕರಿರಸ ವಸುಮತಿಯೊಳ್ ತಾಂ |
ಬೆರಸಿದ ಮುಪ್ಪಾಗಗಂಭಗೈಗೇನಕ್ಕುಂ

ಮ ೧ಕ್ಕೆ ಹ ೩|| ಮತ್ತ ಕಂ ೧೬೮ಕ್ಕೆ ಲಬ್ಧಗಂ ಹ ೫||| ವಿ ೨ ಕಾ ೨||
ಹಾರಂ ೩೬೦೦ ಗುಣಿಸಿದ ರಾಶಿ ೪೫೦.

ಸೂತ್ರಂ || ೩೭ ||

ಹೊಟ್ಟನ ಶೇಷಾಂತರಕ್ಕೆ ಸೂತ್ರಂ:-
ಚಂ|| ಇರೆ ಕಡೆಗೊಟ್ಟುದಂತ್ಯದೊಳದರ್ಕೆ ತುಷಂ ಬೆರಸಿರ್ದ ರಾಶಿಯೊಳ್ |
ಪರಿಕಿಸಲಲ್ಲಿ ತೂಱಲಳೆದಿರ್ದುದು ಮಧ್ಯದೊಳಲ್ಲಿ ತೂಱೆ ಬಿ ||
ತ್ತರದೊಳೆ ಶುದ್ಧಮಾಗುಱದ ರಾಶಿಯೊಳಿಂತಿರೆ ರಾಜವರ್ಮನಿಂ |
ಧರೆಗಱಿವಂತು ಪೇಳ್ದನೊಲವಿಂತಿದು ಹೊಟ್ಟನ ಶೇಷದೊಡ್ಡನಲ್ ||

ಸೂತ್ರಂ || ೩೮ ||

ನೂಱುಖಂಡುಗ ಮೂಗೊಳ |
ಸೇಱಂ ಕಡ ಗೊಂಡು ತಿದ್ದಿ ಕೊಡುವಲ್ಲಿಯದಂ ||
ಬೇಱುಗೊಳನುಂ ತೂಱಲ್ |
ಪಾಱದ ರಜವೆರಡು ಬಳ್ಳ ಪೋಗಲ್ಕೇನೋ

ಶುಕೊ ೩ಂ| ೦|| ತುಷ ೩ಂ ೧ಲ್ಲು ಶುಖ ೧೦೬ ಕ್ಕೆ ತುಷಲಬ್ಧ ೩೧೫·|||೧ ಹಾರ೭೦
ರಾಸಿ ೫ಂ೯೫೭

ಸೂತ್ರಂ || ೩೯ ||

ಕಡಗೊಂಡನೂಱುಖಂಡುಗ |
ದೆಡೆಗೆ ಕೊಡಲ್ಕಿರ್ದ ತುಷದೊಳೇಱುತ್ತೊಳಗಮುಮಂ||
ಬಿಡೆ ತೂಱೆ ಮೂಱು ಬಳ್ಳಂ |
ಕಡ ಲೆಕ್ಕದೊಳೆನಿತನಳವ ನಾನೂಱಕ್ಕುಂ ||

ಶುಖ ೧ ಕೆ ತುಷಖ ।೨ ಶುಖ ೧೦೦ ಕ್ಕೆ ತುಷಲಬ್ಧ ಖ ೧-೨-ಹಾರಂ ೨೫
ದ್ವಿತೀಯಹಾರಂ ೨೦ ರಾಸಿ ೫೬೦೦೦

ಸೂತ್ರಂ || ೪೦ ||

ಚಂ|| ನೆಗಱ್ದಿರೆ ಮೂಱುಸಾಸಿರದ ನೂಱುಖಂಡುಗದದ್ಧೈದು ಮಾನಮುಂ |
ಮಗುೞ್ದೆ ಕೊಡಲ್ ರಜಂಬೊರೆದರಾಶಿಯೊಳಯ್ದು ಳದೇೞುಮಾನಮುಂ ||
ತೆಗೆದು ಬೞಕ್ಕೆ ತೂಱ್ದೆ ರಜವೊಬ್ಬಳವಾಗಲು ಪೋಗೆ ಪೇೞ ನೀಂ |
ಬಗೆಗೊಳಲಂತದಲ್ಕಳಿವ ಭತ್ತಮನೆಂತೆನಿತೆಂಬ ಲೆಕ್ಕಮುಂ ||

ಶುದ್ಧ ಖ ಮಾ ೩ ತು ಖಂ ।೦। ೩ ಶುದ್ಧ ಖ ೩೧೦೬, ೦ ಲು ೧ ಮಾ೯ ಕ್ಕೆ
ಲಬ್ಧ ತುಷ ಖ ೩೨೫೫||೪ ಮಾ ೧ ಹಾರ ೮೩ ದ್ವಿತೀಯಹಾರ ೩೨೦ ಗುಣಿಸಿದ ರಾಶಿ
೮೬೪೭೧೪೭೫.

ಸೂತ್ರಂ || ೪೧ ||

ಪರಿಕಿಸುವ ರಾಶಿ ನಡುವಿರೆ|
ಪರೀಕ್ಷೆಯೊಳ್ ತಿಳಿದ ರಾಸಿಯಿದು ಮೊದಲೊಳ್ ಬಿ ||
ತ್ತರದೀಪ್ಸೆಯೊಳಂತ್ಯದೊ ।
ಳಿರೆ ತಪ್ಪದು ಪಣಮುದುಚಿತಗಣಿತವಿಳಾಸಾ ||

ಸೂತ್ರಂ || ೪೨ ||

ಮ|| ಮೊದಲೊಳ್ಸಾಸಿರದೇೞು ನೂಱುಪದಿನಾಱುಂಖಂಡುಗಂ ತೀವಿ ದೂ ।
ರದಿ ಕೊಂಡೊಯ್ದುಳಿಯೂರಲಂತಳೆಯಲೇೞುಂ ಖಂಡುಗಂ ಗುಂದೆ ಮಾ ||
ಣದೆ ನೂಱೊಂದೆನಿಸಿರ್ದ ಖಂಡುಗದೊಳಿಮ್ಮಾನಂ ಸಮಂತೊಂದಿದಾ |
ಪದಿನಯ್ದುಂ ಕೊಳಗಂಗಳಂ ತರಲದೊರ್ವಂ ತೀವಿದರ್ಘಂ ತೆವೆಂ ||

ಹಿರಿದರಲ್ಲಿ ಅಳಿದ ಖ ೧೭೦೯ ಕಿರಿದರಲ್ಲಿ ಅಳಿದ ಖ.೧೭೧೬
ಹಿರಿದರಲ್ಲಿ ಖ ೧೦೧ ಮಾ ೨ ಕೇ ಕಿಱುದುಲಬ್ಧ ಖ ೧೦೨ ೩ ಹಾರಂ
೫೭೮೮೮ಂ ಗುಣಿಸಿದುದುರಾಶಿ ೫೯೧೩೨೫೯೨೭||

ಸೂತ್ರಂ || ೪೩ ||

ಚಂ|| ನಿರುತಮೆ ತೀವಿದೂರ ಪದಿನಾಗುಳದೊಳ್ ಬೆರೆಸಿರ್ದ ನಾಲ್ಕುಸಾ ।
ಸಿರದಱುನೂಱು ಖಂಡುಗಮನೊಯ್ದೊಡೆ ತಾನಳಿಯೂರ ಮೂಱುಸಾ ||
ಸಿರಮೆನೆ ಮತ್ತೆ ಬಾಣತುರಗೇಂದ್ರಿಯ ಖಂಡುಗದೇೞುಬಳ್ಳಮುಂ |
ತರಲಳಿಯೂರ್ಗೆ ಪೇೞದೆನಿತೆಂಬುದನುತ್ತಮಭವ್ಯಭೂಷಣಾ ||

ಕೆಱುದುಕೊಳಗ ಖ ೪೬೦೦|| ೪ ನು ಹಿರಿದರಲ್ಲಿ ಆಳೆಯಲು |೩೦೦೦ ಕೆಱುದುಖ ೫೭೫೧||| ಕ್ಕೆ ಲಬ್ಧಹಿರಿದು ಖ ೩೭೫ ಹಾರಂ ೩೬೮೦೫೬ ಗುಣಿಸಿದುದು ೧೩೮೦೨೧೦೦೦||

ಒಂದರ್ಘ್ಯದಿಂಕೊಂಡು, ಮತ್ತೊಂದರ್ಘ್ಯದಿಂ ಕೊಡುವುದರ್ಕೆ ಸೂತ್ರಂ:—

ಸೂತ್ರಂ || ೪೪ ||

ಕೊಡುವುದವರ್ಘ್ಯಂ ಮೊದಲೊಳ್ |
ನಡುವೆಸೆಯೆ ಕೊಡುವುದು ಧಾನ್ಯದರ್ಘ್ಯಂ ಕಡೆಯೊಳ್ ||
ಕೊಡುತಿರಲು ಪೇೞ್ವನೊಂದಂ |
ಕೊಟ್ಟೊಂದಂ ಕೊಂಬುದರ್ಕೆ ಪೇೞ್ವಂ ರಾಜಂ ||

ಸೂತ್ರಂ || ೪೫ ||

ನಿರುತಂ ಪಣವಿಂಗಿರ್ಭಾ |
ಸಿರದಯ್ವತ್ತಡಕೆ ಪರ್ಣ ಪಣವಿಂಗೈಸಾ ||
ಸಿರದೇೞ್ನೂಱನೆ ಮೂಸಾ |
ಸಿರದೆಪ್ಪತ್ತಯ್ದು ಅಡಕೆಗೆಲೆಯೆನಿತಕ್ಕುಂ ||

ಗಂ ಹ ೧ ಕ್ಕೆ ಅಡ್ಕೆ ೨೦ ೫ಂ ಕ್ಕೆ ಗಂ ಹ ೧ ಎಲೆ ೫೭೦೦ ಧಾರಶೆಯಲ್ಲಿ ಅಡ್ಕೆ ೩೦೭೫ ಕ್ಕೆ ಎಲೆ ಲಬ್ಧ ೮೫೫ಂ ಹಾರ ೨೦೫ಂ ಗುಣಿಸಿದುದು ೧೭೫೨೭೫ಂ

ಸೂತ್ರಂ || ೪೬ ||

ಪಾಗಕ್ಕಱುಗಳ ಜೋಳಂ |
ಪಾಗಕ್ಕಂ ನೆಲ್ಲು ನಾಗಳಂ ತಾನಾಗ ||
ಲ್ಕೀಗಳೆ ನೆಲ್ಲುಂ ಜೋಳ |
ಕ್ಕಾಗಿ ಕುಡಲ್ ನೂಱುಖಂಡುಗಕ್ಕೇನಕ್ಕುಂ ||

||– ಹ|ಂ ಕ್ಕೆ ನೆಲ್ಲು ೪.ಕ್ಕೆ ಜೋಳ ಖಂ| ೧ ನೆಲ್ಲು ಖ ೧೦೦ ಲಬ್ಧ ಖ ೧೫ಂ ಹಾರಂ ೪ ದ್ವಿತೀಯ ಹಾರ ೨ಂ ರಾಸಿ ೧೨೦೦೦

ಸೂತ್ರಂ || ೪೭ ||

ತೊಗರಿಯು ಸಾವಿರದಱು ಖಂ
ಡುಗ ಷೋಡಶಕೊಳಗಕೆ ಕಡಲೆಯದೆನಿತಳೆವಂ (ವೋಗಾ) ||
ತೊಗರಿಯಱುಖಂಡುಗಂ ತಾಂ |
ಮಿಗೆ ಕಡಲೆಯದೇೞುಖಂಡುಗಂ ನಡೆವರ್ಘ್ಯವೆಂ ||

ತೊಗರಿ ಖ ೬ ಕಡಲೆ ಖ ೭ ಲ್ಲು ತೊಗರಿ ಖ ೧೦೦೬||| ೧ ಕ್ಕೆ ಲಬ್ಧ ಕಡಲೆ ಲೆಕ್ಕ ೧೧೭೪|೨| ಹಾರಂ ೧೨ಂ ಗುಣಿಸಿದ ರಾಸಿ ೧೪೮೯೫೨.

ಸತಂಖ್ಯಾ || ೪೮ ||

ಒಕ್ಕಳ ನೆಲ್ಲಿಂಗಕ್ಕಿಯ |
ನಿಕ್ಕುವರೊಂಭತ್ತುಮಾನವರೆ ಕೊಟ್ಟಣಮಂ ||
ಇಕ್ಕಲಱುವತ್ತು ಖಂಡುಗ |
ಗಕ್ಕಿಯ ತಾನೆನಿತನಳೆವರಾ ಕೊಟ್ಟಣಗರ್ ||

ಖಂ ನೆಲ್ಲು ಕೊ ೧ ಅಕ್ಕಿ ೦|| ೧ ನೆಲ್ಲು ಖ ೬೦ ಲಬ್ಧ ಖ ೩೫-೨|| ಹಾರ ೧ ದ್ವಿತೀಯ ಹಾರಂ ೧೨೮ಂ ರಾಸಿ ೪೫೬೦೦.

ಸೂತ್ರಂ || ೪೯ ||

ನಾಗುಳ ಗೋದಿಗೆ ಕಣಿಕವ |
ನಾಗಳೆ ತಾನಯ್ದು ಕೊಳಗದಿಮ್ಮನವರೆಯಂ ||
ಭೋರ್ಗರೆದು ಬೀಸೆ ಖಂಡುಗ |
ಗೋಧಿಯ ನೂಱಕ್ಕೆ ಯೆನಿತು ಕಣಿಕಂ ಕೊಡುವರ್ ||

ಗೋಧಿ ಕೊ ೪ ಕ್ಕೆ ಕಣಿಕಂ|ಂ ಮಾ ೨|| ಗೋಧಿ ಖ ೧೦೦ ಕ್ಕೆ ಲಬ್ಧ ಕಣಿಕ ಖ ೧೨೮|| ೩ ಮಾ೨ ಹಾರ ೪ ದ್ವಿತೀಯ ಹಾರ ೧೨೮ಂ ಗುಣಸಿದ ರಾಶಿ ೬೬೦೦೦೦

ಸೂತ್ರಂ || ೫೦ ||

ಅಱುಗಳಯೆಳ್ಳಿಂಗೆಣ್ಣೆಯ |
ನೆಱೆವರ್ ತಾನಯ್ದು ಬಳ್ಳದಿಮ್ಮನವರೆಯಂ ||
ಅಱುವತ್ತು ಖಂಡುಗೆಳ್ಳಿಗೆ |
ಯೆಱೆವೆಣ್ಣೆಯದೆನಿತು ಪೇೞ ಗಣಿತವಿಳಾಸಾ ||

ಎಳ್ಳು ಕೊ ೬ ಕ್ಕೆ ಎಂಣ್ಣೆ ಕೊ ೧|೨|| ಎಳ್ಳುಖಂ ೬೦ ಕ್ಕೆ ಲಬ್ಧ ಖ ೧೪-೧|| ಹಾರಂ ೬ ದ್ವಿತೀಯ ಹಾರಂ ೧೨೮ಂ ಗುಣಿ(ಸಿ)ದರಾಸಿ ೧೦೮೦೦೦

ಸೂತ್ರಂ || ೫೧ ||

ವಟ್ಟಾಂತರಕ್ಕೆ ಸೂತ್ರಂ:—

ಮ|| ಬರೆ ವಟ್ಟಾಯಿಸು ಪೊಂಗಳಂತ್ಯದೊಳಿರಲ್ ತನ್ನಾಮಗದ್ಯಾಣಮಂ |
ಬರೆ ಮತ್ತಾದಿಯೊಳಲ್ಲಿ ನಿನ್ನಱಕೆಯಾ ಗದ್ಯಾಣಮಂ ಮಧ್ಯದೊಳ್ ||
ಬರೆ ವಟ್ಟಂ ದೆಱುವಲ್ಲಿ ವಟ್ಟವಿರಲಿಂತೀ ವಟ್ಟದೊಡ್ಡೆಂಬುದಂ |
ಧರೆಗೊಪ್ಪುತ್ತಿರೆ ಪೇೞ್ದನುತ್ತಮಯಶಂ ಶ್ರೀರಾಜವರ್ಮೋತ್ತಮಂ ||

ಸೂತ್ರಂ || ೫೨ ||

ಒಂದುಪಣವಡ್ಡವಟ್ಟಂ |
ನೆಱೆ ಕೀೞ್ಪೊನ್ ನೆಗೞ್ದ ಮೇಲ್ಪೊನ್ನೆನೆ ಪಂ ||
ನ್ನೊಂದು ವರೆ ಕೀೞ್ಪೊನ್ನಳುಂ |
ನಿಂದಾ ಮೇಲ್ಪೊಂಗಳೆನಿತು ಪೇೞ್ಪೈ ಗಣಕಾ ||

ಕೀೞು ಗ ೧– ೧|| ಕ್ಕೆ ಮೇಲು ಗ ೧ ಕೀಳು ಗ೧೧||ಂಗೆ ಮೇಲು ಲಬ್ದ ಗ ೧೦|| ಹಾರ ೮೬ ರಾಸಿ ೪೬೦||

ಸೂತ್ರಂ || ೫೩ ||

ಕೀೞಿನಿಸಿದ ಪೊನ್ನ ಪಣಂ |
ಬೇಳೆಯನೀಯಲ್ಕೆ ಪಟ್ಟಮಂ ಸಲೆ ಮೇಲ್ ಪೊಂ ||
ಗಾಳಾಪಮದಿಪ್ಪತ್ತೇೞ್ |
(ಕೇಳಾ) ಮೇಲ್ಪೊಂಗಳೆನಿತು ಕೀೞ್ಪೊನ್ನಕ್ಕುಂ ||

ಮೇಲು ಗ ೧ ಗೆ ಕೀೞುಗ ೧–೧ಮೇಲು ಗ ೨೭ ಕ್ಕೆ ಲಬ್ಧಿ ಗ ೩೦ ೦| ಹಾರಂ ೧ ದ್ವಿತೀಯ ಹಾರಂ ೮೦ ಗುಣಿಸಿದ ರಾಸಿ ೨೪೦೩

ಸೂತ್ರಂ || ೫೪ ||

ಸೂೞಿಪ್ಪತಯ್ದು ಪೊನ್ನುಂ |
ಮಾೞ್ಪೊಪ್ಪುವುದರ್ಕೆ ಪಟ್ಟವಿಪ್ಪಣಪಡ್ಡಂ ||
ಮೂೞುಂವೀಸಮೆನಲ್ಕೇ |
ೞ್ನೂಱುಂ ಪೊನ್ಪಟ್ಟಮುೞಿದು ತಾನೆನಿತಕ್ಕುಂ ||

ಗ ೧೭೫–೦೩ ಪಟ್ಟ ೨ || ೨ ಗ ೭೦೦ ಗೆ ಲಬ್ಧ ಗ ೧|| ೬ ಹಾರಂ ೧೭೫ ದ್ವಿತೀಯ ಹಾರ ೨೦೦

ಸೂತ್ರಂ || ೫೫ ||

ಸಲುಕೆಯ ವಟ್ಟಾಂತರಕ್ಕೆ ಸೂತ್ರಂ—

ನಿಲುಗಡೆಯೊಳ್ ವಟ್ಟಯಿಸುವ |
ಸಲುಕೆಗಳಂತರ್ಘ್ಯ ಮೊದಲೊಳಲುಕೆಯುದೆನಿತುಂ ||
ಸಲುಕೆಗಳರ್ಘ್ಯಂ ನಡುವಿರೆ |
ಸಲುಕೆಯ ವಟ್ಟಕ್ಕೆ ದೊಡ್ಡರಾಜನ ಮತದಿಂ |

ಸೂತ್ರಂ || ೫೬ ||

ಪೊಂಗೇೞು ಮೇಲುಸಲುಗೆಗೆ |
ಪೊಂಗಂ ಕೀೞ್ಸಲುಗೆ ಯೆಂಟುವರೆಯಾಗಲ್ ತಾಂ ||
ಪೊಂಗಯ್ದು ಕೀೞ್ಸಲುಗೆಯಾ |
ಪಾಂಗಂಗೂಡಿದ ವೀಸಕಾಣಿಗೆನಿತಕ್ಕುಂ ||

ಕೀೞುಗ || ೩ || ಮೇಲುಗ ೦||೨ ಗೆ ಲಬ್ಧ ಹ ೪-೨|| ಹಾರ ೬೮೦
ರಾಸಿ ೨೯೭೫ ||

ಸೂತ್ರಂ || ೫೭ ||

ಮ|| ಪ್ರ|| ನಿರುತಂ ಪೊಂಗೈದುಪನ್ನೊಂದುವರೆ ಸಲುಗೆಯುಂ ಬೇಳೆ ಕೀೞೊಪ್ಪುವಂತಾ |
ಗಿರೆ ಪೊನ್ನೊಂಭತ್ತು ತಾನೊಂದುವರೆ ಸಲುಗೆಯುಂ ಮೂಱುವೀಸಂಸಮಂತಾ ||
ಗಿರೆ ನಾಲ್ಕುಂ ವೀಸಮುಂ ಮುಕ್ಕಣಿ ಪಣಸಹಿತೇೞೊಪ್ಪುವಂತಿರ್ದ್ದುದಕ್ಕಾ |
ದರದಿಂದಂ ಪೇೞ ನೀಂ ಭಾವಿಸಿದಱನಱುವಂತಾಗಿರಲ್ ರಾಗದಿಂದಂ ||

ಗ ಮೇಲು ೨ ೪|| ಹ ಕ್ಕೆ ಕೀಲುಗ-೧-೩|| ಗೇ ಮೇಲುಗ ||೨ ವಿ ೪||ಗೆ ಲಬ್ದಗಂ||-೩-೨||
ಹಾರಂ ೭೭೨ ದ್ವಿತೀಯ ಹಾರಂ ೮ಂ ರಾಸಿ ೫೩೮೪೭೦||

ಸೂತ್ರಂ || ೫೮ ||

ಪಲವಿರೆ ಪೋತಾಶ್ರಯದಿಂ |
ಸುಲಲಿತದಿಂ ಮೂವತಯ್ದು ಪೊಂಗಳನೀಯಲ್ ||
ಘಳಿಲನೆ ಪೇೞ್ಕೈ ಭಾರಕೆ |
ತಳುವಿಲ್ಲದೆ ಪೇೞ ಗಣಕ ರಾಜನ ಮತದಿಂ ||

ವಜ್ರಂ ಪ ೧ ಕ್ಕೆ ಬೆಲೆಗ ೩೫ ವಜ್ರಭಾರ ೧ ಕ್ಕೆ ಲಬ್ಧಗ ೭೦೦೦೦ ಹಾರಂ ೧.

ಸೂತ್ರಂ || ೫೯ ||

ಬೀಸಗೆವೊಂದಕ್ಕಾ ಪೆರೆ |
ಲೇಸಾಗಿಹ ಗಂಧಪಂಚಭಾರದಸುಂಕಂ ||
ಅರಸನೊಲಿದೀವಪಡಿಯುಂ |
ಭರದಿಂ ತೊಂಭತ್ತುಭಾರಕೇನುಂ ಬರ್ಕುಂ ||

ಗಂಧ ಭಾ ೫ ಕ್ಕೆ ಸುಂಕ ಬಿ ೧ ಭಾರ ೯೦ ಕ್ಕೆ ಲಬ್ಧ ತೊ ೩ ಬೀ ೩ ಹಾರ ೫ ರಾಸಿ೯೦

ಸೂತ್ರಂ || ೬೦ ||

ಪೊನ್ನಯ್ದಕ್ಕಂ ಸುಕ್ಕುಡಿ |
ವುನ್ನತಶ್ರೀಗಂಧವೊಂದು ಬೀಸಿಗೆಯಾಗಲ್ ||
ಪೊನ್ನಯ್ನಾಸಿರದೇೞ್ನ |
ರುನ್ನತಮತಿವಂತ ಪೇೞ ಗಣಿತ ವಿಳಾಸಾ ||

ಗ ೫ ಬೀ ೧ ಲೂ ಗ ೫ ೭೦೦ ಲಬ್ಧ ಭಾ ೧೧ ತೊ ೮ ಹಾರ ೫ ದ್ವಿತೀಯ
ಹಾರ ೧೦೦

ಸೂತ್ರಂ || ೬೧ ||

ಕುಂಕುಮದ ಪಲಂ ನಾಲ್ಕಕೆ |
ಸಂಖೆಯೊಳಂತಯ್ದು ಪಣವು ಪಾಗಮುದಾಗಲ್ ||
ಬಿಂಕದ ನೂಱಯ್ದುಚ್ಚಿಗೆ |
ಸಂಖೆಯೊಳಂ ತಿಳಿದು ಪೇೞ ಗಣಿತ ವಿಳಾಸಾ ||

ಕುಂಕುಮಗಂ ||೦| ಕ್ಕೆ ಪ ೪ ಲ್ಲೂ ಗ ೧೦೫ ಕ್ಕೆ ಲಬ್ಧ ತೊ ೮ ಹಾರಂ ೧೦೦ ರಾಸಿ
೧೬೮೦೦

ಸೂತ್ರಂ || ೬೨ ||

ಕಸ್ತುರಿ ಪಲ ಮೂಱಕ್ಕಂ |
ವಿಸ್ತರದಿಂದಾಱುಪಣ ಕ್ರಯಮಾಗುತ್ತಿರೆ ||
ಪ್ರಸ್ತುತತೊಲೆಯೇೞಕ್ಕಂ |
ವಸ್ತುವನೀಂ ತಿಳಿಯ ಪೇೞ ಗಣಿತವಿಳಾಸಾ ||

ಕಸ್ತುಹ ೩ ಕ್ಕೇ ಕ್ರಯಗಂ || ೧ ಕಸ್ತುರಿ ತೊ ೭ ಕ್ಕೆ ಲಬ್ಧ ಗ ೧೪ಂ ಹಾರ ೩ ದ್ವಿತೀಯ ಹಾರ ೧೦ ರಾಸಿ ೨೦೦ ||

ಸೂತ್ರಂ || ೬೩ ||

ಪಾಗಕ್ಕೆ ಕಪ್ಪುರಂ ಹಣ |
ಹಾಗನುಪಾರೆವೀಸತೂಕವೊನೆ ಸಾಸಿರಹೊಂ |
ನೀಗಳದಿನಿತಕ್ಕಂ ಪೇೞ್ |
ತೂಗಿಕೊಡಲ್ ಸಕಲಗಣಿತತತ್ವವಿಳಾಸಾ ||

ಗಂ ೦| ಕ್ಕೆ ಕಪ್ರು,ರ ಗ೧|೦|||, ಗ ೧೦೦೦ ಗೆ ಲಬ್ಧ ತೊ ೩ ಹಲ ೧೮||| ಹಾರ ೧ ದ್ವಿತೀಯ ಹಾರ ೧೨೮೦೦೦೦ ರಾಂ ೪೦೮೦೦೦೦ ||

ಸೂತ್ರಂ || ೬೪ ||

ಅರಿಸಿನವೊಂಭತ್ತುಂ ಪಲ |
ವರೆ ಪಾಗಕ್ಕೆ ಅರ್ಘ್ಯವಾಗಲ್ ಅಯ್ನೂಱಱವ ||
ತ್ತೆರಡುಂಗದ್ಯಾಣಂ ಪಣ |
ವೆರಡಕ್ಕೆನಿತು ತೂಕದರಿಸಿನಮಕ್ಕುಂ ||

ಗಂ ಹ ೦|| ಅರಿಸಿನ ಹ|| ಗ ೫೬೨ ಹ ೨ ಗೆ ಲಬ್ಧ ಭಾರ ೧೦೬ ತೊ ೧೬ ಬೀ ಹ ೧೬ ಹಾರಂ ೧ ದ್ವಿತೀಯುಹಾರಂ ೮೦೦೦ ರಾಸಿ ೮೫೪೫೪೪ ||

ಸೂತ್ರಂ|| ೬೫ ||

ಪಾಗಕ್ಕರಿಸಿನಪಲವೆಂ |
ಟಾಗಲ್ ಸಾಸಿರದನೂಱೆರಡು ಬೀಸಗೆಗಂ ||
ತೀಗಳಿದೆನಿತಕ್ಕುಂ ಪೇೞ್ |
ತೂಗಿ ಕೊಡಲ್ ಸಕಲಗಣಿತತ್ತ್ವವಿಲಾಸಾ ||

ಅರಿಸಿನ ಹ ೮ ಕ್ಕೆ ಹ ೦|| ಅರಿಸಿನ ಬೀ ೧೧೦೨ ಲಬ್ಧ ಗ ೬೮|| ೩|| ಹಾರ ೮ ದ್ವಿತೀಯ ಹಾರ ೪೦ ರಾಸಿ ೨|||೨೨೦೪೦

**ಸೂತ್ರಂ || ೬೭ ||**

ಸಲೆ ಕಂಚೊಂದು ಪಣಕ್ಕಿ |
ಪ್ಪಲವರೆಯುಂ....ಗಿದ್ವಗದರ್ಘಂ ತಾನಾ ||
ಗಲ್ನಯುೂರೇೞ್ ಪೊನ್ನಿಂ |
ಗೆ ಲೆಕ್ಕದಿಂದೇನಕ್ಸಂ ? ||

ಗಂ ||ಹ ೧ ಕಂಚು ಹ ೨||೧ ಗ ೫೦೭ ಗೆ ಲಬ್ಧ ಭಾ ೬ ತೊ ೯ ೪ ಹ ೧೧ ಕ ೩ ಗಿ ೨೯
ಹಾರ ೧ ದ್ವಿತೀಯ ಹಾರ ೩೨೦೦೦ರಾಸಿ ೨೦೭೮೭೧ ||

**ಸೂತ್ರ || ೬೭ ||**

ಪೊನ್ನಯ್ದಕ್ಕಂ ಕಂಚುೞ³ |
ವುನ್ನತತೊಲೆಯೆಂಟಱಲ್ಲಿ ಬೆಲೆಯಾಗಲ್ ತಾಂ ||
ಹೊನ್ನು ಹನ್ನೆರದು ಪಣವೇ |
ೞನ್ನತ ಮುಪ್ಪಾಗಕೆಸಿತು ತೊಲೆಯೆನಿತಕ್ಕುಂ ||

ಗ೫ ಕೆ ಕಂಚು ತೊ ಚ ೮ ಲ್ಲು ಗ ೧೨|| ೨||| ಕ್ಕೆ ಲಬ್ಧ ಭಾ ೧ ಬೀ ೨ ಪ ೪ ಹಾರ ೨೦೦
ದ್ವಿತೀಯ ಹಾರ ೨೦ ರಾಸಿ ೪೦೮೮ ||

**ಸೂತ್ರಂ || ೬೮ ||**

ಅಯ್ದು ತೊಲೆಮುೞಗೆ ಭಂಡಮ |
ನಾದರದಿಂ ಮೂಱು ತೊಲೆಯ ಲೆಕ್ಕದಿಮಿರಲಾ |
ರೈದಿಸಿದ ತೊಲೆಗಳೆಪ್ಪ |
ತ್ತಾದರದಿಂದುೞುವ ಭಂಡವೇನಂ ಕೊಡುವರ್ ||

ಮುೞ ಕಂಚು ತೊ ೫ ಗೆ ಶುದ್ಧ ಕಂಚು ತೊ೩ ಮುೞುಗಂಚು ತೊ ೭೦ ಲಬ್ಧ ಶುದ್ಧ ಕಂಚ
ಭಾರ ೨ ತೊ ೨ ಹಾರ ೫ ದ್ವಿತೀಯ ಹಾರ ೨೦
ರಾಸಿ ೨೧೦||

**ಸೂತ್ರಂ || ೬೯ ||**

ಪಾಗಕ್ಕಿಕ್ಕಟ್ಟುಂ ಪಲ |
ಮಾಗಿರೆ ಕಾರ್ಪಾಸದರ್ಘಮಿರ್ಭಾಸಿರಹೊಂ ||
ಗೀಗಳಿದೆನಿತಕ್ಕುಂ ಪೇೞ್ |
ತೂಗಿ ಕೊಡಲ್ ಸಕಲ ಗಣಿತತತ್ತ್ವವಿಳಾಸಾ ||

ಹಂ| ಗೆ ಹತ್ತಿ ಬೀ ೨ ಹ ೧ ಗ ೨೦೦೦ ಗೆ ಹತ್ತಿಲಬ್ಧಭಾರ ೧೬೪೦ ಹಾರ೧ ದ್ವಿತೀಯ
ಹಾರ ೨೦೦೦.

ಸೂತ್ರಂ || ೭೦ ||

ಹೊನ್ನಯ್ಪುಕ್ಕಂ ಹತ್ತಿಯು |
ಸಿರ್ನಯದಿಂ ತೊಲೆಯು ಮೂಱುವರೆಯಾಗಲ್ ತಾಂ |
ಯಿನ್ನೂಱುಯೆರಡುಹೊನ್ನಿಗೆ |
ಸನ್ನುತಮತಿ ತಿಳಿಯೆ ಪೇಟ ಗಣಿತವಿಳಾಸಾ ||

ಗ|| ೫ ಗೆ ಹತ್ತಿತೊ ೩ ಬೀ ೨ ಹ ೧೦ ಗ ೨೦೨ ಗೆ ಹತ್ತಿ ಲಬ್ಧ ಭಾ ೭ ತೊ ೧ ಬೀ ೩ ಹಾರ ೧ ದ್ವಿತೀಯ ಹಾರ ೨೦೦೦ ರಾಸಿ ೭೦೭೦೦||

ಸೂತ್ರಂ || ೭೧ ||

ಪಣವಯ್ಪುಕ್ಕಂ ಹತ್ತಿಯು |
ಘನಮೆಸಿವಾ ತೊಲೆಯುಮೆರಡುವರೆಯಾಗಲ್ ತಾಂ ||
ಪಣವಾಱು ಸಾವಿರಕ್ಕಂ |
ಕ್ಷಣದಿಂದಂ ಲೆಕ್ಕಮನಿತುಮೇಂ ಪೇಟ್ ಗಣಕಾ ||

ಗಂ|| ಗೆ ಹತ್ತಿ ತೊ ೨ ಬೀ ೨ ಹ ೧೦ ಗ ೬೦೦೦ ಕ್ಕಂ ಲಬ್ಧ ಹತ್ತಿಯ ಭಾರ ೧೫೦೦ ಹಾರ ೫ ದ್ವಿತೀಯ ಹಾರ ೨೦೯೦ ರಾಸಿ ೫೦೦೦೦೦೦೦

ಸೂತ್ರಂ || ೭೨ ||

ಜವಳಿಯ ಸೂತ್ರಂ :-

ಕೊಟ್ಟಗೆಯ ಪ್ರೊನ್ನನೆ.... |
ನೆಟ್ಟನೆ ನೀಂ ದಳಯಿಸೆ ನಿಜಪ ತಿಳಿಯ ಬೆಳಿಯುಂ ||
ಮುಟ್ಟಿರ್ದರ್ಧವನರ್ಧಿಸೆ |
ಕೊಟ್ಟಿರ್ದಾ ಸೀರೆಗೊಂದು ಬೆಲೆಯಿದು ಗಣಕಾ ||

ಸೂತ್ರಂ || ೭೩ ||

ಕೋಡಿಗೆವೊಂದಕ್ಕೊಪ್ಪಿರೆ |
ನೋಡಿರಿ ಪನ್ನೆರಡು ಹೊನ್ನು ಬೆಲೆ ತಾನಾಗಲ್ ||
ಕೂಡಿಕೊಳ್ವೊಂದು ಸೀರೆಗೆ |
ನೀಡಿಲ್ಲದೆ ಬಕುರ್ನಮೊಂದ ಗಣಿತವಿಳಾಸಾ ||

ಕೋಡಿಗೆ ೧ ಕ್ಕೆ ಬೆಲೆ ಗ ೧೨ ಲ್ಲು ಸೀರೆ ೧ ಕ್ಕೆ ಲಬ್ಧ ಗಂ ಹ ೩ ಹಾರ ೪೦ ರಾಸಿ ೧೨೦ ||

ಸೂತ್ರ || ೭೪ ||

ಅಂಬರನಯನದ ಜವುಳಿಗೆ |
ಅಂಬುಧಿ ಪಣಗೂಡಿ ಹೊನ್ನು ಹರನಯನಕ್ಕಂ ||
ಇಂಬಾದ ಜವುಳಿನೂಱಕೆ |
ಬೆಂಬಿಡದೆನಿತುಬಕುರ್ಗ ಗಣಿತ ವಿಳಾಸಾ ||

ಜವುಳಿ ೨೦ ಬೆಲೆ ಗ ೩ ಹ ೪ ಜವುಳಿ ೧೦೦ ಕ್ಕೆ ಬೆಲೆ ಗ ೧೭ ಹಾರ ೨೦ ದ್ವಿತೀಯ ಹಾರ ೧೦

ಇದು

ಶುಭಚಂದ್ರದೇವ ಯೋಗಿಂದ್ರ ಪಾದಾರವಿಂದ

ಮಧುಕರಾಯಮಾಣಂ ಮಾನಸಾನಂದಿತ ಸಕಲಗಣಿತ

ತತ್ವವಿಳಾಸಂ ವಿನೇಯಜನ ವಿನುತ

**ಶ್ರೀರಾಜಾದಿತ್ಯವಿರಚಿತಮಪ್ಪ**

ವ್ಯವಹಾರಗಣಿತದೊಳ್

ತ್ರೈರಾಶಿಕ ನಿರೂಪಣಂ–ಸಮಾಪ್ತಂ

|| ಶ್ರೀ ||

|| ಶುಭಮಸ್ತು ||

## — ಪಂಚರಾಶಿ —

**ಪಂಚರಾಶಿಕಕ್ಕೆ ಸೂತ್ರಂ || ೧ ||**

ಮ|| ಪಡಿ (ಡೆ) ಮಾತೇಂ ಪದೆದೊಡ್ಡನಿಟ್ಟು ಕಳೆಯಲ್ಕಂಗೂಡಿ ಮತ್ತಂ ಕೆಲ
ಕ್ಕೆಡೆಯೊಳ್ ತೋಱುವ ರಾಶಿಗಳ್ ವಿಷಮನಾಮಂ ಮಾಡೆ ಸೂತ್ರೇಷ್ಟದಿಂ ||
ಬಿಡದಂತೆತ್ತುಗೆ ಮಧ್ಯನಾಮದಫಲಂ ತಾನಕ್ಕು ಮೆಂದೀ ಕ್ರಮಂ |
ಬಿಡದಯ್ದುಂತೆಱ ನೆಂದುಮಿಂತಱಿಪಿದಂ ರಾಜಾರ್ಮನೊಲ್ದೀ ಕ್ರಮಂ ||

**ಸೂತ್ರಂ || ೨ ||**

ಕಂ || ಮಿಗೆ ಪಂಚಸಪ್ತ ನವರಾ |
ಶಿಗಳೊಳ್ಪಡುವುಱಿಯ ಬೇಱೆವೇಱಕ್ಕೆಲದೊಳ್ ||
ನೆಗಲ್ದಿರ್ದರಾಶಿ ತಮ್ಮೊಳ್ |
ಮಿಗೆಗುಣಿಯಿಸಲೊಡ್ಡಿದಲ್ತೆ ರಾಜಾದಿತ್ಯಾ ? ||

**ಸೂತ್ರಂ || ೩ ||**

ಭ್ರಾಂತೇನೊಂದು ಪೊಂಗೊಂದು |
...ವೀಸವರೆ ಬಡ್ಡಿ ಯೆನಲ್ಕೆಂಭತ್ತೊಂದುಂ ||
....ಪೊನ್ನೆನಿತಕ್ಕುಂ ಪೇ |
ೞಿಂತಪ್ಪಯುದೆ ಬಡ್ಡಿಯಕ್ಕು ಮಾಸತ್ರಯಕಂ ||

ತಿಂಗಳು ೧ ಗ ೧ ೦|| ಬಡ್ಡಿ ವೀಸ ೧–ಕಾ ೨-|| ಗ ೮೧ಕ್ಕೆ ತಿಂಗಳು ೩ ಲಬ್ಧಗಂ ||೩|| ವಿ ೪ ಹಾರ ೮೦೦||-

**ಸೂತ್ರಂ || ೪ ||**

ನಡು ಮೊದಲಾಗಿರೆ ಮುಂದಂ |
ಬಿಡದೆತ್ತುಗೆ ಪಿಂತಣೀದೆ ಗುಣಯಿಸು ನೀಂ ||
ಬಿಡದೊತ್ತೆತ್ತುಗೆ ಬರ್ಕುಂ |
ತಡೆಯದೆ (ನೀಂ) ಪಂಚಸಪ್ತ ನವರಾಶಿಕಮುಂ ||

**ಸೂತ್ರಂ || ೫ ||**

ಮೂಱುಂತಿಂಗಳುವರೆಗಿರ |
ದಾಱುಂ ಪೊನ್ನುಂ ಪಣಕ್ಕೆ ಮೂಱುಂ ಪಾಗಾಂ ||
ಗೇಱುದ ಬಡ್ಡಿಯೆನಲ್ಕಱ |
ನೂಱುಂ ದಶಕಕ್ಕೆ ಬಡ್ಡಿದಿನವೇೞಕ್ಕಂ ||

ತಿಂಗಳು ೩ ದಿನಂ ೧೫ ಗ ೬ ಹ ೧ ಬಡ್ಡಿ ಹಾಗ ೩ ಗ ೬ ೧೦ ದಿನ ೭ ಕ್ಕೆ ಲಬ್ಧ ಬಡ್ಡಿಗಂ||
ಹಾರ-೬೪೦೫ ದ್ವಿತೀಯ ಹಾರ-೪

ಸೂತ್ರಂ || ೬ ||

ಮ|| ಅಗಲಂ ಮೂಱುಮೊೞಂ ದಶಂ ಮೊೞನೆ ಗೇಣೊಂದೊಂಭತ್ತು ಪ |
ಟ್ಟಿಗೆ ಪೊರ್ ನೂಱಱುವತ್ತು ನೀಳ ಮೊೞನಾ ಶಾಟೀಕತ್ರಿತ್ರಿಂಶಕ್ಕ ||
ಪ್ಪಗಲಂ ನಾಲ್ಕುಂ ಮೊೞಂ ಪೊಸತಪ್ಪದೇೞ್ನೂಱ ಮಿಪ್ಪತ್ತು ಪ |
ಟ್ಟಿಗೆ ಪೊನ್ನೆನಿತಕ್ಕುಮಾದ ಬೆಲೆಯಂ ಪೇೞ್ ಪದ್ಯವಿದ್ಯೋತ್ತಮಂ ||

ಅಗಲಂಮೊಳಂ-೩ ನೀಳಂಮೊೞಂ ೧೦ ೪ ಗೇಣ್ ೧|| ಪಟ್ಟಿ || ಗ-೧೬೦ ನೀಳಂ
ಮೊಳಂ-೩೧ ಗೇ ೧ ಮೊೞಂ ೪ ಪಟ್ಟಿ ೭೨೦ ಲಬ್ಧಕ್ರಯ ಗ ೫೧೨೦೦-|| ಹಾರ ಗ ೫೬೭-||

ಸೂತ್ರಂ || ೭ ||

ಒಂದುಮೊೞದಗಲ ಇಪ್ಪ |
ತ್ತೊಂದು ಮೊೞಂ ನೀಳದೊಂದು ಪಟ್ಟಿಗೆ ಪೊನ್ನ ||
ಯ್ದೊಂದು ಮೊೞನಗಲಯೆಪ್ಪ |
ತ್ತೊಂದು ಮೊೞಂ ನೀಳದಯ್ದು ಪಟ್ಟಿಗೆ ಬೆಲೆಯೇಂ ||

ಅಗಲಂ ಮೊೞಂ ೧ ನೀಳಂ ಮೊೞಂ ೨೧ ಪಟ್ಟಿ ೧- ಬೆಲೆಗ ೫-|| ಅಗಲಂ ಮೊೞಂ ೧
ನೀಳಂ ಮೊೞಂ-೭೧ || ಪಟ್ಟಿ ೫ ಲಬ್ಧಗ-೭೧-|| ಹಾರ ೨೦೨೫||

ಸೂತ್ರಂ || ೮ ||

ಮ|| ಅಗಲಂ ನಾಲ್ಕುಮೊೞಂ ದಶಂ ಮೊೞದ ನೀಳಂ ಪಟ್ಟಿ ಹತ್ತಕ್ಕೆ ಪೊ |
ನ್ನಗಳುಂ ನೂಱಱುವತ್ತೆನಲ್ ಬೆಲೆ ಮೊೞಂ ಮೂವತ್ತೆರೞ್ನೀಳವಾ ||
ದಗಲಂ ನಾಲ್ಕು ಮೊೞಂಗಳುಂ ಪೊಸತೆನಿಪ್ಪೇೞ್ನೂಱು ಮೂವತ್ತು ಪ |
ಟ್ಟಿಗಳಂ ಪೊನ್ನೆನಿತಕ್ಕುಮಾದ ಬೆಲೆಯಂ ಪೇೞ್ ಭವ್ಯವೃಂದೋತ್ತಮಾ ||

ಅಗಲಂ ಮೊೞಂ ೪-ನೀಳಂ ಮೊೞಂ ೧೦ ಪಟ್ಟಿ ೧೦|| ಬೆಲೆ ಗ ೧೬೦ ನೀಳಂ ಮೊೞಂ ೩೨||
ಅಗಲಂ ಮೊೞ ೪ ಪಟ್ಟಿ ೭೩೦|| ಲಬ್ಧಗ ೩೭೩೭ ೬೦ ಹಾರ ೪೦೦||

ಸೂತ್ರ || ೯ ||

ಮಾ||ಸ್ರ|| ಇರದೊಗ್ಗೇಣುದ್ದವಿಗ್ಗೇಣಗಲದ ನೆಱೆ ಮೂವತ್ತು ಗೇಣ್ ನೀಳದಯ್ವ |
ತ್ತೆರಡುಂ ಕಲ್ಲೆಂಟು ಗದ್ಯಾಣಮುಮಂಬುಧಿಪಣಂ ಮೂಲ್ಯಮಾಗುದ್ದವಿಗ್ಗೇ ||
ಣ್ಣೆರಳಾಱುಂವಿಸ್ತರವಾರ್ಗೇಣಱುವೆರಲ್ ಮೊೞಂ ನೀಳಪತ್ತೆಂದೆನಲ್ ಸಾ |
ಸಿರದೇೞ್ನೂರೈದು ಕಲ್ಲಂ ಪವಣಿಸಿ ಬೆಲೆಯಂ ಬೇಗ ಪೇೞ್ ಭವ್ಯಸೇವ್ಯಾ ||

ಉದ್ದಂ ಗೇಣ್-೧ ಅಗಲಂ ಗೇಣ್-೨|| ನೀಳಂ ಗೇಣ್-೩೦-|| ಕಲ್ಲು ೫೨ ಬೆಲೆಗ ೮ ಹ ೪
ಉದ್ದಂ ಗೇಣ್-೨-|| ಬೆರಲ್ ೬--|| ಅಗಲಂ ಗೇಣ್ ೧೬-|| ಬೆರಲ್-|| ನೀಳಂ ಮೊೞಂ ೧೦
ಅಂಥಾ ಕಲ್ಲು ೧೭೦೫ ಲಬ್ಧಗ ೧೪೯೧|| ೩|| ಹಾರ ೪೪೯೨೮೦ | ದ್ವಿತೀಯ ಹಾರ ೧೦-||

ಸೂತ್ರಂ || ೧೦ ||

ಮ||ಸ್ರ|| ಉದಯಂ ಗೇಣೆಮ್ಮುಪ್ಪೆಗೇಣಗಲಮುನಱು ಮೂಪತ್ತೆರಱ್ನೀಳದಂ ತಾಂ ||
ವಿದಿತಂ ಕಲ್ಲೆಂಟು ಗಗನಶರಪೊನ್ನಳಾಗಲೆವುದಯಂ (?) ||
ಮದನಾಸ್ತ್ರಂ ಗೇಣ್ಗಳೆಂಟಂತಗಲಮೆನಿಪ್ಪತೇೞ್ನೀಳ ೞುಂ (?) ||
ಮುದದಿಂ ಮೂವತ್ತು ಕಲ್ಲಂ ಪಸಣಿಸಿ ಪೆಱತೇಂ ಪೇೞ್ ಭವ್ಯಚಂದ್ರೋತ್ತಮ ||

ಉದ್ದಂ ಗೇಣ್-೨-|| ಅಗಲಂ ಗೇಣ್-೫ | ನೀಳಂ ಗೇಣ್-೩೨-|| ಕಲ್ಲು. . .ಬೆಲೆ ಗ ೫೦
ಅಗಲಂ ಗೇಣ್ ೮, ನೀಳಂ ಗೇಣ್ ೨೭ಕಲು ೩೦-|| ಲಬ್ಧ ಗ ೬೩೨ ||೩-ವಿ ೨ ಹಾರ ೨೫೬

ಸೂತ್ರಂ || ೧೧ ||-ಮುಂಬಡ್ಡಿಯ ಸೂತ್ರಂ:-

ಮ|| ಎರಡುಂಬೆಸ್ತದಿನಕ್ಕು ಪೊನ್ನಳಿಡೆಯೊಳ್ (ಮುಂ) ಬಡ್ಡಿಯಂ ಮಾಸಮುಂ |
ನಿರುತಂ . . . . ದಿನಕ್ಕೆ ಪತ್ತೆ ಕಡೆಯೊಳ್ ಮುಂಬಡ್ಡಿಯಂ ಬೆಸ್ತ (ವಂ) ಮಾ ||
ಗಿರೆ ಪಿಂದೊಂದಿದ ಪಂಚರಾಶಿಕದೊಳೇಂ ತದ್ಭಾವಿತಾಂದುಂಸು ಬಿ |
ತ್ತರದಿಂದಂ ಬಗೆಗೊಂಡು ತಾವಱಿಗೆ ರಾಜಾದಿತ್ಯನಿಪ್ಪೋಕ್ತಿಯಿಂ ||

ಸೂತ್ರಂ || ೧೨ ||

ಕಂ|| ಒಂದುಂತಿಂಗಳಿಗೆ ಸಮಂ |
ತೊಂದುಂ ಪೊನ್ಗೆರಡು ವೀಸ ಬಡ್ಡಿಯೆನಲ್ಪಿಪ್ಪ ||
ತ್ತೊಂದುಂ ಪೊನ್ಗೆನಿತು ದಿನಂ |
ಸಂದಿರ್ಕುಂ ಪಣಮುಮೇೞುಮಂ ಪಿಡಿಯೆನಲುಂ ||

ತಿಂಗಳ್ || ಗಂ | ವೀಸ-೨-|| ಕಾ-೨-|| ಗ ೨೧-|| ಮುಂಬಡ್ಡಿಗೆ ೦ || ಲಬ್ಧ ತಿಂಗಳ್ ೩
ದಿನ ೧೦|| ಹಾರ ೪೨-|| ದ್ವಿತೀಯ ಹಾರ-೩೦-||

ಟೀಕೆ— ಹೊನ್ನ ಹೊನ್ನಿಗೂ ಒಡ್ಡಿಗೂ ತಿಂಗಳಿಗೂ ಬೆಸ್ತವ ಮಾಡಿ ಗುಣಿಸಲ್ಪಡುವುದು.

ಸೂತ್ರಂ || ೧೩ ||

ಮ|| ಎರಡುಂ ಮಾಸಮುಮಂತವರ್ಕೆ ಪದಿಮೂಱುಂ ಪೊನ್ಗಳುಂ ಮೂಱಿದ |
ಕ್ಕಿರದೇೞುಂ ಪಣಪಡ್ಡ ಬಡ್ಡಿಯೆನಲಯ್ನೂಱಯ್ದು ಗದ್ಯಾಣದೊಳ್ ||
ಬೆರೆಸಿರ್ದಬ್ಧಿ ಪಣಕ್ಕೆ ಪಂಚದಶಗದ್ಯಾಣಂ ಪಣದ್ವಂದ್ವಮೊ |
ಪ್ಪಿರೆ ಮುಂ ಬಡ್ಡಿಯನಿಕ್ಕಿದಕ್ಕೆನಿತು ತಾನಕ್ಕುಂ ದಿನಂ ಭಾವಿಸಲ್ ||
ತಿಂಗಳ್-೧೨|| ಗ-೧೩ ಬಡ್ಡಿ ಗಂ || ೨ || ಗ ೫೦೫ ಹ ೪ ಕ್ಕೆ ಮುಂಬಡ್ಡಿಗ-೧೫ ೨|| ಲಬ್ಧ
ತಿಂಗಳ್ ೧|| ದಿನ ೨|| ಹಾರ ೧೫೧೬೨೦||

ಸೂತ್ರಂ || ೧೪ ||

ಕಂ|| ಎರಡುಂ ತಿಂಗಳವರೆಗಂ |
ಕೊಡುಪಂ ತಾಂ ಮೂಱು ಪೊನ್ಗೆಯಿಪ್ಪಣಪಡ್ಡಂ ||
ಬಿಡದಡಿಗನೂಱುಪೊನ್ನಂ |
ತಡೆಯದೆ ನೀಂ ಪೇೞ ಹತ್ತು ಹೊನ್ನಿಗೆ ದೆವಸಂ ||

ತಿಂಗಳ್-೨ ದಿನ ೧೫ ಕ್ಕೆ ಬಡ್ಡಿ ಗಂ ಹ೨ ಗ ೧೦೦ | ೦ ಮುಂಬಡ್ಡಿ ಗ ೧೦|೦ ಲಬ್ಧ ತಿಂಗಳ್ ೩ ಪ್ರಥಮ ಹಾರ ೧೦೦೦ ದ್ವಿತೀಯ ಹಾರ ೩೦ ||೦ ತಿಂಗಬಡ್ಡಿಗು ಬೆಸ್ತ ||

ಟೀಕು|| ಹೊನ್ನಿಗು ಬೆಸ್ತ ಮಾಡು ಕಡೆಯ ಮುಂಬಡ್ಡಿಯ ಹತ್ತು (೧೦) ಹೊನ್ನನು ಹಾಗವ ಮಾಡಿ ಆ ಮೂಱುರಾಶಿಯನು ಗುಣಿಸಿ ಮೊದಲ ಎರಡನೆಯ ರಾಶಿಯನು ಗುಣಿಸಿ ಭಾಗಿಸುವುದು:—

ಸೂತ್ರಂ || ೧೫ ||

ಕಂ|| ತಿಂಗಳೆರಡಕ್ಕೆ ನೂಱಕೆ |
ಪಿಂಗದೆ ತಾಂ ನಾಲ್ಕು ಹೊನ್ನ ಬಡ್ಡಿಯನೀಯಲ್ ||
ಸಂಗಡಿಸಿದಯ್ದು ಶತಕಕೆ |
ಮುಂಗಡ ಆಱುವತ್ತು ಪೊನ್ಗೆನಪ್ಪುದು ದೆವಸಂ ||

ತಿಂಗಳ್-೨ ಕ್ಕೆ ಗ ೧ -೮೦೦ || ಬಡ್ಡಿಗ ೪ ಗ ೫೦೦ ಮುಂಬಡ್ಡಿಗ-೬೦ ೦|| ಲಬ್ಧ ತಿಂಗಳ್ ೪|| ಪ್ರಥಮ ಹಾರ ೨೦೦

ಸೂತ್ರಂ || ೧೬ ||

ದಿನಪುರಿ ಸಂಖ್ಯೆಗಳಾಗ |
ಲ್ಕೆನವಕಮಂ ಪೊನ್ಗೆ ಅಡ್ಡಕಯ್ದುಱಬಡ್ಡಿಯ ||
ಮನವೊಲಿದು ಮೂಱು ಪೊನ್ನಂ ||
ವಿನಯದೊಳಱುವತ್ತು ಸಾವಿರಡ್ಡಕೆ ದೆವಸಂ ||

ದಿನ ೩ ಕ್ಕೆ ಗ ೧-೦ || ಬಡ್ಡಿ ಅಡ್ಡಕ್ಕೆ ೫|| ಗ-೧೦೦ ಗೆ ಅಡ್ಡಕ್ಕೆ ಮುಂಬಡ್ಡಿ ಅಡ್ಡಕೆ ಮುಂಬಡ್ಡಿ ಆದಕೆ ೬೦೦೦ ಕ್ಕೆ ಲಬ್ಧ ವರುಷ ೧|| ಪ್ರಧಮ ಹಾರ ೫೦೦ ದ್ವಿತೀಯ ಹಾರ ೩೬೦

(ಸೂತ್ರಂ || ೧೭ ||)
ಮೂಲದಲ್ಲಿ ಸೂತ್ರವನ್ನು ಇಲ್ಲಿ ಬರೆದಿಲ್ಲ

ಟೀಕೆ|| ಪೊನ್ನಿಗು ಬೆಸ್ತ ದಿನ ಬಡ್ಡಿಗು ಬೆಸ್ತವಮಾಡು, ಕಡೆಯ ಮೂಱು ರಾಶಿಯನು ಗುಣಿಸಿ ಮೊದಲ ಯೆರಡನೆಯ ರಾಶಿಯನು ಹಾರವ ಮಾಡಿಕೊಂಡು ಭಾಗಿಸಿ ಬಂದುದನು ೧ ವರುಷವನು ದಿನ ಮಾಡಿ ಭಾಗಿಸುವುದು.

ಸೂತ್ರಂ || ೧೭ ||

ಮಾಸವೊಂದಕ್ಕೆ ಪೊನ್ಗಳ್ |
ಲೇಸಾಗಿರೆ ನಾನೂ (ಱು) ಪೊನ್ಗೆವೊಕ್ಕುಳತುಪ್ಪಂ ||
ಬಾಸೆಯೊಳು ಸಾಸಿರಕ್ಕಂ |
ಓಸರಿಸಱುವತ್ತು ಸೊಲಗೆ ತುಪ್ಪಕೆ ದೆವಸಂ ||

ತಿಂಗಳ್ ೧ ಕ್ಕೆ ಗ-೪೦೦ ತುಪ್ಪ-೧-|| ಗ ೧೦೦೦-|| ಮುಂಬಡ್ಡಿ ತುಪ್ಪ ೩ ೬೦|| ಲಬ್ಧ ವರ್ಷ-೪೦|| ಪ್ರಥಮ ಹಾರ ೧೦೦೦| ದ್ವಿತೀಯ ಹಾರ- |೧೨|

ಟೀಕು|| ಹೊನ್ನಿಗು ಹೊನ್ನಿಗು ಬೆಸ್ತ ತಿಂಗಳಿಗು ಬಡ್ಡಿ ಗಡಿಗು ಬೆಸ್ತವಮಾಡಿ ಕಡೆಯ ಮೂಱು ರಾಸಿಯನು ಗುಣಿಸಿ ಮೊದಲ ಎರಡು ರಾಸಿಯಿಂದ ಭಾಗಿಸುವುದು ಎಂದಿದೆ.

ಸೂತ್ರಂ ॥ ೧೮ ॥

ಪಾವಕದೆವಸಕ್ಕೊಬ್ಬಂ ।
ಈಸಂ ತಾನಯ್ದು ಪೊಂಗೆ ವೊಕ್ಕುಳಪಾಲಂ ॥
ಭಾಸದಯ್ವತ್ತುಪ್ರೊನ್ನಂ ।
ಈವೊಡೆ ಪಾಲಯ್ದು ಸೊಲಗೆಗೆನಿತ್ತೈ ದೆವಸಂ ॥

ದಿನ ೩-ಕ್ಕೆ ಗ ೫॥ಹಾಲು ೧ ಗ ೫೦ ॥ಸುಂಬಡ್ಡಿ ಹಾಲು ೩ ೫॥ ಲಬ್ಧತಿಂ ೧॥ ಪ್ರಥಮ ಹಾರ-೫೦೦ ॥ ದ್ವಿತೀಯ ಹಾರ ೩೦ ॥।

ಟೀಕು॥ ಹೊಸ್ನಿಗು ಹೂಸ್ನಿಗುಬೆಸ್ತ-

ದಿನದಬಡ್ಡಿಗು ಬೆಸ್ತಸಮಾಡಿ ಕಡೆಯ ರಾಶಿ ೩ ೫ ಕಂ (೩ಂ ?) ಡುಗವನ್ನು ಕೊಳಗವ ಮಾಡಿ ಮೂಱುರಾಶಿಯನು ಗುಣಿಸಿ ಮೊದಲಯೆರಡುರಾಶಿಯಿಂ ಭಾಗಿಸುವುದು

ಸೂತ್ರಂ ॥ ೧೯ ॥

ನೆಗಲ್ವ ಮೊಳಂ ಪತ್ತಗಲದ ।
ಮಿಗೆ ಮೊಳಪೆಂಭತ್ತು ನೀಳದೇಳಂ ಬರೆದೈ ॥
ದಗಲ ವೊಳಮೇಱುನೀಳದ ।
ಸೊಗಯಿಪ ಪಚ್ಚಡದ ಪಂದುವಂಗೇನಕ್ಕುಂ ॥

ಅಗಲಂ ಮೊಳಂ ೧೦-॥ ನೀಳದ ಮೊಳಂ-೮೦ ॥ ಅಂತಹ ಪಟ್ಟೆ ೭ ॥ ಅಗಲಂ ಮೊಳಂ ೫-॥ ನೀಳಂಮೊಳಂ ೭॥ ಅಲ್ಲಿಂ ತುಡಿಸಿದೊಡೆ ಲಬ್ಧ ೧೬೦-॥

ಟೀಕೆ॥ ಮೊದಲ ಮೂಱನು ಹೆಚ್ಚು ಗುಣಿಸಿ ಕಡೆಯರಾಸಿಯೆರಡನು ಹೆಚ್ಚುಗುಣಿಸಿ ಹಾರಂ ಮಾಡಿ ಗುಣಿಸಿ ಭಾಗಿಸುವುದು-ಹಾರ ೩೫

ಸೂತ್ರಂ ॥ ೨೦ ॥

ಕಂ॥ ಆಱುಮೊಳದಗಲಮಿಪ್ಪ।
ತ್ತಾಱುಮೊಳಂ ನೀಳಮೇಱುಪೊಂಬಟ್ಟೆಯತಾಂ ॥
ಮೂಱುಮೊಳದಗಲಮುಂ ಪದಿ ।
ಮೂಱುಮೊಳಂ ನೀಳಮಾಗೆ ಪಟ್ಟೆಯದೇನೋ ॥

ಅಗಲಂ ಮೊಳಂ-೬॥ ನೀಳಂ ಮೊಳಂ (ಇಪ್ಪತ್ತಾಱು) ೨೬-ಅಂತಹ ಸೀರೆ ೭-। ಅಗಲಂ ಮೊಳಂ ೩॥ ನೀಳಂಮೊಳಂ-೧೩-॥ ಲಬ್ಧಸೀರೆಯ ತುಂಡು ೨೮-! ಹಾರ ೩೮ ।

ಟೀಕು ॥ ಹಿಂದಣಕ್ರಮು

ಸೂತ್ರಂ ॥ ೨೧ ॥

ಹನ್ನೆರಡುವರುಷದಬಲೆಗೆ ।
ಪೊನ್ನಯ್ನೂಱಮುಱಿ ವರುಷಮೆಂಟಾಗಲ್ ತಾಂ ॥
ಸನ್ನುತಮತಿ ನೀಂ ಪೇೞಾ ।
ಇನ್ನು ಬಾಯನವಳಿಗೆನಿತು ಗಣಿತವಿಳಾಸಾ ॥

ಹನ್ನೆರಡು ವರುಷದ ಹೆಣ್ಣಿಗೆ-ಗ ೫೦೦ ಎಂಟುವರುಷದವಳಿಗೆ ಬಾಯನ ಹಾದೆ ಎಂದೊಡೆ ಲಬ್ಧ ಗ-೭೫೦|| ಹಾರ ೮ ( ಟೀಕು|| ಹಿಂದಣಕ್ರಮ )

ಸೂತ್ರಂ || ೨೨ ||

(1) ಬೆಸ್ತ–ಪಂಚರಾಶಿ

ಕಂ|| ಒಂದರ್ಘದಿಂದೆ ಕೊಂಡಿಂ |
ತೊಂದರ್ಘದಿನಳಿವ ಪಂ (ಪಾಂ ?) ಚರಾಶಿಕದೆಡೆಯೊಳ್ ||
ಸಂದಿರ್ದರ್ಘದ ಬೆಸ್ತವು |
ನೊಂದೊಂದಱೊಳೆನ್ದನಲ್ತೆ ರಾಜಾದಿತ್ಯಂ ||

ಸೂತ್ರಂ || ೨೩ ||

ವೃ|| ಬಗೆಗೊಂಡಱುಪತ್ತೆರಡುಂ ಪೊನ್ನಱುಪಣಪರೆಗೈನೂಱ ಮೂವತ್ತೆರಬ್ಬಂ |
ಡುಗಮಾಱಾಗಲಾ ಗದ್ಯಾಣಮುಮೆರಡುಪಣಂ ಪಾಗಮಾಂ ಮೂಱುವೀಸ ||
ಕ್ಕೆ ಕಡಂಗೊಂಡಾಱುಪೊನ್ ಪಣಗತಿಯುತ ವಾಗದ್ವಯಕ್ಕಱಿಯಿಂದಂ |
ನೆಗಱಲ್ ನಾಲ್ವತ್ತುಮೂಱುಖಂಡುಗಮನಳೆಯಲೇಂ ಪೇೞು ಸಂದಿರ್ದ ಲಾಭಂ ||

ಗ ೬೨|| ೧|| ಕ್ಕೆ ಖ ೫೩ ದಾರಣೆಯಲ್ಲಿ ಗ....೨ ಕ್ಕೆ ಕೊಂಡು ಗ ೯೪|| ಕ್ಕೆ ಬ ೪೩ ಧಾರಣೆಯಲ್ಲಿ ಮಾಱಲು ಲಾಭ ಮೊದಲ್‌ಕೂಡಿ ಲಬ್ಧ ೧೨೭|| ೧ || ೧ ಹಾರ ೧೦೭೫೪೦ ದ್ವಿತೀಯಹಾರ ೨೦೦

ಸೂತ್ರ || ೨೪ ||

ಇಪ್ಪತ್ತುಖಂಡುಗ ಬತ್ತಂ |
ತಪ್ಪದೆ ಐನೂರ ಸಲಗೆಯಾಗಲ್ ಮತ್ತಾ ||
ಒಟ್ಟೊಳಱುನೂಱು ಹೊಂಗಂ |
ತಪ್ಪದೆ ಏೞಚ್ಚಿಗೈದು ಮಾಱಲದೇನ್ನೈ ||

ಗ ೨೦ ಕ್ಕೆ ಖಂ ೫೦೦ ದಾರಣೆಯಲ್ಲಿ ಗ ೬೦೦ ಕೊಂಡು ಗ ೭ ಗೆ ಖ ೫ ಮಾಱಲು ಲಾಭ ಮೊದಲುಕೂಡ ಲಬ್ಧ ಗ ೬೦೦ ಹಾರ ೨೫

ಸೂತ್ರಂ || ೨೫ ||

ಹೊನ್ನುಂ ನಾಲ್ಕಕ್ಕೆ ಬತ್ತಂ |
ಸನ್ನುತ ಹದಿನೈದು ಸಲುಗೆಯಾಗಲ್ ಮತ್ತಾ ||
ಪೊನ್ನೂಱೆರಡಕ್ಕೆ ಕ್ರಯ |
ಮುನ್ನತವೈದಚ್ಚಿಗೆಂಟ ಮಾಱಲದೇನೋ ||

ಗ ೪ ಖ ೧೫ ಲ್ಲಿ ಗ ೧೦೨ ಗೆ ಕೊಂಡು ಗ ೫ ಗೆ ಖ ೮ ಮಾಱಲು ಲಾಭ ಮೊದಲು ಕೂಡಿ ಲಬ್ಧ ಗ ೧೧೭೯೧||೨|| ಹಾರ ೩೨.

ಸೂತ್ರ || ೨೬ ||

ವೃ| ಪ್ರ || ಪದಿನೇೞುಂಖಂಡುಗಂಗೂಡಿದಕೊಳಗಯುಗಂ ಪೊನ್ನದಾಗಲ್ಕೆತಾಂದು ||
ಣ್ಣದೆ ಮುನ್ನೂಱೇೞು ಗದ್ಯಾಣಮುಮೆರಡುಪಣಂ ಪಾಗವೊಂದಕ್ಕೆ ಕೊಂಡಂ |
ತದನೊರ್ವಂ ಪೊನ್ಗೆ ನಾಲ್ಖಂಡುಗವರೆಯಲದಂಮಾಱಲೇಂ ಲಾಭಮಿಾಯು |
ರ್ಥದಿ ನೀಗಳ್ ಪೇೞ ನೀಂ ಭಾವಿಸಿದೊಡೆ ಗರುವಂತಾಗಿರಲ್ ಭಾಗದಿಂದಂ ||

ಖ–೧೭–೨|| ಗ ೧ ಗ ೩೦೭ ಪ ೨ || ಗ | ಖ–೪|| ಲಾಭ ಮೊದಲು ಏನಹುದಯ್ಯಾ ಎಂದರೆ ಲಬ್ಧ ಗ–೧–೬೭ || || ಪ್ರಥಮ ಹಾರ ೯೦ ದ್ವಿತೀಯ ಹಾರ ೪೦–||

ಟೀಕು || ಅರ್ಥ ಅರ್ಥಕ್ಕೆ ಬೆಸ್ತ, ಹೊನ್ನು ಹೊನ್ನಿಂಗೆ ಬೆಸ್ತಮಾದ್ಯರಾಶಿಯ ಹಾಗಮಾಡಿ ದುದರ್ಕ್ಕೆ–೧೨೭೯೦ ಪ್ರತಿಯನಿಟ್ಟು ಮೊದಲರಾಶಿಯ ಕೊಳಗವ ಮಾಡುವುದು ೩೪೫ ಮಧ್ಯ ರಾಶಿಯ ೧೨೭೯೦ ನು ಹೆಚ್ಚು ಗುಣಿಸಿದರೆ ೪೨೩೧೮೦ ಅದನ್ನು ಕಡೆಯ ರಾಶಿಯ ಕೊಳಗವ ಮಾಡಿದರೆ ೯೦ ಭಾಗಿಸಲು... ...... ......... ..ಲಬ್ಧ ತಪ್ಪದು.

ಸೂತ್ರಂ || ೨೭ ||

ಕಂ|| ಪದಿನಯ್ದು ಖಂಡುಗಂ ಪೊ |
ನ್ನೊಗದವಿರ ನೂಱಯ್ದು ಪೊನ್ಗ ಕ್ರಯುವಿಟ್ಟುದನುಂ ||
ತದನೊಂದುಪೊನ್ಗೆಮಾಱಲ್ |
ಪದಿನಾಲ್ಖಂಡುಗಮುಂ ಮಾಱೆ ಲಾಭಮುದೆನಿತೋ ||

ಗ–||೧೫–||ಗ–||–೧೦೫–|| ಖ–೧೪ ಮಾರಲು ಲಾಭ ಮೊದಲು ಕೂಡಿ ಏನಹುದಯ್ಯಾ | ಎಂದರೆ ಲಬ್ಧ ಗ ೧೧೨–||೦ ಹಾರ ೧೪ ಟೀಕು|| ಹಿಂದಣ ಸೂತ್ರ ಮರ್ಯಾದೆಯಲ್ಲಿ.

ಸೂತ್ರಂ || ೨೮ ||

ಪದಿಮೂಱುಖಂಡುಗಂಪೊ |
ನ್ನದಾಗಲ್ಕೆಂಭತ್ತುನಾಲ್ಕು ಪೊನ್ನೊಲವಿಂದಂ ||
ವಿದಿತಂಕೊಂ . . . ತಗಿತಂ | ?
ಪದಿನಾಱುಖಂಡುಗದಿ ಪೊನ್ಗೆ ಪೊಂಳೆ ಚಿರೆಯದಂ ?||

ಗ ೧ ಕ್ಕೆ ಖ ೧೩ ಗ ೮೪ ಕ್ಕೆ ಖ ೧೪ ಪಸ್ಟುಚಿಗೆ ಲಬ್ಧ ೭೮ ಹಾರ ೧೪

ಟೀಕು|| ಹಿಂದಣ ಸೂತ್ರದ ಕ್ರಮು–

ಸೂತ್ರಂ || ೨೯ ||

ಇರದೊಂದು ಪೊನ್ನಿಗಱುಸಾ |
ಸಿರದೇೞ್ನೂರಡಕೆಯರ್ಥದಿಂ ಪೊನ್ನಯ್ದೂ ||
ಱೆರಡಕ್ಕೆ ಪೊನ್ಗೆ ನಾಲ್ಸಾ |
ಸಿರದಲಿ ಮಾಱಲ್ ಲಾಭಮೇನೊ ಗಣಿತವಿಳಾಸಾ ||

ಗ–೧–ಅಡಕ್ಕೇ ೬೭೦೦–ಗ ೫೦೨|| ಗ| ಅಡಕೆ ೪೦೦೦ ಧಾರಣೆ ಯಲು ಮಾಱಲು ಲಬ್ಧ ಗ ೮೪೦–||೨|| ಹಾರ ೪೦೦

ಟೀಕು|| ಅರ್ಘ ಅರ್ಘಕ್ಕೆ ಬೆಸ್ತವ ಮಾಡಲಹುದು|| ಅವಕ್ಕೆಯೆ ೩ ರಾಶಿಯನು ಅಡರಿಸಿ ಗುಣಿಸಲು ೩೩೬೩೪೦ ಇದನು ಪ್ರತಿಯಿಟ್ಟು ಮೊದಲ ಎರಡು ರಾಶಿಯನು ಗುಣಿಸಲು ೪೦೦೦ ಇದಱಿಂದ ಭಾಗಿಸಲು ಲಬ್ಧಮಕ್ಕುಂ

## ಅಡಕೆಗೆ ಅಡಕೆ ಬೆಸ್ತವ ಮಾಡೂದು

ಸೂತ್ರಂ || ೩೦ ||

ಕಂ|| ಆದರದೆ ಬಣ್ಣ ಬಣ್ಣವ |
ಮೇದಿನಿಯೊಳ್ ಪೊನ್ನ ಪೊನ್ನ ಮಾಳ್ಪಂತಾ ||
ಶೋಧಿಸಿ ದಲ್ ಮಾಸಬಡ್ಡಿಯತ್ತಿ |
....ವಿಧದಿಂ ಬೆಸ್ತರಾಸಿಕಕ್ಕುಂ ||

ಮ|| ದಶವರ್ಷಂಗಳ ಪೊನ್ಗಳಿಪ್ಪತ್ತೆರಡಕ್ಕಂತೆರಡು ತಿಂಗಳಿಂಗೆಯ್ದು ದ |
ದ್ದಶಮುಂಬಡ್ಡಿಯಾಗಲ್ಕೇಱುವರೆ ಬಣ್ಣಂ ಬೆಸ್ತಯುತಂ ||
ಶತಂ ಪೊನ್ಗಳಿಪ್ಪತ್ತಯ್ದು ಪೊನ್ಮುಂ ಬಡ್ಡಿಯಾಗಲ್ಕೆತಾಂ |
ವಸುಧಾಚಕ್ರೆಸು ಮೆಚ್ಚಿ ಪೇಱದೆನಿತುಂ ಭಾವಿಸಲ್ ||

.........................................|| ಬ ೧೦ ಗ ೨೭|| ತಿಂಗಳ್ ೨ ಕ್ಕೆ ಬಳಸಿ-||೦|| ಬ ೭|| ಗ ೧೨೫-|| ಮುಂಬಡ್ಡಿ ಗ ೫೦೦ || ಇಷ್ಟ ತಿಂಗಳ್ ೪........................... ಬಣ್ಣಕ್ಕೆ ತಿಂಗಳ್ ತಿಂಗಳ್ ಹೊನ್ನಿಂಗೆ ಹೊನ್ನಿಗೆ ಬಡ್ಡಿಗು ಬಡ್ಡಿ ಬೆಸ್ತ ಮಾಡುವುದು ಮುಂಬಡ್ಡಿಗ ೫ ಹೊನ್ನನು ಹಾಗವಮಾಡಿ..........................ರಾಶಿಯನು ಅದಱಿಂಗುಣಿಸಿ ೩೫೨೦೦೮-|| ಪ್ರತಿಯನಿಟ್ಟು ಮೊದಲ ಮೂಱುರಾಶಿಯ ಅಡರೆ ಗುಣಿಸಿ ಅಡರೆ ಗುಣಿ ...................... ಇದನು ಪ್ರತಿಯನಿಟ್ಟ ಮೊದಲ ಮೂಱುರಾಶಿಯ ಅಡರೆ ಗುಣಸಿಯ ಅದರ ಗುಣಿ..... ........ ಇದಱಿಂ ಭಾಗಿಸಲು ಲಬ್ಧಮಕ್ಕುಂ

ಸೂತ್ರ || ೩೧ ||

ಉ|| ವೃ|| ತಿಂಗಳು ಮೂಱುಪತ್ತು ದಿವಸಂಗಳಿಗೆಂಟಱ ಬಣ್ಣಮೊಪ್ಪುವಾ |
ಪೊಂಗಳು ಅಯ್ದು ಆಱುಪಣವಾಗ ಮೂಱನೆಯಂ ಸಮಂತು ಬ ||
ಣ್ಣಂಗಳು ಪೊನ್ನು ಶರಾಬ್ಧಿಗಂ ಪದಿಮೂಱುಕನಕಂಗಳಾಱುವ |
ಡ್ಡಂಗಳು ಮೂಱನಿನಪುರ . . . . ಕಾಣಿಯೆನೆ ಬಡ್ಡಿಯಕಾಲಮೇಂ ಬುಧಾ ||

ತಿಂಗಳು ೩ ದಿನ-೧೦ ಬ ೮ | ಗ ೫ ಬಡ್ಡಿಗಂ|| ೧ || ೩ ೧೦-|| ಗ ೪೫ ಗೆ ಮುಂ ಬಡ್ಡಿಗಂ ||೧೩|| ಕಾ ೩ ಗೆ ಲಬ್ಧ ತಿಂ.... ......೬-|| ಪ್ರಥಮ ಹಾರ ೭೪೩೦೦೦ || ದ್ವಿತೀಯ ಹಾರ ೩೦||

ಟೀಕು-ಬಣ್ಣ ಬಣ್ಣಕ್ಕೆ ಹೊನ್ನು ಹೊನ್ನಿಗೆಂ ತಿಂ(ಗಳು ತಿಂಗಳಿಗೆಂ) ಬಡ್ಡಿ ಹಾಗ ವೀಸ ಕಾಣಿಯ ಮಾಡಲು-೧೦೯೩೫|| ಇದನ್ನು ೫ ಱಿಂ ಗುಣಿಸಿ, ೮ ರಿಂ ಗುಣಿಸಿ, ೮ರಿಂ ಗುಣಿಸಿ ನೂಱಱಿಂ ಗುಣಿಸಲು ೪೩೭೪೦೦೦೦ ಇವನು ಪ್ರತಿಯಿಟ್ಟು ಹಾರವಮಾಡುವುದಕ್ಕೆ ೪೫ಸಿಟ್ಟು ೧೦ಱಿಂ ಗುಣಿಸಿ ಬಡ್ಡಿಯ ಕಾಣಿಯ ಮಾಡಲು ೫೪ಂ ಭಾಗಿಸೆ ೨೪೩೦೦೦ ಇದಂ ಭಾಗಿಸೆ ಬಂದುದನುಪಮುದ್ಯಾನಾಮದಿಲ್ಲಿ ದಿನಕೊಱತಾಗಿ ಒಂದು ತಿಂಗಳನು ದಿನಮಾಡಿ ೩೦ಱಿಂ ಭಾಗಿಸಲು ಲಬ್ಧ ಸರಿ||

ಸೂತ್ರಂ || ೩೨ ||

ಉ|| ಹತ್ತರ ಬಣ್ಣದಚ್ಚು ಗತಿಸಂಖ್ಯೆಗೆ ರಂಧ್ರ ಶಶಾಂಕಸಂಖ್ಯೆಯಾ |
ಗುತ್ತಿರೆ ಖಂಡುಗಂಗಳಾಱರ್ಘ್ಯದಿನಾಶತಷೋಡಶಂಗಳಾ |
ಮತ್ತಮದೆಂಟು ಬಣ್ಣವರೆ ಕಾಂಚನವೈದನೆ ಷೋಡಶಂಗಳಾ |
ಗುತ್ತಿರೆ ಲಾಭಮಂ ಗಣಕ ಪೇೞ್ವುದು ಸೂತ್ರದಿಷ್ಟದಿಂ ||

ಬ ೧೦–ಗ–೪|| ೩||–೧೯|| ಗ ೧೭೬–|| ಬ ೮ ಗ–೫|| ೩ ೧೬|| ಮಾಱಲು ಲಾ (ಭ)
ಲಬ್ಧ ೧೪೬|| ೩|| ವಿ ೧ || ಶಾ ೩|| ಹಾರ ೨೫೬೦–||

ಟೀಕು|| ಅರ್ಘ್ಯ . . . . . .ಸ್ತಮಾಡಿ ಬಂದಾ . . . ಗಳ ಹಾರವ ಮಾಡಿಕೊಂಡು ಕಡೆಯ ನಾಲ್ಕು ರಾಶಿಯನು ಹೆಚ್ಚು ಗುಣಿಸೆ ೩೭೪೬೮೦| ಇದು ಪ್ರತಿಯನಿಟ್ಟು ಮೊದಲ ಸ್ಥಾನದ ರಾಶಿಯನು ಹೆಚ್ಚು ಗುಣಿಸಲು ೨೫೬೦ ಇದಱಿಂ ಭಾಗಿಸು ಲಬ್ಧ ತಪ್ಪದು.

ಸೂತ್ರಂ || ೩೩ ||

ಮ|| ಸ್ರ|| ನವಬಣ್ಣಂ ಬೆಸ್ತ ಪೊನ್ನು (ಯು) ಗ್ಮ ವಗನಿಂದೊಂಬತ್ತು ಸಹಸ್ರಂಗಳಯ್ನೂ |
ಱುವರಂ ತಾಗೆ (ತಾನಾಗೆ?) ಶೂನ್ಯಾಂಬರ . . . . . ಖರಕ್ಕೆಯ್ದೆಕೊಳ್ಳಲ್ ||
ಶಿವಸಂಖ್ಯಂ ಯುಗ್ಮಪೊಂಗಳ್ ಪೊನ್ನು ಮೂಱಕ್ಕೆ ಹತ್ತು ಸಹಸ್ರಂಗಳ್ |
ತವೆಮಾಱಲ್ ನೀಚ....ಕದ ದೆಸೆಯಂ ತಾಯ:ದಲ್ಲಿ ಪೇೞ್ಸಂದಿರ್ದ ಲಾಭಂ||

ಬ ೯ | ಗ ೨ ||೦|| ಅಡಕೆ ೯೫೦೦ ಧಾರಣೆಯಲ್ಲಿ ಗ–೬೦೦| ಬ ೫ ||

ಗ ೩ || ಅಡಕೆ–೧೦೦೦೦ ಲಬ್ಧ ಗ ೮೭೪ ಹಾರ ೯೦೦೦೦೦೦—

ಟೀಕೆ || ಅರ್ಘ್ಯ ಅರ್ಘ್ಯ, ಬೆಸ್ತವಮಾಡಿ ಮೂಱು ಹೊನ್ನಹಣಮಾಡಿ ಕಡೆಯ ೪ ರಾಶಿಯ ಹೆಚ್ಚು ಗುಣಿಸಲು ೭೮೬೬೦೦೦೦೦೦ ಇದನ್ನು ಪ್ರತಿಯಿಟ್ಟು ಮೊದಲರಾಶಿಯ ಅಡರೆ ಗುಣಿಸಿ ೯೦೦೦೦೦೦ ಇದಱಿಂ ಭಾಗಿಸಲ್ ಲಬ್ಧ ತಪ್ಪದು.

ಸೂತ್ರಂ || ೩೪ ||

ಚಂ || ದಶವರೆ ವರ್ಣದಿಂದೆಸೆವ ಪೊನ್ ತ್ರಿತಯಕ್ಕೆ ಲೇಸೆನ್ದು ಮಾನದಿಂ– |
ಪಸರಿಸಿ ಚಂದ್ರಯುಗ್ಮದೊಳೆ ಖಂಡುಗಮಂ ಗಗನಾಂತ ಪೊಂಗೆ ತೊಂ ||
ಡೆಸರುದ ನೇಱು ಬಣ್ಣದ ಕನಕಂ ಶರಸಂಖ್ಯ ಅತ್ರಮಾನದಿಂ |
ರಸಶಶಿಖಂಡುಗಂ ಕೊಳ (ಗ) ವಯ್ದನೆ ಮಾಱಲು . . ಪೇೞ್ಬುಧಾ ||

ಬ–೧೦ || ಗ ೨ || ಮಾನ ೧೬|| ಕೊಳಗದಲ್ಲಿ ಬ–೨೧ . . . . . . . . ಬ ೭
ಗ–೫|| ಗ ೧೧೨–|| ೩–೧೬ || ಲಬ್ಧಗ ೧೭೨|೩ ವಿ ಶಾ ೨|| ಹಾರ ೪೯೧೪೦ ಶೇಷ ೭೫೬೦೦

ಟೀಕು|| ಮಾಸ ಮಾಸಕ್ಕೆ ಖಂಡುಗ ಖಂಡುಗಕ್ಕೆ ಬೆಸ್ತವಮಾಡಿ ಬಣ್ಣಗಳ ಹಾರವ ಮಾಡಿ ಅದನ್ನು ತಮ್ಮ ಸ್ಥಾನದಲ್ಲಿ ಇಟ್ಟು ಕಡೆಯ ೪ ನು ೧೬ ಱಿಂ ಗುಣಿಸಲು ೬೭೨೦ ಇದನು

೫೦ಱಿಂಗುಣಿಸಿ ೩೩೬೦೦೦ ಇದನ್ನು ೨೮ ಱಿಂಗುಣಿಸೆ ೯೪೦೮೦೦ ಇದನು ೯೦ ಱಿಂ ಗುಣಿಸಲು ೮೪೬೭೨೦೦ ಪ್ರತಿಯನಿಟ್ಟು ಹಾರವ ಮಾಡುವುದು ದಕ್ಕೆ ೩೨೫|೧೨ ಱಿಂ ಗುಣಿಸಲು ೩೯೦೦ ಇದನು ೩ ಱಿಂ ಗುಣಿಸಲು ೧೧೭೦೦ ಇದನು ೪೨ ಱಿಂ ಗುಣಿಸೆ ೪೯೧೪೦೦ ಇದಱಿಂ ಭಾಗಿಸಲು ಲಬ್ಧಮಕ್ಕುಂ.

ಸೂತ್ರಂ ||೩೫||

ವರ್ಣಗದಿ-ಹೊಂಗು-ಬಿಸಿಗೆಗಳ ಪಮಾಗೆ ಮಿಶ್ರಿತಂ ಅಂ |
ಬರಗಜ ಪ್ರಮಾಣ–ತೊಲೆಯರ್ಘದಿ ಪೊನ್‌ತ್ರಯಕ್ಕೆ ಕೊಂಡುತಾಂ ||
ಭೋರೆನಲನ್ತವರ್ಣಪುರಕಾಂಚನಮಯ್ದುಱ ಕಟ್ಟಿನೊಳ್ |
ಭಾರಪ್ರಮಾಣತೊಲೆಯರ್ಘದಿ ಹತ್ತಿಯ ಮಾಱಲು ಲಾಭಮೇಂ ಬುಧಾ ||

ಬ ೧೨ ಗ ೩. ಬಿ-೯ ತೊಲ್ತೆ ಧಾರಣೆಗೆ ೩೦೦ ಕೊಂಡು ಗ ೩|| ಗ ೫ ಪ-೧೦ ಕೊಲ ತೊಲೆ ೩| ಧಾರಣೆಯಲ್ಲಿ ಮಾಱಲು ಲಬ್ಧ ಗ ೭೩೬೮೩|| ವಿ–ಭಾ ೨ ಗಿ–೩ ಹಾರ ೧೫೮ ರಾ| ಸೆ (ಶೇಷ ?) ೧೦೮೦.

ಟೀಕೆ|| ಬೆಸಿಗೆಗಳ ಹಲಮಾಡಿ ಬೆಸ್ತವಮಾಡಿ ತೊಲೆಯನು ಬೆಸ್ತವ ಮಾಡಿ ಇದ್ದ ಬೆಸ್ತಿಕ್ರಮ ಕಡೆಯ ೫ ರಾಶಿಯನು ಹೆಚ್ಚು ಗುಣಿಸೆ ೧೧೬೬೪೦೦೦ ಇದನು ಪ್ರತಿಯನಿಟ್ಟು ಮೊದಲ ೪ ರಾಶಿಯನು ಹೆಚ್ಚು ಗುಣಿಸಿ ೧೫೮೪ಂ ಇದಱಿಂ ಭಾಗಿಸೆ ಲಬ್ಧ.

ಸೂತ್ರಂ ||೩೬||

ಕಂ || ಇರದೊಂದು ಪೊನ್ಗೆ ಅಱುಸಾ |
ಸಿರದೇಱಡಕೆಯರ್ಘದಿಂ ಹೊನ್ನಯ್ಪ್ನಾ ||
ಱಿರಡಕ್ಕಂ |ತ್ರೈರಸಿಪದಿ |
ನೇಱುಮಾನಕೊಳಗದಿ........||

ಸೂತ್ರಂ ||೩೭||

ಪದಿನೈದುಂ ಮಾನದ ಕೊಳ |
ಗದಿನಳೆಯಲ್ ನೂಱುಯೇಱು ಖಂಡುಗಮಾಗಲ್ ||
ಅದನಾ ಪದಿನಾಱುಂಮಾ |
ನದ ಕೊಳಗದಿನಳೆದೊಡೆ (ನಿತು) ಖಂಡುಗಮಕ್ಕುಂ ||

ಮಾನ ೧೭೦ ಕೊಳಗದಲ್ಲಿ ಖ-೧೦೭ || ಮಾನ ೧೬|| ಲಬ್ಧ ಖ ೧೧೩|| ೩||
ಹಾರ ೧೬

ಟೀಕು|| ಮಾನ ಮಾನಕ್ಕೆ ಬೆಸ್ತವಮಾಡಿ . . . ೧೦೭ ಱಿಂ ಗುಣಿಸಿ ೧೬ ಱಿಂ ಭಾಗಿಸಲು ಲಬ್ಧಮಕ್ಕುಂ

ಸೂತ್ರಂ || ೩೮ ||

ಪದಿನೇೞುಮಾನಕೊಳಗದಿ |
ನಳೆದೊಡೆ ಶೂನ್ಯನಯನೇಂದು ಖಂಡುಗಮಾಗ ||
ಲ್ಕದನಳೆಯೆ ಖಂಡುಗಂ ನೂ |
ಱೆರಡಾಗಿರೆ ಬೞಿಕ್ಕಳೆನುದೆನಿತು ಮಾನದ ಕೊಳಗಂ ||

ಖ ೧೨೦ ಮಾ ೧೭|| ಕೊಳಗ-ಖ ೧೦೨-|| ಲಬ್ಧ ಮಾ-೨೦-೦ ಹಾರ ೧೦೨

ಟೀಕು|| ಖಂಡುಗ ಖಂಡುಗಕ್ಕೆ ಬೆಸ್ತ ೧೨೦-೧೭ ಹೆಚ್ಚು ಗುಣಿಸಿ ೧೦೨ ಭಾಗಿಸಲು ಲಬ್ಧ ತಪ್ಪದು.

ಸೂತ್ರಂ || ೩೯ ||

ಕಂ|| ಪದಿನಯ್ದುಮಾನ ಕೊಳ |
ಗದಿನಳೆದೊಡೆ ನೂಱುಹತ್ತು ಖಂಡುಗವಾಗ ||
ಲ್ಕದನು ಹದಿನೇೞು ವರೆಮಾ |
ನದ ಕೊಳಗದಿ ತಾನಳೆದೊಡೆನಿತು ಖಂಡುಗಮಕ್ಕುಂ ||

ಮಾ-೧೫ ಖ-೧೧೦ || ಮಾ-೧೭ || ಲಬ್ಧ ಖ-೯೪ || ೦ || ಮಾ-೩ || ೧ || ಹಾರ ೬೦

ಟೀಕು || ಮಾನ ಮಾನಕ್ಕೆ ... ಗೆ ಮಾಡಿ. ಬೆಸ್ತವ ಮಾಡುವುದು || ೬೦ ನು ೧೧೦ ಹೆಚ್ಚು ಗುಣಿಸಿ ೭೦ ಭಾಗಿಸೆ ಲಬ್ಧ ತಪ್ಪದು-ಶೇಷ-೬೮- ||

ಸೂತ್ರಂ || ೪೦ ||

ಕಂ|| ಪದಿನಾಲ್ಕು ಮಾನ ಕೊಳಗದಿ |
ನಳೆದೊಡೆ ನೂಱಯೆರಡು ಖಂಡುಗಮಾಗಲ್ಕದ ||
ನಳೆಯೆ ಖಂಡುಗಂ ನೂಱೇೞಾಗಲು |
ಮದು ಬೞಿಕಳೆದೊಡೆನಿತು ಮಾನದ ಕೊಳಗಂ ||

ಖಂ-೧೦೨ || ಮಾನ-೧೪ || ಖಂ-೧೦೭ || ಲಬ್ಧ ಮಾ-೧೩ || ಸೊ-೧ ಶೇಷ-೫೩-ಹಾರ-೧೦೭.

ಟೀಕು || ಖಂಡುಗ ಖಂಡುಗಕ್ಕೆ ಬೆಸ್ತ ೧೦೨ || ಹ-೧೪ ಹೆಚ್ಚು ಗುಣಿಸಿ ೧೦೭ ಭಾಗಿಸಲು ಲಬ್ಧ ತಪ್ಪದು.

ಸೂತ್ರಂ || ೪೧ ||

ಕಂ|| ಸಲೆ ಪದಿನಾಱು ಕಟ್ಟಳೆ |
ನೆಲೆಯೆನಿಸುವ ಕೋಲೊಳೊತ್ತಿ ಬಿ(ೀಸ,ಗೆ ನೂಱು ||
ನೆಲೆ ಪದಿನೆಂಟಱ ಕಟ್ಟಳೆ |
ಫಲಮೆನಿಸುವ ಕೋಲೊಳೊತ್ತಿ ತೂಗಲ್ಕೇನೋ ||

ಕಟ್ಟಳೆಯಪಲ-೧೬-|| ಕೋಲುಬೀಸಿಗೆ-೧೦೦ ಕಟ್ಟಳೆ ೧೮ || ಕೋಲಲ್ಲಿ ತೂಗಿದರೆ ಲಬ್ಧ ಬೀಸಿಗೆ ೮೮ ಪಲ-೧೭|| ಶೇಷ ೨|| ಹಾರ ೧೮||

ಟೀಕು|| ಕಟ್ಟಳೆ ಕಟ್ಟಳೆಗೆ ಬೆಸ್ತವಮಾಡಿ ೧೬ ನೂ ೧೦೦ ನೂ ಗುಣಿಸಿ ೧೮ ಱಿಂದ ಭಾಗಿಸಲು ಲಬ್ಧ ತಪ್ಪದು.

ಬೆಸ್ತತ್ರೈರಾಶಿಕಕ್ಕೆ ಬಣ್ಣಾಂತರ

ಸೂತ್ರಂ || ೪೨ ||

ಪದಿನೈದು ಪೊನ್ನ ಬಣ್ಣದ |
ವಿದಿತಂ ಪದಿನೇೞುಪೊನ್ನು ಹಣವಯ್ದುಕ್ಕಂ ||
ಪದಿನಾಱುಂ ಬಣ್ಣದ ಪೊ |
ನ್ನಿದ ಭಾವಿಸಿ (ನೀಂ) ತಿಳಿದು ಪೇೞು ಏನೆಂಬುದಮಂ ||

ಬಣ್ಣ ೧೫|| ಗ-೧೭|| ಬಣ್ಣ-೧೬ || ವಟ್ಟಯಿಸಲು ಲಬ್ಧಗ ೧೬ ಗಂ-|| ಕಾ ೩ ಹಾರ ೬೪೦ ಹಾಗೆ-೪೮.

ಟೀಕು|| ಬಣ್ಣ ಬಣ್ಣದ ಹಾಗವ ಮಾಡಿ ಬೆಸ್ತವ ಮಾಡುವುದು. ಕಡೆಯ ೧೭೫ ಗುಣಿಸಲು ೧೦೬೭-||(ಹೊನ್ನನು?) ಪ್ರತಿಯನಿಟ್ಟು ಮೊದಲ ೬೪ ಭಾಗಿಸಲು ಲಬ್ಧ ತಪ್ಪದು.

ಸೂತ್ರಂ || ೪೩ ||

ಪದಿನೈದುಂ ಮಾನದ ಕೊಳ |
ಗದಿನಳೆದೊಡೆನೂಱ ಹನ್ನೆರಡು ಖಂಡುಗಮುಂ ||
ತದನೆ ಪದಿನೇೞುವರೆ ಮಾ |
ನದ ಕೊಳಗದಿನಳೆಯಲೆನಿತು ಖಂಡುಗಮಕ್ಕುಂ ||

ಮಾ ೧೫ ಲಿ ಅಳೆದು ಖ ೧೧೨ ನೂ ಮಾನ ೧೭|| ಯ ಕೊಳಗದಲ್ಲಿ ಅಳದಡೆ ಲಬ್ಧ ಖ ೯೬ ಹಾರ ೭೦ ಮಾನಮಾನವನೂ ಸೊಲ್ಲಗೆಯ ಮಾಡಿ ಬೆಸ್ತವ ಮಾಡೂದು.

ಸೂತ್ರಂ || ೪೪ ||

ಎರಡುಂ ಕೊಳಗದಿನಳೆದೊಂ |
ದುರಾಸಿ ಇತ್ತೆರದ ನಡುವಣಿಚ್ಛೆಯ ಮಾನಂ ||
ನಿರುತಂ ಹತಿಗೈದಿರೆ ಬಂತಾ |
....ಬೞಿಕಳೆದವೆನಿತು ಮಾನದ ಕೊಳಗಂ ||

ಸೂತ್ರಂ || ೪೫ ||

ಮೊದಲೊಳಳೆದಿರ್ದ ಖಂಡುಗ |
ಮದನೂಱಿಂಟಾಗೆ ಮತ್ತಮಂತದನಳೆಯ ||
ಲ್ಕದು ನೂಱಿಪ್ಪತ್ತೆಂಟಾ |
ದುದೆನಲೆರಡು ಕೊಳಗದ ಪ್ರತಿಯುತವಮಂ ||

ಖ ೧೦೮ ನೂ ಮಾ ೧೬ ಅದನು ಖ ೧೨೮ ಲಬ್ಧ ನೂ ೧೩|| ಹಾರ ೧೨೮ ಖಂಡುಗ ಖಂಡುಗಕ್ಕೆ ಬೆಸ್ತವ ಮಾಡೂದು.

ಸೂತ್ರ || ೪೬ ||

ಪದಿನಾಱು ಮಾನದ ಕೊಳ |
ಗದಿನಳೆದ ನೂಱ ಮೂಱು ಖಂಡುಗದೊಳ್ ನೂಱು ||
ಮೊದಲಿರ್ದ ಪತ್ತು ಬಳ್ಳಮು |
ನದನಳೆಯಲ್ ನೂಱುಖಂಡುಗಕ್ಕೇನಕ್ಕುಂ ||

ಖ ೧೦೩ ಮಾ ೧೬ ಲ್ಲಿ ಖ ೧೦೦ಲು ಲಬ್ಧ ಮಾ ೧೬|| ಹಾರ ೮೦೦

ಸೂತ್ರಂ || ೪೭ ||

ಕೊಳಗದ ಮಾನಾಂತರದಿಂ |
ಫಲದೊಳ್ ಕಟ್ಟಳೆಯ ಭೇದವಂ ಪಣಮುಕ್ಕುಂ ||
ತಿಳಿತಮ್ಮೊಳ್ ತಾಂ ಬೆಸ್ತ |
ತ್ರೈರಾಸಿಕಕ್ಕೆ ತಪ್ಪದೆ ಬಕ್ಕುರ್ಗಂ ? ||

ಸೂತ್ರಂ || ೪೮ ||

ಕಟ್ಟಳೆ ಪದಿನಾಱಿಸಿಸುವ |
ದಷ್ಟದ ಕೊಳಗನೂಱು ಬೇಸಿಗೆಯಾಗಲ್ ||
ಮುಟ್ಟಪದಿನೆಂಟು ತೂಕದ |
ಕಟ್ಟಳೆಗೋಲಿನಲು ತೂಗಲದುವೆನಿತಕ್ಕುಂ |

ಕಟ್ಟಲೆ ೧೬ ರಲ್ಲಿ ಎತ್ತಿದ ಬೀಸಿ ೧೦೦ ಕಟ್ಟಳೆ ೧೮ ರಲ್ಲಿ ತೂಗಲು ಲಬ್ಧ ಬೀಸಿ ೮೮ ಹಲ ೧೭|| ಶೇಷ ೨ ಹಾರ ೧೮.

ಸೂತ್ರಂ || ೪೯ ||

ಇನ್ನೂಱು ಹೊನ್ನು ತೂಕದ |
ಹನ್ನೆರಡಿರೆ ಕಡೆಯು ವಳಿದು ಮಾಡಿಸಲ್ಪೆಸವಾ ||
ಹೊನ್ನೆಪ್ಪತ್ತೈದಱೊಳಾ |
ಬಿನ್ನಣಿಗರು ಮಾಡಲೆನಿತು ಕಡೆಯುಮದಕ್ಕುಂ ||

ತೂಕ ಗ ೨೦೦ ರಲ್ಲಿ ಕಡೆಯ ೧೨ ನೂ ತೂಕ ೭೫ ಕ್ಕೆ ಲಬ್ಧ ಕ ೪| ಹಾರ ೭೫

ಸೂತ್ರಂ || ೫೦ ||

ಹನ್ನೆರಡುವರೆಯು ಬಣ್ಣದ |
ಹೊನ್ನೊಂಭತು ಸಾವಿರಂವಿರೆ ಕರಗಿಸಲಾ ||
ಹನ್ನೊಂದು ಹಾಗದಾ ಹೊಸ |
ಹೊನ್ನಂ ಬೆಟ್ಟಸಲರಮನೆಗೆ ಸಲಿಸುವೊಡದಂ ||

ಬಣ್ಣ ೧೨|| ಲ್ಲಿ ಬೆಟ್ಟದು ಗ ೯೦೦೦ ನೂ ಬಣ್ಣ ೧೧ ಲ್ಲಿ ಬೆಟ್ಟಲು ಲಬ್ಧ ಗ ೧೦೦೦೦ ಹಾರ·೪೫.

ಸೂತ್ರಂ || ೫೧ ||

ಹತ್ತುವರೆ ಬೇಳೆಬಣ್ಣದ |
ಹತ್ತೊಂಭತ್ತುಂ ಸುವರ್ಣ ದಾರ್ಪಣಮಂತಂ ||
ದಿತ್ತೊಡಮೆನಿತಾಗಿಕ್ಕೊಂ |
ಭತ್ತುಂ ಮುಪ್ಪಾಗವೀಸದೆನಿತುಂ ಪೊಂಗಳ್ |

ಬ ೦೧೦|| ದುಗ ೧೯|| ಕ ಬಣ್ಣ ೯|| ೧ ದುಲಬ್ದಗ ೨೧೯೨|| ಹಾರ ೭೮೪

ಸೂತ್ರಂ || ೫೨ ||

ಪದಿನೈದು ಪಾಗ ಬಣ್ಣದ |
ಮದುನೂಱೀಟಿೊ....ನನೊಯ್ದು ||
ಪದಿನಾಱು ಬಣ್ಣದ ಪೊಂಗೆ |
ತಂದುವಟ್ಟೈಸಿದಡಂತೆನಿತಕ್ಕುಮೆಂಬುದಂ ಪೇಟ್ಗಣಕಾ |

ಬಂ ೧೫ ದು ಗ ೧೦೭ ನೂ ಬಂ ೧೬ ನೂ ವಟ್ಟೈಸಿ ದಡೆ ಲಬ್ಧಗೆ ೧೦೧|| ೪|| ೧|||೧ ಹಾರ ೪

ಸೂತ್ರಂ || ೫೩ ||

ಪದಿಮೂಱು ಬಣ್ಣವೊಪ್ಪುವ |
ಪದಿನೈದುಂ ಪೊನ್ನೂಱು ಹಣವಿಗೆ ಮತ್ತಾ ||
ಪದಿನಾಱು ಬಣ್ಣ ಪೊನ್ನದು |
ಸದಮಳದಲಿ ತಿಳಿಯಪೇಟಿ ಗಣಿತವಿಳಾಸಾ ||

ಬಂ ೧೩ ದು ತೂಕಗ ೧೫೫ ಬಂ ೧೬ ಕ್ಕೆ ತೂಕ ಲಬ್ಧಗ ೧೨|| ೧ || ಹಾರ ೧೬
ದ್ವಿತೀಯ ಹಾರ ೧೦

ಪುಟದ ವರ್ಣಾಂತರಕ್ಕೆ ಸೂತ್ರ

ಸೂತ್ರಂ || ೫೪ ||

ತುಷ್ಟಿಗೈದಿರ್ದ ಹೊನ್ನಂ |
ಶುಷ್ಟಿಯನ್ನೈದಲ್ ಮಿಶ್ರವರ್ಣದಿ ನೂರ್ತಾ ||
ನಷ್ಟಿಗೈದಿರ್ದ ಪೊನ್ನಂ |
ನೆಟ್ಟನೆ ತೆಗೆಯಲ್ಕೆ ಬಕ್ಕು ನಷ್ಟದ ಬಣ್ಣಂ ||

ಸೂತ್ರಂ || ೫೫ ||

ಏಟುವರೆಬಣ್ಣ ಪಚ್ಚಂ |
ಕೀಟಾದೆಂಭತ್ತುತೂಕ ಗಟ್ಟಿಯ ತಂದುಂ ||
ಬೋಟೈಸಿ ಪುಟವನಿಕ್ಕಲ್ |
ಪೇಟ್ಟೈಪನ್ನೆರಡು ಬಣ್ಣ ತೂಕವದೇನ್ನೈ ||

ಬಣ್ಣ ೭|| ದು ತೂಕ ೮೦ ಪುಟ ಬಂ ೧೨ ಲು ಲಬ್ಧ ತೂಕ ೫೦ ಹಾರ ೪೮.
ಬಣ್ಣ ಬಣ್ಣಕ್ಕೆ ಬೆಸ್ತುವ ಮಾಡೂದು.

ಸೂತ್ರಂ || ೫೬ ||

ಒಂಭತ್ತು ಮುಪ್ಪಾಗ ಬಣ್ಣ |
ಮೆಂಭತ್ತುಂತೂಕವಾಗೆ ತಂದಿಡೆ ಪುಟಮಂ ||
ಸಂಭವಿಸಿ ನೆಗಲ್ದಗಟ್ಟಿಯು |
ನಿಂಬಿನೊಳಱುವತ್ತು ತೂಕ ಮೊದಲಂ ಪೇೞಾ ||

ತೂಕ ಗ ೮೦ ದು ೭೯||| ತೂಕ ಗ ೬೦ ಲು ಬಣ್ಣ ಲಬ್ಧ ಬಂ ೧೩ ಹಾರ ೬೦ ದ್ವಿತೀಯ ಹಾರ ೪. ತೂಕತೂಕಕ್ಕೆ ಬ್ಯಸ್ತ.

ಸೂತ್ರಂ || ೫೭ ||

ಅಱುವತ್ತು ಒಣ್ಣ ಪೊಂಗಳ್ |
ನೆಱೆ ಗದ್ಯಾಣಂ ನೂಱಕ್ಕೆ ಹನ್ನೆರಡು ||
ನೆಱೆ ಬಣ್ಣಮಂ ತಾವೆನಿತ |
ತಱುಪವೆಂಬುದ ಹೇೞ್ ಸೂತ್ರ ಕ್ರಮದಿಂ ||

ಬಂ ೬೦ ದು ತೂಕ ಗ ೧೧೦ ಬಂ ೧೨|| ಲಬ್ದ ಗ ೪೮ ಹಾರ ೫೦.

ಸೂತ್ರಂ || ೫೮ ||

ಹತ್ತುಂ ಬಣ್ಣ ಪೊನ್ ನೂಱು
ಪ್ಪತ್ತುಂ ತೂಕವನೆ ತಂದು ಪುಟವನ್ನಿಕ್ಕ ||
ಲ್ಯುತ್ತಮ ಪದಿಮೂಱಾದುದು |
ಮತ್ತಾ ಉೞಿದಿರ್ದ ತೂಕಮಂ ಪೇೞ್ಗಣಕಾ ||

ಬಂ ೧೦ ಕಂ ತೂಕ ೧೨೦ ಬಂ ೧೩ಕ್ಕೆ ಲಬ್ದ ಗ ೯೨ | ೩ ವಿ ೧ || ಹಾರ ೧೩ ಭಾಗೆ ಬಾರದ ಕಾಣಿ

ಸೂತ್ರಂ || ೫೯ ||

ಪದಿಮೂಱುಂ ಬಣ್ಣದ ಅಱು |
ವತ್ತುಂ ತೂಕವನೆ ತಂದು ಪುಟವಿಡೆ ಮತ್ತಂ ||
ಪದಿನಾಱು ಬಣ್ಣವಾಗಲ್ |
ಸಂಭವಿಸಿ ನೆಗಲ್ದ ಗಟ್ಟಿಯು ತೂಕವದೇನೋ

ಬಂ ೧೩ ದು ತೂಕ ೬೦ ಬಂ ೧೬ ಲು ಲಬ್ಧ ಗ ೪೮ || ೨ || ಹಾರ ೧೬.

ಸೂತ್ರಂ || ೬೦ ||

ಆಱುವರೆ ಬಣ್ಣದಚ್ಚುಂ ಕೇ |
ಱೆಪ್ಪೊನ್ನುಂ ತೊಂಭತ್ತು ತೂಕ ಗಟ್ಟಿಯು ತಂದುಂ ||
ಮೇಳೈಸಿ ಪುಟವನಿಕ್ಕಲ್ |
ತೇಲಿದೊಡಱುವತ್ತು ಆದಱ ಬಣ್ಣವದೇನೋ

ತೂರ್೯೦ ದು ಬಂ ೬ || ತೂಕ ೬೦ ರೆ ಲಬ್ಧ ಬಂ ೯||| ಹಾರ ೬೦ ದ್ವಿತೀಯ ಹಾರ ೪.

## ಮಿಶ್ರ ತ್ರೈರಾಶಿಕಕ್ಕೆ ಸೂತ್ರಂ

**ಸೂತ್ರಂ || ೬೧ ||**

ರಾಶಿಯ ಕೂಟಂ ಪವಳಾ |
ರಾಶಿಯೊಳಿಷ್ಟಕ್ಕೆ ಬಂದುದಿಚ್ಚೆ ಸಮಂತಾ ||
ರಾಶಿಯೆ ಪಳಮಾಗಿರೆ ತಂ |
ದೋಸರಿಸದೆ ತಿಳಿಯಪೇಟ ಗಣತವಿಳಾಸಾ

**ಸೂತ್ರಂ || ೬೨ ||**

ಗತಿರವಿ ನೃಪಸಂಖ್ಯಾಕದ |
ಘೃತದಧಿ ದುಗ್ಧಮನೆ ವೀತರಾಗಂಗಭಿಷೇ ||
ಚಿತವ ಮಾಡಿ ಮತ್ತಂತಾ |
ಸ್ಥಿತಿಯೊಳೆಣಿಸಲ್ಕೆ ಪೇಟಾ ಮಿಶ್ರದ ಪವಣಂ

ತುಪ್ಪ ೪ ಮೊಸರು—ಖಂ ೧ ೨ ಹಾಲು ಖ ೧೪ ಮಾ ಅಭಿಷೇಕವ ಮಾಡಿದುದನು ಅವರವ ಠಲ್ಲಿ ತುಂಬಲು ಲಬ್ಧ ತುಪ್ಪದ ಕೊಡದೊಳಗಣ ತುಪ್ಪ ||೧|| ಆ ಕಳಸದೊಳಗಣ ಮೊಸರು ೧, ಆಕಳಸದೊಳಗಿಣ ಹಾಲು ೨ ಅಂತು ೪ ರೂ. ಸರಿ ಮೊಸರ ಕೊಡದೊಳಗಣ ಮೊಸರು || ೪ || ಆಕಳಸ ದೊಳಗಣ ತುಪ್ಪ ಖಂ ೧|| ಹಾಲು ಕೊಡದೊಳಗಣ ಹಾಲು ಖಂ |೩ ಮೊಸರ ಕೊಡ ದೊಳಗಣ ಮೊಸರು ಖ|೧ ತುಪ್ಪದ ಕೊಡದೊಳಗಣ ತುಪ್ಪ ||೨ ಅಂತು ಹಾಲಕೊಡ ಖಂ ||| ೧ ರೂ. ಸರಿ. ಹಾರ ೩೨.

ಟೀಕಿನ ಲೆಕ್ಕ—ಮೊಟ ೨೦. ಕಟು ೧೦ ಮೊಟ ೧೪ಲ್ಲಿ ಬಳದೊಡೆ ಲಬ್ಧ ಕಟು ೧೪.

ಹೆಣರು ೫೦. ಎಣ್ಣೆ ೧.

ಟೀಕು : ಕಟು ೧ಕ್ಕೆ ೨೦ ಹೆಣರು. ಹೆಣರಿಗೆ ೫ ಎಳೆ ತಪ್ಪದು...೨೦. ಮೊಟಕ್ಕೆ ಬಳದ ಕಟ್ಟು ೯ ಹೆಣರು ೫ ಸೂ ಅಳಿದು ಮೊ ೧೪ಲ್ಲಿ ಬಳೆದೊಡೆ ಲಬ್ಧ ಕಟು ೧೩ ಹೆಣರು ಎಳೆ ೧,

**ಸೂತ್ರಂ || ೬೩ ||** —ಪೊದುವಿನ ಸೂತ್ರ—

ಜೀವಿತದ ಪೊಂಗಳಂ ಸ |
ದ್ಭಾವದಿನಾಳಿಂದಮಿಱುದು ಕೂಡಿಟ್ಟು ಬಟಾ ||
ಕ್ಕಾವಗಮಂತ್ರೈರಾಸಿ ಕ |
ದಾವಿಧದಿಂದೆಸೆಯೆ ಪೊಡನಿಡುವಂ ರಾಜಂ ||

**ಸೂತ್ರಂ || ೬೪ ||**

ಸಮವಿಷಮಂ ಪದಿಪಾದೊಡೆ |
ಸಮ ವಿಷಮುಮ ನೊಂದುಗೂಡಿ ಭಾಗಂ ಗೊಂಡಾ ||
ಕ್ರಮದಿಂ ಲಬ್ಧಮನಿಱುದೊಡೆ |
ಸಮವಿಷಮಂ ಸಮನೆ ಬರ್ಕ್ಕುರಾ (ಜಾದಿತ್ಯಾ) ಜನಮತದಿಂ ||

ಸೂತ್ರಂ || ೬೫ ||

ಒಬ್ಬನವ್ವೆದೊಬ್ಬನ ವಾ|
ಱೊಬ್ಬನವೇೞ್ಪಿಂಗೆ ಮೂಱುಗೊಂಡಾ ಸಮನಿಂ ||
(1) ತೊಬ್ಬುಳಿಯಾಗಿ ಪೂಱುಗೊಟ್ಟಂ |
ಸಬ್ಬಧನ ರಸ ಶಶಾಂಕ ಯುಗನೆನಲವರ್ಗ್ಗೆ ||

ಸಮುಚ್ಚಯ ಪದಿಪುಗ ೨೧೬ಗೆ ಲಬ್ಧ ಪ್ರತ್ಯೇಕ ಗ ೬೦ ಗ ೭೨ ಗ ೮೪ ವೊಗ ೨೧೬ ಸರಿ ಮೂರು ರಾಶಿಯನೂ ತಮ್ಮ ತಮ್ಮ ಕುದಿರೆಯಿಂದ ಗುಣಿಸಿ ಕೂಡಲು ೧೮. ಇದನೂ ಹಾರವಮಾಡಿಕೊಂಡು ಕಡೆಯ ೨೧೬ನೂ ಮೊದಲರಾಶಿ ೫ನೂ ಗುಣಿಸಲು ೧೦೮೦ನೂ ಹಾರ ೧೮ರಿಂ ಭಾಗಿಸಲು ಕುದಿರೆ ೫ಕ್ಕೆ ಬಂದ ಲಬ್ಧ ಗ ೬೦ ಮತ್ತೆ ೨೧೬ನೂ ೬ರಿಂ ಗುಣಿಸಲು ೧೨೯೬ ನೂ ೧೮ರಿಂ ಭಾಗಿಸಲು ಕುದಿರೆ ೬ಕ್ಕೆ ಬಂದುದು ಗ ೭೨ ಮತ್ತಂ ೨೧೬ನೂ ಕಡೆಯರಾಶಿ ೭ರಿಂ ಗುಣಿಸಲು ೧೫೧೨ನೂ ೧೮ರಿಂ ಭಾಗಿಸಲು ಲಬ್ಧ ಕುದಿರೆ ೭ಕ್ಕೆ ಗ ೮೪. ಅಂತು ಕುದಿರೆ ೧೮ಕ್ಕೆ ಗ ೨೧೬ ಸರಿ.

ಸೂತ್ರಂ || ೬೬ ||

ಪೊನ್ನೆರಡಱ ವೇೞ್ಗಾ– |
ಪೊನ್ನಯ್ದುಱವೆಂಟು ಱಾನು ಪೊನ್ನಾ—— ||
ಱಱಮೇೞ್ಗಾಳುಂ ಗತಿನಯ |
ಪೊನ್ನಂ ಸಲೆ ಪೆಸರದೆನಿತು ವೊಬ್ಬನ ಭಾಗಂ ||

| | | | |
|---|---|---|---|
| ಗ–೩ | ಗ–೫ | ಗ–೬ | ಪದಿಪು ಸಮುಚ್ಚಯ ಗ–೨೪ ಲಬ್ಧ ಪ್ರಾತಿಕ ಗ ೩ || |
| ಅ–೭ | ಅ–೮ | ಅ ೭ | |

ಗ–೧೦ ಗ ೧೦|| ಹಾರ ೧೬ ||

---

(1) ತುರ್ಬಿಯೊಳ್ ನೂಱತೊಂಬತೆಂಟಕೆ |
ಒಬ್ಬೊಬ್ಬಗೆ ಒಂದುವೆನಿತು ಪೊದಪದುಸಮುಚ್ಚಯ ||
ಗ–೧೯೮ | ಲಬ್ಧ ಪ್ರತ್ಯೇಕರಿಗೆ ಗ–೫೫ || ಗ–೬೬ – ಗ–೭೭ ಹಾ ( ರ ) ೧೮ ||

ಟೀಕು || ಕಳ....ನಿಟ್ಟು ಅವಱಿಂ ಗುಣಿಸೆ ೧೮–|| ಈ ಹಾರವಿಂಗ (೭) ೧೯೮ ಹೊನ್ನನು ೫ ಹೆಚ್ಚು ಗುಣಿಸಿ ಹಾರ-೧೮ ಭಾಗಿಸೆ ಲಬ್ಧ ಮೊದಲು ಆಱನು ( ೬ನು ) ಗುಣಿಸಿ ೧೮ ಭಾಗಿಸೆ ಲಬ್ಧ ತಪ್ಪದು. ೧೯೮ನು ೭ಱಿಂ ಹೆಚ್ಚು ಗುಣಿಸಿ ೧೮ಱಿಂ ಭಾಗಿಸಿ ಲಬ್ಧ ತಪ್ಪದು.

( ಸೂತ್ರ ೪೪–೪೩ ? )
( ಎಂದು ಕಪ್ರತಿಯಲ್ಲಿದೆ )

ಟೀಕು|| ತಮ್ಮತಮ್ಮ ಹೊನ್ನುಹೊನ್ನನು ತಮ್ಮತಮ್ಮ ಆಳುಆಳಿಂ ಗುಣಿಸಲು ೧೪ ೪೦, ೪೨|| ಇದನು ಕುಡಲು ಇದನು ಹಾರವಾಗಿ ಇರಿಸಿ ೧೪ನೂ ೨೪ಱಿಂ ಗುಣಿಸಿದರೆ ೩೩೬ನೂ ೯೬ಱಿಂ ಭಾಗಿಸಲು ಲಬ್ಧ ಸರಿ ೪೦ನೂ ೨೪ಱಿಂ ಗುಣಿಸಿ ೯೬ಱಿಂ ಭಾಗಿಸಲು ಲಬ್ಧ ಸರಿ–೪೨ನೂ ೨೪ಱಿಂ ಗುಣಿಸಲು ೯೬ಱಿಂ ಭಾಗಿಸಲು ಲಬ್ಧ ಸರಿ (೪೨ನೂ ೨೪ಱಿಂ ಗುಣಿಸಲು ೯೬ಱಿಂ ಭಾಗಿಸಲು ಲಬ್ಧ ಸರಿ.)

ಸೂತ್ರಂ || ೬೭ ||

ಮೂಱಯ್ದೇೞ್ತುರಗಂ ಹ |
ಪೊಂಗಿತಂ ಬಂದ ಮನೆಮಾಱಿ ಸಮಧನವಕ್ಕುಂ ||

| ಒಟ್ಟು- | ೧ | ೧ | ೧ | ೧ | ೧ | ಲಬ್ಧ ಕ್ರಯ ಮುತ್ತ........ದಿ ಕ್ರಯ |
|---|---|---|---|---|---|---|
| | ೬ | ೭ | ೮ | ೯ | ೧೦ | |

೧೧ ಅವರಿಗೆ ಸಮಧನ ಗ ೨೧ ಗ ೨೧ ಗ ೨೧ ಗ ೨೧ ಗ ೨೧||

ಟೀಕು || ಹಿರಿದಾಗಿದ್ದ ದಾರಿ ೧೦ನೂ ೨ಱಿಂ ಗುಣಿಯಿಸಿ ೧ ಕೂಡಲು ಮೊದಲಕ್ರಯವಹುದು. ಮತ್ತೆ ಹಿರಿದಾಗಿದ್ದ ೧೦ರೊಳಗೆ ೧ ಕೂಡಲು ೧೧ ಇದು ವಿಕ್ರಯವಹುದು. ಮೊದಲ ಕ್ರಯ ೨೧ನೂ ಮೊದಲ ೬ ಱಿಂದ ಗುಣಿಸಲು ೧೨೬ನೂ ವಿಕ್ರಯ ೧೧ಱಿಂ ಭಾಗಿಸಲು ೧೧ / ೫ ಮತ್ತೆ ಕ್ರಯ ೨೧ನೂ ೭ಱಿಂ ಗುಣಿಸಲು ೧೪೭ನೂ ವಿಕ್ರಯ ೧೧ಱಿಂ ಭಾಗಿಸಲು ೧೩ / ೪ ಮತ್ತೆ ಕ್ರಯ ೨೧ನೂ ೮ಱಿಂ ಗುಣಿಸಿ ೧೧ ವಿಕ್ರಯದಿಂ ಭಾಗಿಸಲು ೧೫ / ೩ ಮತ್ತಂ ಕ್ರಯ ೨೧ನೂ ೯ಱಿಂ ಗುಣಿಸಿ ವಿಕ್ರಯ ೧೧ಱಿಂ ಭಾಗಿಸಲು ೧೭ / ೨ ಮತ್ತ ೨೧ನೂ ೧೦ಱಿಂ

ಗುಣಿಸಿ ವಿಕ್ರಯ ೧೧ಱಿಂ ಭಾಗಿಸಲು ೧೯/೧ ಈ ಅಯ್ದು ರಾಶಿಯನೂ ಗುಣಿಸಿ ಬಂದ ಶೇಷ ಮ...ನು ಮತ್ತೊಂದು ರಾವಿನಲ್ಲಿ ವಿಕ್ರಯವಮಾಡಲು ಮಣಿ ೧ ಕಂ ಗ ೨ ಲೆಕ್ಕದಲ್ಲಿ ಉೞಿದ ಮಣಿಯ ಮಾಱಿ ಕೊಡಲು ಸಮಹೊನ್ನಕ್ಕುಂ.

ಸೂತ್ರಂ || ೬೮ ||

ಆಱು ಯಿಾರಾಱು ಹದಿನಾಱು ಹನ್ನೊಂದು |
ನೂಱು ಮುನ್ನೂಱು ಸಾವಿರ ಧನವ ತಂದು ||
ಮಾಱಿ ಸಮಕ್ರಯ ಸಮವಿಕ್ರಯಗಳೊಂದು |
ತೋಱಿದರು ಏತಗೆ ಲಾಭವನು ಸರಿತಂದು ||

| | | | | | | | |
|---|---|---|---|---|---|---|---|
| ೧/ಗ ೬ | ೧/ಗ ೧೨ | ೧/ಗ ೧೬ | ೧/ಗ ೧೧ | ೧/ಗ ೧೦೦ | ೧/ಗ ೩೦೦ | ೧/ಗ ೧೦೦೦ | ಗ...೧೦೦೦ ದೊಳಗೆ |

೧ ಕೂಡಲು ೨೦೦೧ ವಿಕ್ರಯವಹುದು. ಮೊದಲ ರಾಶಿ ೬ನೂ ಕ್ರಯ ೨೦೦೧ನೂ ಗುಣಿಸಲು ೧೨೦೦೬ನೂ ಹಾರ ವಿಕ್ರಯ ೧೦೦೧ಱಿಂದೆ ಭಾಗಿಸಲು ೧೧....ಶೇಷ ೯೯೫ ಮತ್ತಂ -೧೨ ಕ್ರಯ ೨೦೦೧ ಗುಣಿಸಲು ೨೪೦೧೨ನೂ ವಿಕ್ರಯ ೧೦೦೧ ಱಿಂ ಭಾಗಿಸಲು ಬಂದುದು ೨೩ ಶೇಷ ೯೮೯. ಮತ್ತಂ ಕ್ರಯ ೨೦೦೧ನೂ ೧೬ನೂ ಗುಣಿಸಲು ೩೨೦೧೬ನೂ ವಿಕ್ರಯ ೧೦೦೧ಱಿಂ ಭಾಗಿಸಲು ಬಂದುದು ೩೧ ಶೇಷ ೯೮೫ ಮತ್ತಂ ಕ್ರಯ ೨೦೦೧ನೂ ೧೧ಱಿಂ ಗುಣಿಸಲು ೨೨೦೧೧ನೂ ವಿಕ್ರಯ ೧೦೦೧ಱಿಂಭಾಗಿಸಲು ಬಂದುದು ೨೧ ಶೇಷ೯೯೦, ಮತ್ತಂಕ್ರಯ ೧೦೦ನೂ ೨೦೦೧ಱಿಂ ಗುಣಿಯಿಸಲ್ ೨೦೦೧೦೦ನೂ ವಿಕ್ರಯ ೧೦೦೧ಱಿಂ ಭಾಗಿಸಲು ಬಂದುದು ೧೯೯ ಶೇಷ ೯೦೧ ಮತ್ತಂ ಕ್ರಯ ೨೦೦೧ನೂ ೩೦೦ಱಿಂ ಗುಣಿಸಲು ೬೦೦೩೦೦ನೂ ಮಾಱುವ ಕ್ರಯ ೧೦೦೧ಱಿಂ ಭಾಗಿಸಲು ಬಂದುದು ೫೯೯ ಶೇಷ ೭೦೧. ಮತ್ತಂ ಕ್ರಯ ೨೦೦೧ನೂ ೧೦೦೦ನೂ ಗುಣಿಸಲು ೨೦೦೧೦೦೦ನೂ ವಿಕ್ರಯ ೧೦೦೧ಱಿಂ ಭಾಗಿಸಲು ಬಂದುದು ೧೯೯೯ ಶೇಷ ೧ ಈ ಏೞು ರಾಶಿಯನೂ ಗುಣಿಸಿ ಬಂದ ಶೇಷದ ಮಣಿಯನೂ ಮತ್ತೊಂದು ದೇಶಕೆ ಹೋಗಿ ಮಾಱಲು ವಿಕ್ರಯ ಗ ೧ ಗೆ ೧....ನೆ ಮಾಱಲು ಆ ಉೞಿದ ಶೇಷದ ಮಣಿಯನೂ ಈ ವಿಕ್ರಯದಲ್ಲಿ ಮಾಱಿ ತಮ್ಮ ತಮ್ಮ ಮಾಱಿದ ಹೊನ್ನನು ಕೂಡಿ ಮೊದಲುಗಳ ಕಳೆಯಲು ಲಾಭಗಳು ಪ್ರತ್ಯೇಕ ಏೞು ಮಂದಿಗೂ ೧೦೦೦ ಸಾವಿರ ಸಾವಿರ ಲಾಭಮಕ್ಕುಂ.

ಕೋಡಿಗೆಯ ಸೂತ್ರ—

ಸೂತ್ರಂ || ೬೯ ||

ಕೋಡಿಗೆಯನುಡಿದ ಪೊನ್ನಂ |
ಮಾಡದ ಜವಳಿಗದುವೆ ಪಣವೆನಿಸಿಕ್ಕುಂ ||
ಕೋಡಿಗೆಯ ಪಣಮೆಪಾಗಂ |
ಕೋಡಿಗೆಗಳ ಪಾಗಮಿರ್ದುದೌ ಕಾಣಿಗಳುಂ ||

ಸೂತ್ರಂ || ೭೦ ||

ಕೋಡಿಗೆಯ ಜವಳಿ ಸೀರೆಗೆ |
ನೋಡೈ ಮತ್ತಯ್ದು ಪೊನ್ನು ಮಿಪ್ಪಣವಡ್ಡಂ ||
ಮಾಡಿದ ಬೆಲೆ ತಾನಕ್ಕುಂ |
ನೀಡಿಲ್ಲದೆ ಪೇಟಿ ಜವಳಿಯೊಂದಱ ಬೆಲೆಯಂ ||

ಕೋಡಿಗೆ ೧ ಕಂ ಬೆಲೆ ಗ ೫೫ ಹ ೨|| ಜವಳಿ ೧ ಲಬ್ಧ ಗ ೨ ಗ ೨ ಗ ೨ ಹಾರ ೨೦ ||

ಟೀಕು || ಕೋಡಿಗೆ ನುಡಿದ ಗ ೫೫ ಸಲು ೨ ಹಣಮಕ್ಕುಂ ಮಿಕ್ಕ ಯಿಪ್ಪಡಿಗೆಗೆ ವೀಸ ೨|| ಅಲ್ಲಾವೊಂದು ಕೋಡಿಗೆ ಯಿಪ್ಪತ್ತು ಜವಳಿಯೆಂದು ತಂದುಕೊಂಬುದು.

ಕೋಡಿಗೆಯ ಕವಟಗೆಯ ಸೂತ್ರ—

ಸೂತ್ರಂ || ೭೧ ||

ಕೋಡಿಗೆಯ ನುಡಿದ ಪೊಂಗಳು |
ನೀಡಿಲ್ಲದೆ ಹಾಗವೊಂದು ಸೀರೆಗೆಯಕ್ಕುಂ ||
.......ವರೆ ವೀಸಂ |
ಕೂಡಿದಪಾಗಂಗಳಿರ್ದಡರೆ ಕಾಣಿಗಳುಂ ||
ಉಂಬಳಡದೊಂದು ಕೋಡಿ |
........ನಾಲ್ಕು ಪಣಮುಂ ಮೂಱು ಪಾಗಂ ||
ತೊಂಬತ್ತಚ್ಚಿಗೆ ಬೆಲೆಯುಂ |
ಇಂಬಿಲಿ ನೀಂ ಪೇಟಿ ಸೀರೆವೊಂದಂಬಂ....||

ಕೋ ೧ಕ್ಕೆ ಬೆಲೆ ಗ ೯೦ ಅಳ ||| ಲು ಸೀರೆ ೧ ಒಂದಕ್ಕೆ ಬಹುದಯ್ಯಾಯೆಂದರೆ ಲಬ್ಧ ಗ ೨ ಹ ೨||೧|೧...ದ್ವಿತೀಯ ಹಾರ ೪||

ಟೀಕು || ಕೋಡಿಗೆಯ ಗ ೯೦ ಸೀರೆ ೧ಕ್ಕೆ ೯೦ ಹಾಗ ೨ ಹ ೨|| ಕೋಡಿಗೆ... ಅರವೀಸದ ಮರ್ಯಾದೆ ಹ ೪ ಗೆ ವೀಸ ೨ ಕೋಡಿಗೆಯ ಹಣ ೧ಕ್ಕೆ ಅರೆಕಾಣಿಯ....ಮೂಱುಹಾಗಕ್ಕೆ ಕಾಣಿ ೧|| ಅಲ್ಲಾ ತ್ರೈರಾಶಿಯ ಮರ್ಯಾದೆಯಲಿ ತಂದುಕೊಂಬುದು.

ಮೌಲ್ಯವಸ್ತುಗಳ ಸೂತ್ರ—

ಸೂತ್ರಂ || ೭೨ ||

ಎನಿತೊಳವು ಮೌಲ್ಯವಸ್ತುಗ |
ಳನಿತಱ ಬೀಸಗೆಯ ಪೊನ್ನಂ...||
ಗೆನಿತು ಪಣಂ ವೀಸಂ |
ಯೆನಿತಾದೊಡೆ ಪಾಗಕಾಣಿಯೆಂದೇ ತಿಳಿ ನೀಂ ||

ಸೂತ್ರಂ || ೭೩ ||

ಬೀಸಿಗೆ..............ಪೊ |
ತಾಶಯಕ್ಕಯ್ವತ್ತು ಪೊನ್ನು ಮಿಪ್ಪಣವಡ್ಡಂ ||
ಲೇಸೆನಿಸುವ ಬೆಲೆ ತಾನಾಗಲ್ |
ವಾ.......ಸಲಿಕ್ಕೇನಕ್ಕುಂ ||

ಬೀಸಿಗೆ ೧ ಗ ೫೦| ೨ಲು ಹಲ ೧ ಲಬ್ಧ ಗ ೨||೦ ವಿ ೨||

ಟೀಕು || ಬೇಸಿಗೆಯ ಹೊನ್ನಂ ಅರ್ಥಿಸಲು ಹಲ ೧ಕ್ಕೆ ಹಣವಹುದು. ಬೀಸಿಗೆ ಹಣವೆ ೦ಾಣಿಯಹುದು...ತ್ರೈರಾಶಿಯ ಮರ್ಯಾದೆಯಲ್ಲಿ ಗುಣಿಸೂದು.

ಸೂತ್ರಂ || ೭೪ ||

ಗುಣಿಯಿಸು ಕಾಲದ ಮೌಲ್ಯವ |
-ಳೆ ಬೀಯಮುನಾಯದೊಳಗಮೆತ್ತಿಪಲಮುಂ ತಾಂ ||
ಗಳಿಯಿಸಿದ ದಿನದಿಚ್ಛೆ |
ಗಳಿಂತದನನುಪೊಂತರದಿ ತರಲ್ಕೆ ಪಲಮುದಯಿಸುಗುಂ ||

ಸೂತ್ರಂ || ೭೫ ||

ಎರಡು ದೆವಸಕ್ಕೆ ಮೂಱುಂ |
ನಿರುತಂ ತಾಂ ಪಡೆವ ಮೂಱು ದಿನಕಂ ನಾಲ್ಕುಂ ||
ಭರದಿಂ ಬೀಯಂಮಾಡಲ್ |
ಕರಸಸಿ ಮಾಸಕ್ಕೆಯೆನಿತು ಪೊನ್ನಂ ಪಡೆಗುಂ ||

| | | |
|---|---|---|
| ದಿನ ೨ | ದಿನ ೩ | ತಿಂಗಳು ೧೨ ಲಬ್ಧ ಗ ೬೦ || |
| ಆ.ಗ೩ | ಬಿ.ಗ೪ | |

ಟೀಕು || ಅಂಶ ಭೇದದ ಮಾಹೃತಿಗೆ ವಿಪತ್ತಿಯಂಮಾಡಿ ಸಮಭೇದಂಮಾಡಲು ಎಂದರೆ ೨ ದಿನವನೂ ಬೀಯ ೪ನೂ ಗುಣಿಯಿಸಲು ೮ ದಿನ ೩ ಆಯ ೩ನೂ ಗುಣಿಯಿಸಲು ೯ ಬೇಱಿ ನಾಲ್ಕಱಿಂ ಗ ೨ ಕೂಡಿ ಮತ್ತೆ ೩ ಕೂಡಿದರೆ ೯/೬ ೫/೬ ಆಯದೊಳಗೆ ಬೀಯವ ಕಳೆಯಲು ೧/೬ ತಿಂಗಳು ದಿನವನುಮಾಡಲು ೩೬೦ ಇದನು ೧ಱಿಂ ಗುಣಿಯಿಸಿ ೬ಱಿಂ ಭಾಗಿಸಲು ಲಬ್ಧಸರಿ.

ಎನಿತು ದಿವಸಕ್ಕೆ ಬೀಯಂ—

ಸೂತ್ರಂ || ೭೬ ||

ಎನಿತುಭಯ ದಿನಂಗಳು ಲಾಯಮಪ್ಪ ಕಾಂಚನಮೆನೆ ಪೆರ್ಚಿಸೂ |
ದನಿತಱೊಳಾಯ ಬೀಯವನುಚ್ಚ...... ||
ಶೇಷದಿಂಧನವೆನಿತಿಪ್ಪುದಂ ತೆಗೆಯೆ ಬಂದುದು ವಾಬ್ರಯವಾದತ ದ್ವಿ |
ತನ ತಾಯೆಸಳ್ಕಳೆಗುಮಾಡಿ ದಿವಸಂಗಳ ಪಥಪ್ರಮಾಣಮುಂ ||

ಸೂತ್ರಂ || ೭೭ ||

ಸಂತತಮುಪ್ಪಾಯವನು ಕರತದ್ವಯ ಮಾಯಮಾಗೆ ಬೀ |
ಯಂತ್ರಿದಿನಕ್ಕೆ ಪಂಚಕಶತಕಂಗಳುಮಾಗಿರೆ ನೋನಿಂ ಪೋ | ||
ದಂತ್ರಿ ಸಹಸ್ರಮಾಗಿರೆ ಮಾಸಸಂದುದಂ |
ಸಂತತನೋಡಿ ಪೇಲುವುದದಂಶಿಖಾಮಣಿ ವಿಷ್ಣು ಭೂಷಣಂ ||

| | | |
|---|---|---|
| ದಿನ ೧<br>ಆ.ಗ ೨೦೦ | ದಿನ ೩<br>ಬಿ. ಗ ೫೦೦ | ಉಲಿಂದಡೆ ಗ ೩೦೦೦ ಲಬ್ಧ ತಿಂಗಳು ೩|| |

ಟೀಕು || ಆಯದ ದಿನ ೧ನೂ ಬೀಯ ೫೦೦ನೂ, ಗುಣಿಸಲು ೫೦೦ ಮತ್ತು ಬೀಯ ದಿನ ೩ನೂ ಆಯ ಗ ೨೦೦ನೂ ಗುಣಿಸಲು ೬೦೦ ರೊಳಗೆ ೫೦೦ ಕಳೆಯಲು ೧೦೦ ಇದ ಬೇಱಿರಿಸಿ ೩೦೦೦ನೂ ಬೀಯದ ದಿನ ೩ರಿಂ ಗುಣಿಯಿಸಲು ೯೦೦೦ನೂ ೧೦೦ಱಿಂ ಭಾಗಿಸಲು ಬಂದುದು ದಿನ ತಿಂಗಳಿಗೆ ೩೦ ದಿನವೆಂದು ಭಾಗಿಸಲು ಲಬ್ಧ ನರಿ.

ಸೂತ್ರಂ || ೭೮ ||

ಕ್ಷಿತಿಪತಿ ವಿಷ್ಣು ಬೀಡಿನೊಳಗೊರ್ವ ವಣಿಕ್ಕುತತಂ ದಿನಂದಿನಂ |
ಪ್ರತಿಪದಿನಾಱು ಪೊನ್ನಪಡವ ಪತ್ತುದಿನಕ್ಕಱುವತ್ತು ಪೊನ್ನನಾ ||
ರ್ಜಿತಧನದಲ್ಲಿ ಸಂತತಮುದಾಕ್ಷಣ ಬೀಯಮುದಾಗೆ ನೋಡು ಸಂ |
ಚಿತಮಿಡು ಲಕ್ಷಮಂತೆನಿತು ತಿಂಗಳೊಳಾದುದು ಪೇಲಮಾಬಿಯಂ || ?

| | | |
|---|---|---|
| ದಿನ ೧<br>ಆಗ ೧೬ | ದಿನ ೧<br>ಬಿಗ ೬೦ | ಉಲಿಂದ ಪೊಡೆ ಗ ೧೦೦೦೦೦ ಲಬ್ಧ ವರುಷ ೨೭ ತಿಂಗಳು ೯ ದಿನ ೧೦<br>ಹಾರ ೧೦೦ ದ್ವಿತೀಯ ಹಾರ ೩೬ || |

ಟೀಕು || ಹಿಂದಣ ಸೂತ್ರದ ; ಮರ್ಯಾದೆ.

ಸೂತ್ರಂ || ೭೯ ||

ತಿಂಗಳಿಗಿಪ್ಪತ್ತಯ್ದುಂ |
ಪೊಂಗಳ ತಾಂ ಪಡೆವ ಮೂಱುತಿಂಗಳ ಬೀಯಂ ||
ಪೊಂಗಳುಮಯ್ದಾಱಾಗಲ್ |
ಪೊಂಗಳ್ ಮೂನೂಱನೆನಿತು ದಿನಕಂ ಪಡೆವರ್ ||

| | | |
|---|---|---|
| ತಿಂಗ ೧<br>ಆಯ ಗ ೨೫ | ತಿಂಗಳು ೩<br>ಬಿಯ ಗ ೫೦ | ಉಲಿಂದು ಗ ೩೦೦ ಲಬ್ಧ ವರುಷ ೧ ಹಾರ ೨೫ || |

ಟೀಕು || ಸೂತ್ರ ಹಿಂದಿನ ಮರ್ಯಾದೆ.

೨ಡಿ ಉತ್ತರಗದವ ಸೂತ್ರ—

ಸೂತ್ರಂ || ೮೦ ||

ಗದದೊಳಗೊಂದಂ ಕಳೆ ಗುಣಿಯಿಸು |
ಗದದಿಂ ದ್ವಿಗುಣಿಸಾದಿಯೊಳೆ ||
ರದೊತ್ತು ಗದದತಾದಿಂದನೊಕ್ಕ |
ರಸಂಗಳಿತಂ ಧನಮಕ್ಕುಗಣಕರ್ ಮೆಚ್ಚಲ್ ||

ಸೂತ್ರಂ || ೮೧ ||

ಶತಮಾದಿ ಯುಗ್ಮಹೀನಂ |
ಸತತಂತಾಂ ಇಷ್ಟಗದವ ಪದಿನಾಲ್ಕಾಗಲ್ ||
ಅತಿಶಯದಿ ಪೇಟಿ ಧನಮಂ |
ಮತಿವಂತಾ ತಿಳಿಯಪೇಟಿ ಗಣಿತವಿಳಾಸಾ ||

ಆದಿ ೧೦೦ ಹೀನೋತ್ತರ ೨ ಇಷ್ಟಗದ ೧೪ ಲಬ್ಧ ಸಂಕಲಿತ ದೆನ ೧೨೧೮ ||

ಟೀಕು || ಗದದೊಳಗೆ ೧ ಕಳೆಯಲು ೧೩ನೂ ಹೀನೋತ್ತರ ೨ರಿಂ ಗುಣಿಸಲು ೨೬ನೂ ಆದಿಯ ೧೦೦ನೂ ದ್ವಿಗುಣಿಸಲು ೨೦೦ ರೊಳಗೆ ಕಳೆಯಲು ೧೭೪ನೂ ಆಗದವ ೧೪ರಿಂ ಗುಣಿಯಿಸಿ ಹೀನೋತ್ತರ ೨ರಿಂ ಭಾಗಿಸಲು ಲಬ್ಧ ಸರಿ.

ಆನೆಯ ಕೂಲಿಯ ಸೂತ್ರ—

ಸೂತ್ರಂ || ೮೨ ||

ದಂತಿಯೊಳೊಂದನೊಂದಿಸಿ ದಿನಂಗಳನೊತ್ತುವುದಾದಿನಂಗಳಂ |
ಸಂತತ ವರ್ಗಿಸುತ್ತೆ ದಿವಸಂಗಳನೊಂದಿಸು ಅರ್ಧಿಸುತ್ತಮಂ ||
ತಂತದ ಸೋದಿಸಲ್ಕುಟಿದ ಶೇಷಮುಮಂ ಗುಣಿಸಂತೆ ಕೂಲಿಯಂ |
ದಂತಿಯೊಳಿಂಬಿನಿಂ ತೆಗೆಯೆ ಭಾಸ್ಕರನೋಜೆಯೆ ಬರ್ಕುಮಾಪಳಂ ||

ಸೂತ್ರಂ || ೮೩ ||

ಕರಿ ನೂಱೆಂಟುಮನೆಯ್ದೆ ಕಾವ ದಿವಸಕ್ಕೊಂದೊಂದು ಗದ್ಯಾಣಮಂ |
ಸ್ಥಿರವಿನಾವೆಂ ನಿನಗೆಂದದಗ್ಗದ ದಿವಸಕ್ಕೊಂದಾನೆಯಂ ಮಾಱಲಾ ||
ಕರಿಯಾರೋಹಕನಿಪ್ಪತ್ತಯ್ದು ದೆವಸಂ ಕಾಯ್ದೊಲ್ವೆನೆಂದಾಗಳೀ ಬ |
ಬ್ಬರಸಂವಾಜದ ಲೆಕ್ಕಮಂ ತಿಳಿಪಿದಂ ನಿರ್ವ್ಯಾಜದಿಂ ಭಾಸ್ಕರಂ ||

ಕರಿ ೧೦೮ಕ್ಕೆ ದಿನ ೧ ಗ ೧ ದಿನ ೧ಕ್ಕಂ ಮಾರುವನೆ ೧ ಈ ಲೆಕ್ಕದಲ್ಲಿ ಕಾದ ದಿನ ೨೫ಕ್ಕೆ ಕೂಲಿ ಲಬ್ಧ ಗ ೨೨ ಗ ೨ ವಿ ೪||

ಟೀಕು || ಕರಿ ೧೦೮ಗೆ ಒಂದು ಕೂಡಲು ೧೦೯ನೂ ಆ ಕಡೆಯ ದಿನ ೨೫ರಿಂ ಗುಣಿಸಲು ೨೭೨೫ ಇದನೂ ಪ್ರತಿಯಿಟ್ಟು ಆ ಕಡೆಯ ದಿನ ೨೫ನೂ ವರ್ಗಗೊಳಲು ೬೨೫ಲ್ಲಿ ಆ ದಿನ ೨೫ನೂ ಕೂಡಲು ೬೫೦ನೂ ಅರ್ಧಿಸಲು ೩೨೫ ಇದನು ಮುಂಪ್ರತಿಯಿಟ್ಟಲ್ಲಿ ಕಳೆಯಲು ೨೪೦ ಇದನೂ ಆಕರಿ ೧೦೮ರಿಂ ಭಾಗಿಸಲು ಲಬ್ಧ ಸರಿ.

ಸೂತ್ರಂ || ೮೪ ||

ಆಳಿನೊಳೊಂದನೊಂದಿಸು ಉಱಿದದಿನದಿಂದಿರಿವಾದಿನಂಗಳಂ |
ಪೇಟದೆ ವರ್ಗಿಸಲ್ಲಿ ದಿವಸಂಗಳನೊಂದಿಸು ಅರ್ಧಿಸುತ್ತವಂ ||
ಮಾಣದೆ ಸೋದಿಸಲ್ಲಿ ನಿಜಜೀವಿತಪೊಂಗಳನೊತ್ತಿ ಮತ್ತೆಯುಂ |
ಆಳಿನೊಳೊತ್ತಿ ಬಂದೊಡದು ಜೀವಿತಪೊಂಗಳೆ ಬರ್ಕ್ಕುಮಾವಗಂ ||

ಸೂತ್ರಂ || ೮೫ ||

ದಿನದೊಳಗೊಂದಂ ಕುಂದಿಸು |
ಅನುನಯದಿಂದರ್ಧಿಸದನು ಗುಣಿಸಾ ದಿನದಿಂ ||
ಮನುಕೆಯ್ಯಿಂದಂ ಭಾಗಿಸೆ |
ಅನು...ಬಕ್ಕರ್ಜ ನಷ್ಟಆಳಿನ ಹೊನ್ನಂ ||

ಸೂತ್ರಂ || ೮೬ ||

ನಿಚ್ಚೊಂಬತು ಜೀವಿತಪೊಂಗಳು |
.. ದಿಂ ತರುಬಿದಾಳು ನಾನೂಱಯ್ವತ್ತುಂ ||
ನಿಚ್ಚೊಚ್ಚನುಱದುಪೋಗಲ್ |
ಬೆಚ್ಚ...ಪೇೞ ಮಾಸವೊಂದಕ್ಕೇನೋ ||

ಆಳು ೪೫೦ ದಿನ ೧ ಗ ೯ ವೋಡುವ ಆಳುಗಿನ ದಿನ ೩೦ ಲಬ್ಧ.

ಟೀಕು || ಹಿಂದಣ ಸೂತ್ರದ ಮರ್ಯಾದೆ.

ಜೀವಧನವಿನ ಸೂತ್ರ—

ಸೂತ್ರಂ || ೮೭ ||

ಅಡರೆ ಗುಣಿಯಿಸ... |
ಕೆಡಲೀಯದೆ ಬಂದ ರಾಶಿ ಜೀವಧನಂಗಳ್ ||
ಬಿಡದೆರುಗೆತ್ತುಗೆ ಬಕ್ಕರ್ಗಂ |
ತಡೆಯದೆ...........ರಾಶಿಕ ವ್ಯವಹಾರಂ ||

ಸೂತ್ರಂ || ೮೮ ||

ಒಂದೊಂದನಡರಿ ಗುಣಿಯಿಸು |
ಸಂದೇಹದ ಧನಮದಕ್ಕುಂ....ಧನಮಂ ||
ಒಂದೊಂದಱಿಂದೆ ಭಾಗಿಸು |
ಬಂದಿರ್ಕುಂ ಮದೆಯ್ದೆಮುಂ ಪ್ರತ್ಯೇಕಂ ||

ಸೂತ್ರಂ || ೮೯ ||

ಊರಿಂಗೆ ಮೂಱು ಬಾಗಿಲ್ |
ಊರಹೊರಕ್ಕೆಯ್ದು ಬಟ್ಟೆ ಬೆಟ್ಟಗಳೇೞಂ ||
ನೀರುಂಬಕೂಪ ಒಂಭತು |
ಆರವೆ ಹನ್ನೊಂದು (ಜೀವಧನ) ಮಂ ಪೇೞಾ ||

ಊರಿಂಗೆ ಬಾಗಿಲು ೩ ಬಟ್ಟೆ ೫ ಬೆಟ್ಟ ೭ ಕೂಪ ೯ ಆರವೆ ೧೧ ಲಬ್ಧ ಸಮಜೀವಧನಂಗಳ್ ೧೧೫೫ ಆರವೆ ೧ ಕಂಜೀವಧನಂಗಳು ೯೪೫....

ಟೀಕು || ಅಯ್ದು ರಾಶಿಯನು (ಅಡರಿ ಗುಣಿ) ಸಲು ಸಮಸ್ತಜೀವಧನಂ ೧೦೩೯೫ ಈ ಪ್ರತಿಯನೂ ತಮ್ಮ ತಮ್ಮ ರಾಶಿಯಿಂ ಗುಣಿಯಿಸಿ......ಲಬ್ಧ ಸರಿ.

ಸೂತ್ರಂ || ೯೦ ||

ಪದಿಮೂಱು ಬಾಗಿಲಾಗಲ್ |
ಪದಿನಯ್ದುಂ ಬಟ್ಟೆ ಬೆಟ್ಟ ಹದಿನೇೞಾಗಲ್ ||
ಒದವಿ (ದ ಕೂಪ) ಹತ್ತೊಂಬತ್ತುಂ |
...ಆರವೆಯಿಪ್ಪತ್ತೊಂದು ಜೀವಧನಮಂ ಪೇೞಾ ||

ಬಾಗಿಲು (೧೩) ಹದಿನಯ್ದು ೧೫ ಬಟ್ಟೆ ೨೫ ಬೆಟ್ಟ...ಕೂಪ ೧೯ ಆರವೆ ೨೧ ಲಬ್ಧ ೧ ಸಮಸ್ತ ಜೀವಧನ ೧೨೨೬೮೫ ಪ್ರತ್ಯೇಕ ಬಾಗಿಸಲು ೧ಕ್ಕೆ....೧೦೧೭೪೫ ಬಟ್ಟೆ ೧ಕ್ಕಂ ೮೮೧೭೯ ಕೆರೆ ೧ಕ್ಕಂ ೭೯೬೧೫ ಆರವೆ ೧ಕ್ಕಂ ೬೨......

ಟೀಕು || ಹಿಂದಣ ಸೂತ್ರದ ಮರ್ಯಾದೆ ತಪ್ಪದು.

ಸೂತ್ರಂ || ೯೧ ||

ನಿರುತಂ ಗೋಸಾವಿರಕ್ಕಂ ದಿನವೊಂ....ಪಣವೆರಡಾಗಲ್ |
ನಿಚ್ಚಂ ಗೋದಾನವಯ್ದುಂಗೊಡಲು ದೆವಸವಿನ್ನೂಱು ||
................................................ |
...ಕೊಡುವೊಡೆ ಕೂಲಿಯೆಂಬುದಂ ಪೇೞ್ಗಣಕಾ ||

ಗೋವು ೧೦೦೦೦ ದಿನ ೧ಕ್ಕೆ ಕೂಲಿ ಹ ೨ ದಿನಂಪ್ರತಿ ಮಾಱುವಜೀವಧನ ೫ ಕಾದದಿನಂಗಳ್ ೨೦೦ ಲಬ್ಧ ಗ ೨೦ ಹ ೧ ವಿ ೨ ||

ಟೀಕು|| ೫ನೂ ೨೦೦ ಱಿಂ ಗುಣಿಯಿಸಲು ೧೦೦೦ ಜೀವಿತದ...ರಾಶಿ ೨೦೦೦ ಮತ್ತೆ ಹ೨ನೂ ಮಾಱಿದ ಜೀವಧನ ೫ನೂ ಗುಣಿಯಿಸಲು ೧೦ನೂ ಮತ್ತೆ ೧೦ನೂ ಕೂಡೆ ೨೦ ಅದನು ರಾಶಿಯಿಂ ಕೂಡಿ ಮತ್ತೆ ರಾಸಿಯು ಮತ್ತದರ ಗುಣಿಸಿ ರಾಶಿಯಮಾಡಿ ಮೊದಲ ೧೦ಱಿಂ ಭಾಗಿಸಲು ಲಬ್ಧ ಸರಿ.

ಪೊಟ್ಟಣದ ಸೂತ್ರ—

ಸೂತ್ರಂ || ೯೨ ||

ಪೊಟ್ಟಣಮಂ ತದ್ವಿಗುಣಿತದಿ ಕಟ್ಟೊದೊಂದುಱಿಯೆ ಉಱಿದಾಪೊನ್ನಂ |
ಕಟ್ಟೊದೊಂದುಪೊಟ್ಟಣಮಂಪೊಟ್ಟಣದೊಡೆಯರ್ಗೆ ಕುಡುಗೆ ಬೇಡಿದ ಪೊನ್ನಂದಶ||
ಪೊಟ್ಟಣಮಂ ಕಟ್ಟೊದುದಶಶತ ನಿಷ್ಕದೊಳಗೊಂದು ಮೊದಲಾಗಿರ್ದಾ–
....ದಶಶತಸಂಖ್ಯಾತಂ ಬರೆಗಂ ವಿಷಡೆಶೊ ಕುಡುವೊಡೇನನಾಬ್ಬೇಡಿದುದಂ ||

ಪೊಟ್ಟಣ ೧ಕ್ಕಂ ಕಟ್ಟುವವರ ತದ್ವಿಗುಣ ೧–೨–೪–೮–೧೬–೩೨–೬೪–೧೨೮–೨೫೬–೫೧೨ ಅಂತು ಗ ೧೦೦೦೦.

ಟೀಕು || ಒಂದು ಮೊದಲ ದ್ವಿಗುಣದಲೊಂಭತ್ತು ಸ್ಥಾನದ ಪರ್ಯಂತರ ಇಕ್ಕಿ ಶವಣಿಸಿ ಕೂಡಲು ೫೧೧ ಕಳೆಯಲು ೪೮೯ ಇದು ಕಡೆಯ ಸ್ಥಾನದ್ದು ಆಹುದು.

ಮುದ್ರಿಕೆಯ ಸೂತ್ರ—

**ಸೂತ್ರಂ || ೯೩ ||**

ಪೊಂಗಳು ಮೂವತ್ತಱೊಳ |
ಯ್ದುಂಗುರವಂ ಮಾಡಿ ಕೆಯ್ಯೊಳಿಟ್ಟಾಹಿಯಲಿ ||
ರ್ದಂಗನೆಗೆ ನಿಚ್ಚಲೊಂದಂ |
ಪೊಂಗೊಡುವುದು ಕಡೆ....ಮುದ್ರಿಕೆಯಂ ||

ಪೊಂಗಳು ಗ ೩೦ಕ್ಕಂ ಉಂಗುರ ೫ಕ್ಕಂ ಮಾಡಿದ ಪ್ರಮಾಣ ೧–೨–೪-೮–೧೫ ಗ ೩೦ಕ್ಕಂ ದಿನ ೧ಕ್ಕಂ ಕೊಡುವುದು ಗ ೧ ಲೆಕ್ಕಕ್ಕೆ ಪ್ರತಿಪಲ್ಲಟವಾಗಿ ಉಂಗುರವನು ಕೊಟ್ಟು ಈಸಿಕೊಳು.

ಭೈತ್ರದ ಸೂತ್ರ—

**ಸೂತ್ರಂ || ೯೪ ||**

ನುಡಿದಿರ್ದ ಭೈತ್ರಸಂಖ್ಯೆಯ |
ಗಡಣೆಯೊಳೊಂದೊಂದ (ಕೂಡಿ) ತದ್ವಿಗುಣಂ ಗೆ ||
ಯ್ದೊಡನೊಂ (ದಂ) ಕಳೆಯಲು |
ಕಡೆವರ ವಿಕ್ರಮದಿನಕ್ಕುಮುದು ಸಮಭಾರಂ ||

**ಸೂತ್ರಂ || ೯೫ ||**

ಶರಸಿಧಿಮಧ್ಯದೊಳ್ಪರಿವ ಭೈತ್ರದೊಳೊಂದಱೊಳೊಂದು ಭಾರದಿಂ|
ದಿರೆ ಹರಿಗೆಟ್ಟು ಷೋಡಶದಶನಿಜಮಾನ ಸಹಸ್ರಭಂಡಮಂ ||
ಬೆರಸಿಕೊಂಬರಿ ಕ್ರಮದಿ ಮಂತೆನಿತುಂ ಸಮಭಾರವಾಗಲಂ |
ದೊರೆಯಲಿ ಬೇಱೆ ಬೇಱೆ ನಿಜಭೈತ್ರದ ಮೂಲಧನ ಪ್ರಮಾಣಮಂ||

ಭೈತ್ರ ೫ ಕಂ ಮೊದಲು ಇದ್ದ ಪ್ರಮಾಣ ೬ – ೧೧ – ೨೧ – ೪೧ – ೮೧ ಸಮಭಾರ **೩೨, ೩೨, ೩೨, ೩೨, ೩೨ ||**

ಟೀಕು || ಅಯ್ದು ರಾಶಿಯನೂ ಕೂಡಲು ೧೬೦ ಇದನು ಅಯ್ದು ರಾಸಿಯ ೫ಱಂ ಭಾಗಿಸಲು ಪ್ರತ್ಯೇಕ ಸಮಾನಭಾರವಹುದು

**ಸೂತ್ರಂ || ೯೬ ||**

ನರಪತಿ ಸಪ್ತಭೂಮಿಕೆಯ ಮಾಡಿಸಿಯೋಲಗದಿಂದಿರಲ್ಕೆ ತ |
ಗ್ಗಿರಿಪಲರೇಱಿದಂದು ನೆಲೆಮತ್ತಿನ ಭೂಮಿಕೆಯಲ್ಲಿ ಮುನ್ನವಿ ||
ರ್ದ್ದರಸಿಯರೇಱಿಸಲ್ಕೆನಿತು ಭೂಮಿಕೆಗಳ್ ಸಮಭಾರಮಾದುದೆಂ |
ದೊರೆಯರಿ ಮುನ್ನ ಭೂಮಿಕೆಗಳೊಳ್ ನೆಲಸಿರ್ದ ಮನುಷ್ಯ ಸಂಖ್ಯೆಯಂ ||

**ಭೂಮಿಕೆ ೭ ಕರ ಮೊದಲ ಪ್ರಮಾಣಿನಲ್ಲಿ ಯೇಱಿದ ಸ್ತ್ರೀಯರು ೮, ೧೫, ೨೯, ೫೭, ೧೧೩, ೨೨೫, ೪೪೯ || ಲಬ್ಧ ಸ್ತ್ರೀರು ಸಮಾನವಾದಲ್ಲಿ ೧೨೮, ೧೨೮, ೧೨೮, ೧೨೮, ೧೨೮, ೧೨೮, ೧೨೮.**

**ಟೀಕು || ಹಿಂದಣ ಸೂತ್ರದ ಮರ್ಯಾದೆಯ ಗಣಿತ.**

ಧ್ರುವಗತಿ, ಆಕ್ಷೇಪಗತಿ ಸಂಯೋಗಾನಯನ ಸೂತ್ರ—

ಸೂತ್ರಂ || ೯೭ ||

ಸತತಂ ಗತಿಯಿಂ ಧನಮುಂ |
ಹತಿಯಿಸು ಆಕ್ಷೇಪಗತಿಯುಮಂ ಧ್ರುವಗತಿ ಶೇಷೋ ||
ನ್ನತಿಗತಿಯಂ ಹೃತಿಗೆಯ್ದ್ ದಿವ |
ಸ್ಥಿತಿಯಂ ತೋಱುಸುಗೆ ಬಕ್ಕುಗಮುಭಯ ದಿನಂಗಳ್ ||

ಸೂತ್ರಂ || ೯೮ ||

ಪತಿ ಸತಿಯು ಮುನಿದುಪೋಗಲ್ |
ಸತತಂ ಗಾವುದವ ಸಪ್ತ ದಿವಸಾಂತರದಿಂ ||
ಪತಿಗಾವುದರೆಯನನುದಿನ |
ಗತಿವಡೆಯಲ್ ಸತಿಯನೆಂದು ಪತಿಯೆಯ್ದುಗುವೋ ||

ದಿನ ೧ಕ್ಕಂ ಸತಿ ನಡೆದ ಗಾವುದ ೧ ಮುಂಚಿದ ದಿನ ೭ ದಿನ ೧ ಕಂ ಪತಿ ನಡೆದ ಗಾವುದ ೧||ಯನು ಎಷ್ಟುದಿನಕ್ಕೆ ಕೂಡುವನು ಎಂದರೆ ಲಬ್ಧ ಸಂಖ್ಯೆಯೋಗದಿನ ೧೪ ಸಮಗಾವುದ ೨೧-೨೧

ಟೀಕು|| ದಿನ ೭ನೂ ಪತಿಯಗಲೆ ೧ಱಿಂಗುಣಿಸಲು ೭ ಈಏಟನೂ ಪ್ರತಿಯಿಟ್ಟು ಗಾವುದಗಳ ಅರೆಮಾಡಲು ೧/೨ ಇದನೂ ಮುನ್ನಿದ್ದ ಏಟನೂ ಸಮಭೇದಂಮಾಡಲು ೩ ೧೪/೨ ಈ ೧೪ನೂ ೩ಱಿಂ ಭಾಗಿಸಲು ಸಮಾನ ಯೋಜನಮಕ್ಕುಂ ಆಸಮಾನ ಯೋಜನದ ೨೧ಗೆ ೭ ಕಳೆಯಲು ಸಂಯೋಗ ದಿನವಕ್ಕುಂ.

ಸೂತ್ರಂ || ೯೯ ||

ತರುಣಿಯೆ ದೆವಸಕ್ಕಯ್ದಂ |
ಪರಿಗುಂ ಪನ್ನೆರಡು ದಿವಸಮಂ ಪೆಱಗಿರ್ದ್ದ ||
ಕರಿತಿಥಿ ದಿವಸಕ್ಕೆಂಟಂ |
ಪರಿಗುಮೆನಲ್ಕೆನಿತು ದಿನದೊಳಾಂ ಕರಿನೆರಗುಂ ||

ದಿ ೧ಕೆ ಧ್ರುವಗತಿ ಗಾವುದ೫ ಮುಂಚಿತದಿನ ೧೨ ದಿನಕ್ಕೆ ಕರಿಪತಿ ಆಕ್ಷೇಪ ಗಾವುದ ೮ ಲಬ್ಧ ಸಂಯೋಗ ದಿನ ೨೦ ಸಮಗಾವುದ ೧೬೦, ೧೬೦ ||

ಟೀಕು || ದಿನ ೧೨ನೂ ಧ್ರುವಗತಿ ೫ಱಿಂ ಗುಣಿಯಿಸಲು ೬೦ ಇದನೂ ಪ್ರತಿಯಿಟ್ಟು ಧ್ರುವಗತಿ ೫ಲಿ ಆಕ್ಷೇಪಗತಿ ೮ ಕಳೆಯಲು ಶೇಷ ೩ಱಿಂ ಮುನ್ನಿನ ೬೦ನೂಭಾಗಿಸಲು ಸಂಯೋಗ ದಿನವಕ್ಕುಂ ಈ ದಿನವ ಆಕ್ಷೇಪಗತಿ ೮ಱಿಂ ಗುಣಿಸಲು ಸಮಾನಯೋಜನಮಕ್ಕುಂ.

ದೇವಗತಿಸಂಖ್ಯೆಯೋಗದ ಸೂತ್ರ—

ಸೂತ್ರಂ || ೧೦೦ ||

ಆದಿಯನಾದಿಯ ಗತಿಯೊಳ್ |
ಶೋಧಿಸಿ ಭಯಬಾಜವಲ್ಲಿ ಉತ್ತರದಿಂದಂ ||
ಶೋಧಿಸಿ ಗುಣಿಯಿಸೆರಡಱಿೊಳಂ |
ಭೇದಿಸಿ ಕೂಡೊಂದನಲ್ಲಿ ಚಳಗತಿಯಕ್ಕುಂ ||

ಸೂತ್ರಂ || ೧೦೧ ||

ಪರಿಕಾಱನೊಂದುದಿವಸಂ |
ಪರಿಗುಂ ಪನ್ನೆರಡು ಗಾವುದಮನೊರ್ವಂ ||
ಹರಿವನೊಂದಾದಿ ಯೆರಡು |
ತ್ತರದಿಂ ತಾನೆನಿತುದಿವಸಕ್ಕೆ ಕೂಡುಗು ಪೇಱಾ ||

ದಿ ೧ ಧ್ರುವಗತಿ ಗಾವುದ ೧೨ ಚಳಗತಿ ಆದಿ ೧ ಉತ್ತರ ೨ ಲಬ್ಧ ಸಂಯೋಗ ದಿನ ೧೨ ಸಮಾನಯೋಜನ ೧೪೪—೧೪೪ ||

ಟೀಕು || ಧ್ರುವಗತಿಯೊಳಗೆ ಆದಿಯ ಕಳೆದು ಉತ್ತರದಿಂ ಭಾಗಿಸಲು ಭಾಗೆಯಿಲ್ಲದಿದ್ದರೆ ೧೧|ಗಿ ಕೂಡು ಅಂಶವನು ದ್ವಿಗುಣಿಸಿ ಛೇದದಿಂ ಭಾಗಿಸಲು ೧೧. ಇಲ್ಲಿ ೧ ಕೂಡಲು ಸಂಯೋಗ ದಿನಮಕ್ಕುಂ. ಈ ದಿನದಿಂ ಧ್ರುವಗತಿಯಿಂ ಗುಣಿಸೆ ಸಂಯೋಗದಿನಮಕ್ಕುಂ.

ಸೂತ್ರಂ || ೧೦೨ ||

ಚಂ|| ವನಚರ ಭೀತಿಯಿಂ ಬೆದಱಿ ಷೋಡಶ ಯೋಜನಮಂ ದಿನಕ್ಕೆ ತಾಂ |
ವನದೊಳು ಶೀಘ್ರಗತಿಯಿಂ ಸರಿಗುಂ ಪರಿವುಲ್ಲೆ ಬೆನನಪ್ಪದೊಳೇಱಗ||
ದಿನಂ ಬಿಡದೆ ತಾಂ ಮೃಗಸಹಜಕರೆಂದು ಪೇಳುಭಶೋ |
ವನುಚತುರಾದಿ ಪಟುಚಯದಿನಾಮೃಗವನೆಂದಾ ಕಿರಾತನೆಯ್ದುಗುಂ ||

ದಿನ ೧ಕ್ಕೆ ಧ್ರುವಗತಿಗಾವುದ ೧೬ ದಿನ ೧ ಕಂ ಚಲಗತಿ ದಿ ४ ಉತ್ತರ೬ ಲಬ್ಧ ಸಂಯೋಗ ದಿನ ೫–೫ ಸಮುಗತಿಯೋಜನ ೮೦–೮೦ ||

ಟೀಕು || ಧ್ರುವಗತಿ ೧೬ಗೆ ಆದಿ ४ ಕಳೆದುಱಿದುದನು ಉತ್ತರದಿಂ ಭಾಗಿಸಲು ೨ ವ ೨ ದ್ವಿಗುಣಿಸಿ ೧ ಕೂಡಲು ೫ ಇದು ಸಂಯೋಗದಿನಮಕ್ಕುಂ. ಆ ದಿವಸವಧ್ರುವಗತಿಯಿಂ ಗುಣಿಯಿಸಲು ಸಮಾನಯೋಜನಮಕ್ಕುಂ.

ಸೂತ್ರಂ || ೧೦೩ ||

ನಲ್ಲಳ್ ಮುನಿದಯ್ಗಾವುದ |
ದಲ್ಲಿ ಪತಿ ಪೋಪಾಗಳಾದಿವುತ್ತರದಿಂದಂ ||
ನಲ್ಲಳ ಬಱಿವಿಡಿದೆಯ್ದಲ್ |
ವಲ್ಲಭೆಯೆಂ ಕಾಂಬನೆಂತು ದೆವಸಕ್ಕವಳಂ ||

ದಿನ ೧ಕಂ ಧ್ರುವಗತಿ ನಲ್ಲಳ್ ಗಾವುದ ೫ ದಿನ ಒಂದಕಂ ಚಳಗತಿ ಆ ೧ ಉತ್ತರ ೧ ಸಂಯೋಗ ದಿನ ೯ ಸಮಾನಗಾವುದ ४೫-४೫.

ಟೀಕು || ಹಿಂದಣ ಸೂತ್ರದ ಮರ್ಯಾದೆ—

ಸೂತ್ರಂ || ೧೦೪ ||

ಹಂದಿಯು ಹರಿಯೆಂ ದ್ವಿಗುಣಿಸಿ |
ಯೊಂದಂ ಕಳೆದುೞಿದ ಗಚ್ಛಮಾ ಗಚ್ಛಮನಾ ||
ಹಂದಿಯು ಹರಿಯಿಂದಿೞಿಯಲ್ |
ಬಂದಿರ್ಕುಂ ಸುನಕನಟ್ಟಿ ಮುಟ್ಟಿದ ದೆವಸಂ ||

ಸೂತ್ರಂ || ೧೦೫ ||

ಹಂದಿ ಹದಿನಯ್ದು ಗಾವುದ |
ವೊಂದುದಿನಂ ಪರಿಯಲದಱ ಬೆನ್ನೊಳೆ ಸುನಕಂ ||
ಒಂದ್ಯೆದಿ ವೊಂದು ಉತ್ತರ |
ಯೆಂದಿಗಮೆಯ್ದುವುದು ಪೇೞಿ ಗಣಿತವಿಳಾಸಾ ||

ದಿನ ೧ಕಂ ಹಂದಿಧ್ರುವಗತಿ ಗಾವುದ ೧೫ ದಳಗತಿ ಸುನಕ ಆದಿಗಾವುದ ೧ ಉತ್ತರಗಾವುದ ೧ ಲಬ್ಧ ಸಂಯೋಗ ದಿನ ೨೯ ಸಮಾನಗಾವುದ ೪೩೫–೪೩೫.

ಟೀಕು || ಧ್ರುವಗತಿ ೧೫ ದ್ವಿಗುಣಿಸಿ ಒಂದು ಕಳೆಯಲು ಸಂಯೋಗದಿನಮಕ್ಕುಂ ಆ ದಿನದಿಂ ಧ್ರುವಗತಿಯಂ ಗುಣಿಯಿಸಲು ಸಮಾನಸಂಯೋಜನಮಕ್ಕುಂ.

ಮಂದಗತಿ ಶೀಘ್ರಗತಿಗೆ ಸೂತ್ರ—

ಸೂತ್ರಂ || ೧೦೬ |

ಮಂದಗತಿ ಶೀಘ್ರಗತಿಗಳ |
ನೊಂದಿಸು ದಳಯಿಸಿ ವಿಭಾಗಿಸಲ್ ಯೋಜನಮಂ ||
ಒಂದನಿತುಂ ದೆವಸಂಗಳ್ |
ಎಂದಱುವುದು ಭಯಾರ್ತಸಂಖ್ಯೆ ಯೋಗದಿನಂ ||

ಸೂತ್ರಂ || ೧೦೭ ||

ಅಯ್ದಂ ಸದ್ಯೆವನೊರ್ವಂ |
ಪದಿನಯ್ದಂ ಪಡೆದವನು ವೊಡನೆ ಪೊಱಮಟ್ಟೆಂಬ ||
ತಯ್ದು ಯೋಜನಮಂ ನಡೆ |
ದಯ್ದುಗು ಮಗುೞ್ಚಿಯ್ದುದಿನಕೆ ತಾಂ ಬಂದಿರ್ಪರ್ ||

ಮಂದಗತಿ ಗಾವುದ ೫ ಶೀಘ್ರಗತಿ ಗಾವುದ ೧೫ ಯೋಜನ ೪೦ ಲಬ್ಧ ಸಂಯೋಗ ದಿನ ೪ || ಜಾರ ?

ಟೀಕು || ಧ್ರುವಗತಿಯನೂ ಶೀಘ್ರಗತಿಯನೂ ಕೂಡಿ ಅರ್ಧಿಸಲು ೧೦ ಈ ಹತ್ತಱಿಂ ಯೋಜನ ೪೦ನೂ ಭಾಗಿಸಲು ಲಬ್ಧ ಸರಿ.

ಸೂತ್ರಂ || ೧೦೮ ||

ಪಾರಾಮತಮಂ ನಯದಿಂ |
ಸಾರಸಮಂ ರಿತುದಿರಿಂದ ಹಂಸೆಯನಾ ||
ದೂರಾಂಭೋರಾಶಿಯಿಂದೆ ನವಿಲ್ಗಳ |
ಚಾರು ಗುಣವಾರ್ಧಿಯಿಂ ಗುಣಿಯಿಸೆ ಸತತಂ ( ? ) ||

ಸೂತ್ರಂ || ೧೦೯ ||

ಬರುಹಿಯ ನಂಭೋನಿಧಿಯಿಂ |
ಮರಾಳನಂ ಮದನಬಾಣದಿಂ ಸಾರಸಮಂ ||
ಸರಸಿಜಗರ್ಭನ ಮುಖದಿಂ |
ದಿರದೊತ್ತುಗೆ ಮೂಱಱಿಂದೆ ಪಾರಾವತಮಂ ||

| | | | | |
|---|---|---|---|---|
| ಗ ೩ | ಗ ೫ | ಗ ೭ | ಗ ೯ | ಪಾರಿವಾಳದ ಲೆಕ್ಕ ೫ ಗಿಣಿ ೭ ಹಂಸೆ ೯ |
| ಪಾರಿವಾಳ ೫ | ಗಿಣಿ ೭ | ಹಂಸೆ ೯ | ನವಿಲ್ ೩ | ನವಿಲ್ ೩ ಸವುಜ ೪. ರಾಜಪುತ್ರರು |

ಗ ೦೦ ಲಬ್ಧ ಸಾರಾಸ ನವಿಲು ೧೨ ಕಂ ಗ ೩೬ ಹಂಸ ೪೫ಕ್ಕೆ ಗ ೩೫ ಗಿಣಿ ೨೮ಕ್ಕಂ ಗ ೨೦ ಪಾರಿವಾಳ ೧೫ಕ್ಕಂ ಗ ೯ ಅಂತೂ ಹೊನ್ನು ೧೦೦ ಪಕ್ಷಿಯೂ ೧೦೦.

ಟೀಕು || ಕಡೆಯ ನವಿಲು ೩ನೂ ಗ ೪ ರಿಂದ ಗುಣಿಯಿಸಲು ಹೊನ್ನು ಬರ್ಕು. ಈ ಮರ್ಯಾದೆಯಲು, ಹೊನ್ನನು ಪಕ್ಷಿಯನು ಬೇರೆ ಬೇರೆ ಗುಣಿಯಿಸಿ ಕೂಡಲು ತಪ್ಪದು.

ಸೂತ್ರಂ || ೧೧೦ ||

ಉ || ಪನ್ನೆರಡಾದಿ ಮೂಲ ಧನಮಂ ತ್ರಿದಶೋತ್ತರವೃದ್ಧಿಯಂ ದಶಂ |
ಪೊನ್ನರನಾಧನಗ್ರತನಯಂ ತ್ರಿತಯಪ್ರವಾದ್ಯ ಸೌಖ್ಯದಿಂ ಸ ||
ತ್ಸಂಗ ಚತುಷ್ಟಯ ಪ್ರಜೆಯ ಲಾಭದಿ ನಿರ್ವರುವೊಂದೆ ಗದಸಂಪೂ |
ತಂಗೆಯಿಂ ಸಮಾನಧನಮಂ ಪಡಿದಿತಿಳಿಪಡದ ಸಂಖ್ಯೆಯಂ ||

| | | |
|---|---|---|
| ಧನಗ ೦೦ | ಧನ ಗ ೦೦ | ಲಬ್ಧ ಗದ ೧೯–೧೯ ಸಮಧನ ೭೧೪–೭೧೪ |
| ಉ ೩ ಆ ೨ | ೪ ಆ ೧೩ | |

ಟೀಕು || ಎರಡು ಆದಿಯ ಶೇಷವ ಮಾಡಿಕೊಂಡು ಎರಡು ಉತ್ತರದ ಶೇಷವನೂ ಕೊಂಡು ಆದಿಯ ಶೇಷವನು ಗುಣಿಯಿಸಲು ೯ ಈ ೯ನೂ ಗುಣಿಸಿ ೧ ಕೂಡಲು ಗದಮಕ್ಕುಂ. ದನವರೆ ರೂಪೇಣನೊಗದ ಎಂಬ ಸೂತ್ರದಿಂ ತಂದುಕೊಂಬುದು.

ಸಮಾನ ಪೂರ್ವಸಂಖ್ಯೆಯ ಮಾಱ್ಪುದರ್ಕೆ ಸೂತ್ರಂ—

ಸೂತ್ರಂ || ೧೧ ||

ಒಂದಱೊಳೊಂದನೊತ್ತಿದರೆ ದ್ರವ್ಯದ ಲೆಕ್ಕಮುದಂ ವಿಶೇಷದಿಂ |
ತಂದಿರದಿಟ್ಟು ಬೇಱೆ ಪ್ರತಿಯಂ ಕಡೆಯಿಂದವೆ ಭಾಗಿಸುತ್ತು ಮ ||
ತಂದಿ ಪಳಮುನ್ನಿನದೊಂದು ಬಱಿಕ್ಕೆ ತತ್ಪಳಂ........ !
...................................................... ||

ಸೂತ್ರಂ || ೧೨ ||

ನಯನಂ ಶಿಖಿಗತಿ ಶರ ಸಂ |
ಖ್ಯೆಯ ಗುಣಂಗಳಿಂ ನಾಲ್ಕು ಪುರದೊಳ್ ಪಡೆದುದ ||
ಪಡೆದುದನಾಪುರದ ಶಿವ |
ಭವನಕಂಡುಂ ಸರಿಮಿಗಿಲಂ ಪೇಱ ಮೊದಲುಮಂ ಪೂಜೆಯುಮಂ ||

| ೦ | ೦ | ೦ | ೦ |
|---|---|---|---|
| ೨ | ೩ | ೪ | ೫ |

ಲಬ್ಧ ಮೊದಲ........ತಂದುದು ೮೬ ಸಮಾನಪೂಜೆ ೧೨೦ ೧೨೦ — ೧೨೦ — ೧೨೦.

ಟೀಕು || ಈ ನಾಲ್ಕು ಪೂಜೆಯನೂ ಅಡರೆ ಗುಣಿಯಿಸಲು ಸಮಾನಪೂಜೆಯಕ್ಕುಂ ಮೊದಲು ಗುಣ ಉಱಿಯೆ ೨ನೆಯ ಗುಣದಿಂ ೧ ಕೂಡಿ ೩ನೆಯ ಗುಣದಿಂ ಗುಣಿಸೆ ಮತ್ತೊಂದಂ ಕೂಡಿ ನಾಲ್ಕನೆಯ ಗುಣ....ಸಿ ಒಂದಕೂಡಲು ಮೊದಲ ಧನವಕ್ಕುಂ ದ್ವಿಗುಣದವೊಡ್ಡು........ ........ಲಬ್ಧ ೧೨೮ ಸಮಾನಪೂಜೆ ೧೨೦-೧೨೦-೧೨೦-೧೨೦.

ಟೀಕು || ನಾಲ್ಕು (ಪೂಜೆ) ಯನು ಅಡರೆ ಗುಣಿಯಿಸಲು ಸಮಾನಪೂಜೆಯ.......... ೫ ಮೂಱನೆಯ ಗುಣದ ನಾಲ್ಕಱಿಂ ಗುಣಿಸಿ........ಣದಿಂ ಗುಣಿಸಿ ಮೇಲಣ ಅಂಶಮಂ ಕೂಡಲು ಮೊದ........ವಾರಂಗಳು. ಎನಿತುವಾದೊಡೆ ವೊರಂ ವಿರೆಸಸಿ... .. .............................

ಇದು ಶುಭಚಂದ್ರ ದೇವ ಯೋಗೀಂದ್ರ ಪಾದಾರವಿಂದ ಮಧುಕರಾಯಮಾಣಂ
ಮಾನಸಾನಂದಿತ ಸಕಲ ಗಣಿತ ತತ್ವವಿಲಾಸಂ ವಿನೇಯಜನ ವಿನುತ

**ಶ್ರೀ ರಾಜಾದಿತ್ಯ ವಿರಚಿತಮಪ್ಪ**

## ವ್ಯವಹಾರಗಣಿತಂ ಸಂಪೂರ್ಣಂ.

# ಅನುಬಂಧಗಳು

ಶ್ರೀ ಗುರುಭ್ಯೋನಮಃ

# ಅ ನು ಬಂ ಧ — ೧

**ಮಂಗುಣಿ ಅಳತೆಗೆ — ಅಳತೆಗೆ ಓಜಾಸೂತ್ರಂ :**

**ಸೂತ್ರಂ-೧** ಕಂ|| ಅರೆಯೊಂ....ಳೆ ಯೆರಡಂ |
ನಿರುತಂ ಘನವರ್ಗಗೆಯ್ಯೆ ಅದ್ದಗಾಣಿಗಳಕ್ಕುಂ ||
ಅರೆಯೆರಡು ಬೇಳೆವೊಂದ |
.................. ....... ||

**ಸೂತ್ರಂ-೨** ಕಂ|| ........ಹರೆಯಗಲಂ |
ಪನ್ನೊಂದು ಬೇಳೆ ಘಾತ ನೀಳಮದು ಬೇಳೆಗಳ ಕೋಲಂ ||
ಚೆನ್ನಾಗಿ ನೋಡಿ ಗುಣಿಸಿಯೆ |
ಯಿನ್ನಿದರಂ ಕುಂಟಿ ಪವಣ ಪೇಟ್ಟೈ ಗಣಕಾ ||

ವೊಡ್ಡು || ವೊಡ್ಡರ ಗುಂಡಿ..............................ಣೆ ೧ || ಹಾರ ೧೨೪ || ಗುಣಕಾರದ ರಾಶಿ ೨೫೧೪೨೫ ||—

ಟೀಕು || ಅಗಲದ ಅಳತೆಯ ಕೋಲು ೧೨||ನೂ ಅರೆಗಳ ಮಾಡಲು ೨೫ ನೀಳದ ಘಾತದ ಅಳತೆಯ ಕೋಲುಗಳನೂ ೧೧೭ ಅಗಲದ ಕೋಲು ೧೨|| ಬೇರೆ......೧೩| ೮|| ಅರೆಗಳು ೨೫ ಅರೆ ಕಡಿಮೆಯ ಬೇಳೆಗಳ ಕೂಡಿದ ೨ ರಾಶಿ........ದಲ್ಲೂ ಆಡರೆ ಗುಣಿಸಲು ಬಂದ ಗುಣಕಾರದ ೨೫೧೪೨೫ ಯಿವು ಅದ್ದಗಾಣಿಗಳಕ್ಕುಂ ಯಿದನು...........ನಿಸುವ ಹಾರ || ಕುಂಟೆ ಒಂದಕ್ಕೆ ಅದ್ದಗಾಣಿಗಳು ೧೩೮ ಯೆಂದು ಹಾರವಮಾಡಿ ಯಿಕ್ಕಿ ಭಾಗಿಸಲು ಬಂದ ಲಬ್ಧ ನಿಜಕುಂಟೆಗಳು ೧೯೭೪ ಅದ್ದಗಾಣಿ ೧|| ಉದಾಹರಣೆ—

**ಸೂತ್ರಂ-೩** ಕಂ|| ತೆತ್ತಿಸವರೆಗಳಾಗ... |
ವೃತ್ತದ್ರಿಯು ರಾಮವರೆಗಳ...ಗಲ.... ||
ಬಿತ್ತರದ ಘಾತದೆಂಟು ಬೇಳೆಯು |
ಸುಸ್ಥಿರದಿಂ...ಪೇಟಿ ಕುಂಟೆಯು ಪವಣಂ ||

ವೊಡ್ಡು || ವೊಡ್ಡರ ಗುಂಡಿ ನೀಳ ೧೮ ಅಗ ಇದಕ್ಕೆ ಲಬ್ಧ ಘಾತ ಕುಂಟೆಗಳು ೨೪೪೦
|೪೪ ೮=| ೧೭||

ಹಾರ ೩೨ ಗುಣಕಾರದ ರಾಶಿ ೧೯೩೭೫||

ಟೀಕು|| ಅಗಲ ೧೭|| ಅರೆಗಳು ೩೩ ನೀಳ ೧೮||ವರೆಗೆ ಅರೆಗಳು ೩೭ ಘಾತ ೮ ಗೆ ಬೇಳೆಗಳು ೭೫|...ಬೇಳೆಗಳ ಮಾಡಿಯಿರಿಸಿ ೩ ರಾಶಿಯನು ಆಡರೆ ಗುಣಿಸಲು ಬಂದ ಗುಣಕಾರದ ರಾಶಿ ೭೯೩೭೫. ಯಿವು ಅರೆವೀಸಕುಂಟೆಗಳಕ್ಕುಂ ಯಿದನು ಭಾಗಿಸುವ ಹಾರ| ಕುಂಟೆ ೧ಕ್ಕೆ ಅರೆವೀಸಗಳು ೩೨ ಎಂದು ಹಾರವಮಾಡಿಯಿಕ್ಕಿ ಭಾಗಿಸಲು ಬಂದ ಲಬ್ಧ ನಿಜಕುಂಟೆಗಳು ೨೪೪೦.

ಸೂತ್ರಂ-೪ ಕಂ|| ಶಶಿಖಂಡುಗ ಕಿಪ್ಪತುಮಣ |
ಶಶಿಮಣುವಿಗೆ ದಡೆಯನಾಲ್ಕು ತಪ್ಪದು ಬಲಿಃಕಂ ||
ಶಶಿದಡೆಯಕೆ ಸೇರ್‌ಪತ್ತುಂ |
ಶಶಿಸೇರಿಂಗಂ ಪಾವು ನಾಲ್ಕು ತಪ್ಪದು ನಿರುತಂ ||

ಸೂತ್ರಂ-೫ ಶಶಿಪಾವಿಗೆ ಗದ್ಯಾಣಂ |
ವಸುಶಶಿಯಂ ಸಂಜ್ಞೆಯಿಂದೆ ತಪ್ಪದು ನಿರುತಂ ||
ಪಸರಿಸಿ ಲೆಕ್ಕಗಳನಿತುವ |
ವಸುಮತಿಯೊಳ್ ತಿಳಿಯ ಪೇಟ ಗಣಕನಿಧಾನಾ ||

ಖಂಡುಗಕ್ಕೆ ನೆಲ್ಲಿನ ಕಾಳುಗಳ ಮಿತವ ಕಾ(ಂ)ಬ(ರೆ) ||

ಸೂತ್ರಂ-೬ (ಅ)ದ್ದ(ಕೆ)ನೂಱಯ್ವತ್ತುಂ |
ಅದ್ದನಕಂ ಸಾಸಿರದಯ್ನೂಱು ನೆಲ್ಲುಗಳಕ್ಕುಂ ||
ಪೊದ್ದಿದ ಸೊಲ್ಲಗೆ ತ್ರಿಸಾಸಿರ |
ಸದ್ಯದಿ ಮಾನಕ್ಕೆ ನೆಲ್ಲು ರವಿ ಸಾಸಿರಮುಂ ||

ಸೂತ್ರಂ-೭ ಯಿದ್ದಪ್ರಸ್ಥಕೆ ವಸು(ಚತು)ಸಾಸಿರ | ?
ತಿದ್ದಿದ ಕೊಳಗಕ್ಕೆ ಲಕ್ಷ ಗೂಡಿತ್ತೆರಡುಂ ಸಾಸಿರ ||
ಬುದ್ಧಿಯ ಖಂಡುಗವೊಂದಕೆ |
ನಿರ್ಧರ ಮೂವತ್ತ ಎಂಟು ಲಕ್ಷ ಸಾಸಿರ ಕಾಳಂ ||

ಚಿಟ್ಟನ ಮಣುವಿನ ಖಂಡುಗದ ಅಳತೆಯ ಹೆಚ್ಚು ಕುಂದು ಕಾಂಬರೆ.

ಸೂತ್ರಂ-೮ ಕಂ|| ಮೂರುಂ ಚಿಟ್ಟನಪಡಿ....ಣಿವಿನ ಮಾನಂ |
ಮೂಱುಂ ಕುಳಮಣುವುಕೊಳಗ ಚಿಟ್ಟನ ಖಂಡುಗ ||
ಮೂಱಾಗೆ ಮಣುವಿನ ಖಂಡುಗ |
ಮೂಱ......ಗದೆ ಪೊಲನು ಮಣುವೆನಿಸಿಕ್ಕುಗಂ ||

ಮುತ್ತಿನ ಕಣಜಿನ ತೂಕಕ್ಕೆ :—

ಸೂತ್ರಂ-೯ ಹತ್ತು ಹಣವಡ್ಡ ತೂಕದ |
ಮುತ್ತಿನ ಕಣಜಕ್ಕು ಅದನು ಚೌವಡವಿನೊಳಂ ||
ವೊತ್ತುವುದು ಮತ್ತು ಬಿಗಿವುದು |
ಮತ್ತಿನ.......ಭಾಷೆಗಿದುವೆ ತಪ್ಪದು (ಗಣಕಾ) ||

ಸೂತ್ರಂ-೧೦ ಕಂ|| ಭಾರಕ್ಕೆಪತ್ತು ತೊಲೆಯುಂ |
ಬಾರಕ್ಕಂ ನೂಱುಸಂಖ್ಯೆ ಬೀಸಗೆಯಕ್ಕುಂ ||
ಭಾರಕ್ಕೆ ಮಣವು ಪತ್ತುಂ |
ಭಾರಕ್ಕಂತಾಗ ದಡೆಯ ತಪ್ಪದು ಗಣಕಾ ||

ಸೂತ್ರಂ–೧೧ ಕಂ|| ಭಾರಕ್ಕಿಭರ್ಗಾಸಿರ ತೊಲೆಯುಂ |
ಭಾರಕ್ಕಂ ಕರುಷವೆಂಟುಸಾಸಿರಮಕ್ಕುಂ ||
ಭಾರಕೆ ಕಾಲ್ಕರುಷ ಬತ್ತಿ ಸಾವಿರ |
ಭಾರಕ್ಕಂ ಮೂವತೆರಡು ಸಹಸ್ರ ಪೊನ್ನಿನ ತೂಕಂ ||

ಸೂತ್ರಂ–೧೨ ಭಾರಕ್ಕೆ ತೊಲೆಯು ವಿಂಶತಿ |
........ಯು ತೊಲೆಗಯ್ದು ಬೀಸಗೆ (ಯಕ್ಕುಂ) ||
ಸೇರಿದ ಭೀಸಗೆಗಿಪ್ಪತ್ತು ಹಲವಂ | ?
ಧಾರಿಣಿಯೊಳ್ ಹಲಕ್ಕೆ ನಾಲ್ಕು ಕರುಷಗಳಕ್ಕುಂ ||

ಸೂತ್ರಂ–೧೩ ಕರುಷಕೆ ಗಿದ್ದಗೆ ನಾಲ್ಕುಂ |
ಧರಣಿಯೊಳಂ ಭಾರದ.......ನಿರತದೊಳಿಂತುಂ ||
ಹರುಷದಲಿ ತಿಳಿಯೆ ಪೇೞ್ವುದು |
ಪರಮಾರ್ಥಂ ತಪ್ಪದೆಂದು ಗಣಕನಿಧಾನಾ ||

ಸೂತ್ರಂ–೧೪ ಮುತ್ತಿನ ಮಣಿ ಬೆಗಡೆಗಳೆದೊಡೆ |
ಮತ್ತದು ದಶಪಣವಡ್ಡ ತೂಕ ತಪ್ಪದು ಒೞಃಕಂ ||
ಬಿತ್ತರಿಸಿದ ಪವಳ ಕಣಜಿಗೆ |
ಉತ್ತಮರುಂ ತಿಳಿಯೆ ಪೇೞ ಧರಣೆಗಳಯ್ದುಂ ||

ತೂಕಕಟ್ಟಣೆಗೆ :—

ಸೂತ್ರಂ–೧೫ ಹವಳಕ್ಕೆ ಕಣಜುಗಟ್ಟಳೆ |
ಭುವನದೊಳಂ ಚಿವು ಅಡಹು ಮುತ್ತಿನ ಮಣಿಗಂ ||
ಧ್ರುವದಿಂ ಮಂ (ಜ) ಡಿ ವಜ್ರಕೆ |
ಜವದಿಂ ಕತ್ತುರಿಗೆ ವೇಣಿ ತಪ್ಪದು ಗಣಕಾ ||

ಸೂತ್ರಂ–೧೬ ಕಂ|| ಕಪ್ಪುರಕೆ ಕುರುಜು ಎಂಬುದು |
ವೊಪ್ಪುವ ಜವ್ವಾಜಿಗೆ ವಂಕಿ ಚಿನ್ನ ಬೆಳ್ಳಿಗೆ ತೂಕಂ ||
ತಪ್ಪದು ಕಂಚು ತಾಮ್ರಕೆ ಹಲ |
ಯಿಪ್ಪದು ಕಲಿಗಳತೆ ಗಜವು ವಾಜಿಗೆ ಖಡ್ಡಿ (ಯೂ) ||

ಸೂತ್ರಂ–೧೭ ಜವುಳಿಯೆನೆ ಸೀ (ರೆ) ಯೆರಡುಂ |
ಜವುಳಿಗಳಿಪ್ಪತ್ತು ಎನಿಪ ಕೋಡಿಗೆ ವೊಂದುಂ ||
ಜವುಳಿ ಚತುಸಂಖ್ಯೆ ಚೌಕುಳಿ |
ಜವುಳಿಯ ಪರಿಭಾಷೆ ಪೇೞ್ದ ರಾಜಾದಿತ್ಯಂ ||

ಟೀಕು || ಹವಳ ತೂಗುವ ಕಣಜಿನ ತೂಕ ಗ ೧೯೨|| ಕಡೆದು ವೆಜ್ಜವ ಆದ ಶುದ್ಧ ಮಣಿಯು ತೂಗುವುದು, ಮುತ್ತಿನ ಕಣಜ ೧ಕ್ಕೆ ತೂಕ ಗ ೧-೦|| ಕಡೆಯದೆ ಸುಮ್ಮನೆ ಯಿೂವೆಜ್ಜವ ಕೊರೆಯದೆ ಯಿದ್ದ ಮಣಿಯ ತೂಗುವರೆ — ಮುತ್ತಿನ ಕಣಜ ೧ಕ್ಕೆ ತೂಕ ಗ ೧-೧ ಮತ್ತಂ ಯಿನ್ನೊಂದು ಬಗೆಯಲ್ಲಿತೂಕ ಗ೧-೧ ಉಂಟು,ಮತ್ತು ಮುತ್ತಿನಮಣಿಗಳಿಗೆ ತೂಕಕಟ್ಟಳೆಚಿವ್ವಗಳೆಂದು ವುಂಟು. ಮತ್ತಂ ಮುತ್ತುಗಳ ತೂಗುವ ಕಟ್ಟಳೆಗೆ—ಕೊಚ್ಚಿ—ಕೋಟೀಕೋಟೆಯ ಆ ಅಡವು, ಕಂಚಿಯ ಅಡಹು-ಕಾಯಿ (ಕಾವೇರಿ ?) ಪಟ್ಟಣದ ಅಡಹು, (ವಿ)ದ್ಯಾನಗರದ ಅಡಹು, ಕಳ್ಳಿಯ ಅಡಹು ಯಿಂಥಾ ಅಡಹುಗಳುಂಟು.

ವಜ್ರವತೂಗುವುದು ಮಂ(ಜ)ಜಾಡಿ ೧ಕ್ಕೆ ತೂಕ ೦೦||= ಕಸ್ತೂರಿಯ ತೂಗುವ ವೇಣಿ ೧ಕ್ಕೆ ತೂಕ ಗ. ಕಪ್ಪುರವ ತೂಗುವ ಕುರುಜು ೧ಕ್ಕೆ ತೂಕ ಗ ೪೮ ಪನ್ನೀರ ತೂಗುವ ತೊಲೆ ೧ಕ್ಕೆ ತೂಕ ಸೇರು ೩೨ರ ಜವ್ವಾಜಿಯ ತೂಗುವ ವಂಕಿ ೧ಕ್ಕೆ ತೂಕ ಗ|| ಚಿನ್ನ ಬೆಳ್ಳಿ.......ತೂಗುವುದು ಹಲ ಗಟ್ಟಿ...ಆನೆಯ ಅಳೆವುದಕ್ಕೆ ಗಜಕಟ್ಟಣೆ ಗಜ ೧ಕ್ಕೆ ಪಿಡಿಗಳ ೮ ಪಿಡಿಯ ಮಡಿದುಯಿದ್ದ ಮೊಟದ ಅಳತೆಯೆ ಕುದಿರೆಯ ಅಳೆವ ಖಡ್ಡಿ೧ ಎನಿಸುಗುಂ ಪಿಡಿ..........೦ಬುದು ೧.......ಟು... ...ಸುವುದು.

ಸೂತ್ರಂ-೧೮ ಕಣಜಂ ವರ್ಗಂಗೊಂಡು |
ಎನಿತಾದೊಡೆ ಅಡಹಿನಿಂದ ಗುಣಿಯಿಸುಮತ್ತಂ ||
ಮಣಿ ತೂಕದಿಂದ ಭಾಗಿಸಿ |
ಕ್ಷಣಮಾತ್ರದೆ ಚಿವ್ವ ಲೆಕ್ಕ ತಪ್ಪದೆ ಬರ್ಕುಂ ||

ಸೂತ್ರಂ-೧೯ ಕಂ|| ........................................ |
ನಿಶ್ಚಯದಿಂ ಮೂಱು ತೂಕ......೦||
ಹೆಚ್ಚಿನ ಪವಳದ ಕಣಜಿಗೆ |
ನಿಚ್ಚಲು.. ಧರಣವಯ್ದು ತಪ್ಪದು ಗಣಕಾ ||

ಖಂಡುಗ ಲೆಕ್ಕಕ್ಕೆ :—

ಸೂತ್ರಂ-೨೦ ಖಂಡುಗಕೆ ಪಂಚಕ ನಾಲ್ಕುಂ |
ಉಂಡಿಗೆಯೊಳ್ ಕೊಳಗವಯ್ದು ಪಂಚಕಶಶಿಗಂ ||
ಮಂಡಲದೊಳ್ ಕೊಳಗವೊಂದಕೆ |
ಕಂಡಿಕುದುಂ ಬಳ್ಳ ನಾಲ್ಕು ರಾಜಾದಿತ್ಯಾ(ತ್ಯಂ) ||

ಸೂತ್ರಂ-೨೧ ಬಳ್ಳಕ್ಕೆ ಮಾನ ನಾಲ್ಕುಂ |
ಉಳ್ಳವು ಮಾನಕ್ಕೆ ನಾಲ್ಕು ಸೊಲ್ಲಗೆಯೊಂದ |
ಕ್ಕೊಳ್ಳಿತೆನೆ ಸೊಲಗೆ ಯೊಂದಕೆ |
ಪೊಳ್ಳಿಲ್ಲದೆ ಪೇಟ ಯೆಂದ ಗಿದ್ದನ ನಾಲ್ಕುಂ ||

ಸೂತ್ರಂ–೨೨ ಖಂಡುಗಕೆ ಕೊಳಗವಿಪ್ಪತು |
ಖಂಡುಗಕಂ ಬಳ್ಳಶೀತಿ ತಪ್ಪದು ಬಟಾಕಂ ||
ಖಂಡುಗಕೆ ಮೂನೂಱಿಪ್ಪತ್ತು ಮಾನಂ |
ಖಂಡುಗಕಾಕಾ ಶ್ವಶ್ರಶಿ ನಾಗಾಕ್ಷಿ ಸೋಮ ಸೊಲ್ಲಗೆಯಕ್ಕುಂ ||

ಸೂತ್ರಂ–೨೩ ಖಂಡುಗಕದ್ದನಮೆಂತೆನೆ |
ತಂಡದೊಳಂ ಗಗನತರ್ಕಶರಚರಣಂಗಳ್ ||
ಖಂಡುಗಕೆ ಗಿದ್ದನಮೆಂತೆನೆ |
ಕಂಡಿರು ನೀನಭ್ರಯುಗ್ಮಶಶಿಶರಮೆಂದುಂ ||

ಪೊನ್ನಿನ ಮಿತ ಪ್ರಮಾಣಕ್ಕೆ :—

ಸೂತ್ರಂ–೨೪ ಕಂ|| ಪೊನ್ನಿಗೆ ಪಂಚಕವೆರಡುಂ |
ಚೆನ್ನಾಗಿಯೆ ಪಣವು....(ಪಂ)ಚಕಶಶಿಗಂ ||
ಯಿನ್ನೊಂದುಪಣಕೆ ಪಾಗ ನಾಲ್ಕುಂ |
ಬಿನ್ನಣದಿಂ ಪಾಗಕಯ್ದು ವೀಸಗಳಕ್ಕುಂ ||

ಸೂತ್ರಂ–೨೫ ಪೊನ್ನಿಂಗೆ ಪಣವು ಪತ್ತುಂ |
ಪೊನ್ನಿಂಗಂ (ತಾಳ) ಪಾಗವೀಸೆಗಳಿನ್ನೂ ||
ಪೊನ್ನಿಂಗೆಂಟು ನೂಱುಕಾಣಿಯು |
ಪೊನ್ನಿಂಗಂ ಅದ್ದ...............ಱುಂ ||

ಸೂತ್ರಂ–೨೬ ಪೊನ್ನಿಂಗೆ ಗಿದ್ದಗಾಣಿಯ ಸಂಖ್ಯೆಯ |
ಚೆನ್ನಾಗಿಯೆ ತಿಳಿಯೆ ಪೇೞ ಲೆಕ್ಕಕ್ರಮದಿಂ ||
ಮುನ್ನೂಱಯಿಪ್ಪತ್ತು ಹತ್ತುಗಳಕ್ಕುಂ |
ಯಿನ್ನಿದಕಂ ತಪ್ಪಲಿಲ್ಲ ಗಣಿತವಿಳಾಸಾ ||

ಪ್ರತಾಪದ ಲೆಕ್ಕ :—

ಸೂತ್ರಂ–೨೭ ಕಂ|| ಪ್ರತಾಪಕೆ ಚೌಲ ನಾಲ್ಕುಂ |
ಸತತಂ ಚೌಲಕ್ಕೆ ನಾಲ್ಕು ಪಾಯಿಗಳಕ್ಕುಂ ||
ಅತಿಶಯದ ಪಾಯಿಯೊಂದಕೆ |
ಗತಿಸಂಖ್ಯೆಯ ಗಿತಿಯು ಯೆಂದ ರಾಜಾದಿತ್ಯಂ ||

ಸೂತ್ರಂ–೨೮ ಪ್ರತಾಪಕೆ ಪಣವು ಬಾಣಂ |
ಪ್ರತಾಪಕಂ ಧರಣವೆರಡು ಚೌಲಂ ನಾಲ್ಕುಂ ||
ಪ್ರತಾಪಕೆದು........ಲವೆಂಟುಂ |
ಪ್ರತಾಪಕಂ ಪದಿನಾಱುಪಾಯಿ ಚೌವಷ್ಟಿಗಿತಿಗಳುಮಂ ||

ಕಾಲಪರಿಭಾಷಾ ಸೂತ್ರಂ :—

ಸೂತ್ರಂ–೨೯   ಕಂ|| ಪದಿನೆಂಟು ನಿಮಿಷ ಕಾಷ್ಠಂ |
ಪೊದವಿದ ಮೂವತ್ತು ಕಾಷ್ಠೆ ಕಳೆಯೆನಿಸಿರ್ಕುಂ ||
ಅದು ಮೂವತು ಕಳೆಯಿಂ ಕ್ಷಣ |
ವಿದಿತಂ ಕ್ಷಣ ವಾಱಱಿಂದೆ ಘಳಿಗೆಯೆನಿಕ್ಕುಂ ||

ಟೀಕು || ಕಣ್ಣಿನ ಯೆರಡು ಯೆವೆಗಳಂ ಮುಚ್ಚಿತೆಱೆವನಿತು ಪೊೞ್ತು ಪೊಂದುನಿಮಿಷಮೆನಿಸುವುದು. ಅಂಥಹ ನಿಮಿಷ ೧೮ ಆದೊಡೆ ಅದು ೧ ಕಾಷ್ಠೆಯೆನಿಸುವುದು. ಅಂಥಾ ಕಾಷ್ಠೆ ೩೦ ಆದೊಡೆ ಅದು ೧ ಕಳೆಯೆನಿಸುವುದು. ಅಂಥಾ ಕಳೆ ೩೦ಆದೊಡೆ ಅದು ಒಂದು ಕ್ಷಣವೆನಿಸುವುದು. ಅಂಥಹ ಕ್ಷಣಂಗಳ್ ಆಱಾದೊಡೆ ಅದು ೧ ಘಳಿಗೆಯೆನಿಸುವುದು.

ಸೂತ್ರಂ–೩೦   ಎರಡುಂ ಗಳಿಗೆ ಮುಹೂರ್ತಂ |
ವರ ತ್ರಿಂಶನ್ಮುಹೂರ್ತಕೊಂದು ದಿವಸಮುದಕ್ಕುಂ ||
ಶರಶಿ ದಿವಸಮೆ ಪಕ್ಷಂ |
ಕರಪಕ್ಷಂ ಮಾಸವೊಂದು ರವಿಮಾಸವರ್ಷಂ ||

ಟೀಕು || ( ಎರಡು ) ಘಳಿಗೆ ಆದೊಡೆ ಅದು ೧ ಮುಹೂರ್ತವೆನಿಸುವುದು. ಅಂಥಾ ಮುಹೂರ್ತಂಗಳು ೩೦ ಆದೊಡೆ ಅದು ಒಂದು ದಿನಸವಹುದು. ಅಂಥಹ ದಿವಸಗಳು ೧೫ ಆದೊಡೆ ಅದು ಒಂದು ಪಕ್ಷವಹುದು. ಅಂಥಹ ಪಕ್ಷ ೨ ಆದೊಡೆ ಅದು ಒಂದು ತಿಂಗಳೆನಿಸುವುದು. ತಿಂಗಳು ಎಂದರೆ ಮಾಸ ಎಂದರೆ ಪೊಂದೇ ಅರ್ಥವಕ್ಕುಂ. ಅಂಥಹ ತಿಂಗಳು ೧೨ಕ್ಕೆ ಅದು ಒಂದು ವರ್ಷವಹುದು.

ಸೂತ್ರಂ–೩೧   ಅಱುವತ್ತು ವಿಘಳಿಗೆ ಘಳಿಗೆ |
ಅಱುವತ್ತುಂ ಘಳಿಗೆ ಗೊಂದುದೆವಸಮುದಕ್ಕುಂ ||
ಅಱುವತ್ತುಂ ಘಳಿಗೆಗವೆುಂ |
ಟಱಿೊಳಂಶಂ ಜಾವವೊಂದು ತಪ್ಪದು ಗಣಕಾ ||

ಟೀಕು || ೬೦ ವಿಘಳಿಗೆಗೆ ಘಳಿಗೆ ೧ ಅಂಥಾ ಘಳಿಗೆ ೬೦ಕ್ಕೆ ದೆವಸಂ ಒಂದಹುದು. ಘಳಿಗೆ ೭||ಗೆ ಜಾವ ೧ ಅಹುದು. ಅಂಥಹ ಜಾವ ೮ಕ್ಕೆ ದೆವಸವಹುದು. ದೆವಸ ೩೦ಕ್ಕೆ ತಿಂಗಳು ೧ ತಿಂಗಳು ೧೨ಕ್ಕೆ ವರುಷವಹುದು.

ಧಾನ್ಯ ಪರಿಭಾಷೆ :—

೩ಂಡುಗಕ್ಕೆ ನೆಲ್ಲ ಕಾಳು

ಸೂತ್ರಂ–೩೨   ಗವಾಕ್ಷ ಕಂಡಿಯ ಧೂಳವು |
ಅವಾ (ಱು) ಮಾಗಲಣು ನಾಮ ತಪ್ಪದು ಬಱಿಕಂ ||
ಭಾವದಣು ವೆಂಟು ರೇಣುವು |
ಕೋವಿದರಾರೇಣುವೆಂಟು (ಕರಿಯೆನಿಸಿ) ರ್ಕುಂ ||

ಸೂತ್ರಂ-೩೩ ಕರಿಯೆಂಟು ಕೂದಲ ಮೊನೆಯು ।
ಕರಿ(ಕೂದಲ್)ಯ ಮೊನೆಗೆ ನೋಡೆ ತಿಲವೊಂದಕ್ಕುಂ ॥
ಕರಿತಿಲದ ಕಾಳಿಗಂದುನೆಲ್ ।
ಕರಿಕೂದಲ್ಮೊನೆಗೆ ವೊಂದು ಸಾಸಿವೆಯಕ್ಕುಂ ॥

ಸೂತ್ರಂ-೩೪ ಗತಿಯುತುಕಾಳ್ ಕರ್ಣಾಟದ ।
ಅತಿಶಯದಿಂ ಜೋಡುಯೆಂಬ ನಾಮವದಕ್ಕುಂ ॥
ಪ್ರತಿಜೋಡು ದ್ವಾದಶವರೆಗಿದ್ದನ ।
ಗತಿಗಿದ್ದನವಾಗೆ ಸೊಲಗೆ ತಪ್ಪದು ಗಣಕಾ ॥

ಟೀಕು ॥ ನೆಲ್ಲಕಾಳು ೬೪ ಯೆಂಬುದು ಕರ್ಣಾಟಕದ ಜೋಡುವೊಂದು ಎನಿಸುವುದು. ಯಿಂಥಾ ಜೋಡು ೧೨||ಗೆ ನೆಲ್ಲಕಾಳು ೮೦೦ಯಿದು ವೊಂದುಗಿದ್ದನ ಅಳತೆಯ ನೆಲ್ಲಕಾಳಕ್ಕುಂ— ಯಿಂಥಾಗಿದ್ದನ ೪ಕ್ಕೆ ನೆಲ್ಲು ೩೨೦೦ಕ್ಕೆ ಸೊಲ್ಲಗೆ ೧ ಅಹುದು ಇಂಥಾ ಸೊಲ್ಲಗೆ ೪ಕ್ಕೆ ನೆಲ್ಲು ೧೨೮೦೦ಕ್ಕೆ ಮಾನ ೧ಕ್ಕು ಯಿಂಥಾ ಮಾನ ೪ಕ್ಕೆ ನೆಲ್ಲು ೫೧೨೦೦ಕ್ಕೆ ಬಳ್ಳ ೧ ಎನಿಸುವುದು. ಇಂಥಾ ಬಳ್ಳ ೪ಕ್ಕೆ ನೆಲ್ಲಕಾಳು ೨೦೪೮೦೦ಕ್ಕೆ ಕೊಳಗ ೧ ಎನಿಸುವುದು. ಇಂಥಾ ಕೊಳಗ ೨೦ಕ್ಕೆ ನೆಲ್ಲಕಾಳು ೪೦೯. (೬೦೦೦ ನೆಲ್ಲಕಾಳು ಒಂದು ಖಂಡುಗವೆನಿಸುವುದು) ಶಾಸ್ತ್ರಪ್ರಮಾಣದಲ್ಲಿ ಕಟ್ಟಿದ ಅಳತೆಯ ಪ್ರಮಾಣವಕ್ಕುಂ. ಈ ಖಂಡುಗವೆಂಬುದಯ್ದು ಚಿಟ್ಟನ ಖಂಡುಗವೆನಿಸುವುದು. ಈ ಚಿಟ್ಟನ ಖಂಡುಗವ ತ್ರಿಗುಣಿಸಿದರೆ..........ಅಹುದು ತಪ್ಪದು.

ಖಂಡುಗಕ್ಕೆ ಉದ್ದುಹೆಸಱಿಕಾಳ ಕಾಂಬರೆ :—

ಸೂತ್ರಂ-೩೫ ಸೊಲ್ಲಗೆಗೆ ಶಶಿಗೆ ಮಾಷಂ ।
ಬಲ್ಲಂತೆಯೆ ಪೇಱ ನೀನು ತಪ್ಪದೆ ಬಱಿಕಂ ॥
ನಿಲ್ಲದೆ·ಗಗನಾಂಬರಾಬ್ಧಿಯು ।
ಅ .. ............................ ॥

ಟೀಕು ॥ ಸೊಲ್ಲಗೆಗಕ್ಕೆ ಉದ್ದಿನ ಕಾಳುಗಳು ೩೪ (೦೦) ಯಿದನು ೪ ಱಿಂದ ಗುಣಿಸಲು ೧೩೬೦೦ ಬಹುದು. ಯಿದು ಒಂದು ಮಾನದ ಲೆಕ್ಕವಕ್ಕುಂ. ಯಿಾ ಮಾನದ ಲೆಕ್ಕವನು ೪ಱಿಂದ ಗುಣಿಸಲು ಬಂದುದು ೫೪೪೦೦. ಬಳ್ಳದ ಲೆಕ್ಕವನು ೪ ಱಿಂದ ಗುಣಿಸಲು ೨೧೭೬೦೦ ಬಹುದು. ಯಿದು ಕೊಳಗದ ಲೆಕ್ಕವಕ್ಕುಂ. ಯಿಾ ಕೊಳಗದ ಲೆಕ್ಕವನು ಯಿಪ್ಪತ್ತು ಕೊಳಗದಲ್ಲಿ (೨೦)ಱಿಂ ಗುಣಿಸಲು ೪೩೫೨೦೦ ಉದ್ದಿನ ಕಾಳಕ್ಕುಂ. ಇದು ಒಂದು ೧ ಖಂಡುಗಕ್ಕೆ ಬಂದ ಉದ್ದಿನ ಕಾಳಿನ ಲೆಕ್ಕವಕ್ಕುಂ.

ಸೂತ್ರಂ-೩೬ ಗಿದ್ದನ ಶಶಿಗಂ ಮುದ್ಗವು ।
ಯಿದ್ದ ನಿತಂ ಪೇಱ ನೀನು ಕಾಳಿನ ಸಂಖ್ಯೆಯ ॥
ಸದ್ಯದೊಳೊಂಭಯ್ನೂಱುಂ ।
ಬುದ್ಧಿಯೊಳಂ ತಿಳಿಯಪೇಱ ರಾಜಾದಿತ್ಯ ॥

**ಟೀಕು||** ಗಿದ್ದನ ೧ಕ್ಕೆ ಹೆಸಱಿಕಾಳು ೯೦೦ ಯಿದನು ೪ಱಿಂದ ಗುಣಿಸಲು ಬಂದುದು ೩೬೦೦ ಯಿದು ಸೊಲ್ಲಗೆ ೧ಕ್ಕೆ ಆಯಿತು. ಯಿಾ ಸೊಲ್ಲಗೆಯ ಲೆಕ್ಕವನಿಕ್ಕಿ (೪) ಱಿಂದ ಗುಣಿಸಲು ೧೪೪೦೦ ಆಯಿತು. ಯಿದು ೧ ಮಾನಕ್ಕೆ ಆಯಿತು. ಈ ಮಾನದ ಲೆಕ್ಕವನಿಕ್ಕಿ ೪ ಱಿಂದ ಗುಣಿಸಲು ಬಂದುದು ೫೭೬೦೦ಯಿದು ೧ ಬಳ್ಳಕ್ಕೆ ಬಂದ ಕಾಳಕ್ಕುಂ. ಈ ಬಳ್ಳದ ಲೆಕ್ಕವನಿಕ್ಕಿ ೪ಱಿಂದ ಗುಣಿಸಲು ೨೩[೦೪]೦೦ ಬಹುದು. ಯಿದು ಕೊಳಗಕ್ಕೆ ಬಂದ ಲೆಕ್ಕವಕ್ಕುಂ. ಯಿಾ ಕೊಳಗದ ಲೆಕ್ಕವನಿಕ್ಕಿ ೨೦ ಱಿಂದ ಗುಣಿಸಲು ೪೬೦೮೦೦ ಹೆಸಱಿಕಾಳಕ್ಕುಂ.

ಸುವರ್ಣ ಪರಿಭಾಷೆ–ಯೋಜನ ಪರಿಭಾಷೆ

**ಸುವರ್ಣ ಪರಿಭಾಷಾ ಸೂತ್ರಂ :—**

**ಸೂತ್ರಂ–೩೭**
ಕರಿಯಣುವದೊಂದು ರೇಣುವು |
ಕರಿರೇಣುಗಳಕ್ಕುಮೊಂದು(ರೋ)ಮದ ತುದಿಯುಂ ||
ಕರಿ ರೋಮಾಗ್ರಂ ಸಾಸಿವೆ |
ಕರಿಸಾಸಿವೆಯಾಗಲೊಂದು ನೆಲ್ಲೆನಿಸಿರ್ಕುಂ ||

**ಸೂತ್ರಂ–೩೮**
ಕರಿನೆಲ್ಲಿಗೊಂದು ವೀಸಂ |
ಕುಸುಮಾಸ್ತ್ರದ ನೆಲ್ಲಿಗೊಂದು ಪಾಗಮದಕ್ಕುಂ ||
ವಿಷನಿಧಿ ಪಾಗಕೊಂದು ಪಣಂ |
ದಶಪಣದಿಂದಂ ಪೊನ್ನುಮೊಂದು ತಪ್ಪದು ಗಣಕಾ ||

**ಯೋಜನ ಪರಿಭಾಷೆ :—**

**ಸೂತ್ರಂ–೩೯**
ಕರಿಯಣುವದೊಂದು ರೇಣುವು |
ಕರಿರೇಣುಗಳಕ್ಕುಮೊಂದು ರೋಮದ ತುದಿಯುಂ ||
ಕರಿರೋಮಾಗ್ರಂ ಸಾಸಿವೆ |
ಕರಿಸಾಸಿವೆಯಾಗಲೊಂದು ಜವೆಯೆನಿಸಿರ್ಕ್ಕುಂ ||

**ಸೂತ್ರಂ–೪೦**
ಕರಿಜವೆ ಯಾಗಲ್ಕಂಗುಲ |
ನಿರತಂಗುಲ ಫೆ(ಗೆ)ೕಣಿಗೆದುವೆ ಪನ್ನೆರಡಕ್ಕುಂ ||
ಶರನಿಧಿ ಗೇಣಿಗೆ ಹಸ್ತಂ |
ಶರಧಿಯ ಹಸ್ತಂಗಳೊಂದು ದಂಡಮೆನಿಕ್ಕುಂ ||

**ಸೂತ್ರಂ–೪೧**
ಎರಡುಂ ಸಾಸಿರ ದಂಡಂ |
ನಿರುತಂ ತಾನೊಂದು ಕ್ರೋಶ ನಾಲ್ಕುಂ ಕ್ರೋಶಂ ||
ಪರಿವಿಡಿ ಯೋಜನ... |
.................................ಗಣಿತ ವಿಳಾಸಾ ||

ಸೂತ್ರಂ-೪೨ ಪುರುಷ ಪ್ರಮಾಣಮೆಂತೆನೆ ।
ಪುರುಷಂ ತನ್ನೆರಡುಕೆಯ್ಯ ಮೇಲಕ್ಕೆತ್ತಲ್ ॥
ಪುರುಷ ಪ್ರಮಾಣ ಮೆನಿಸುಗು ।
ಪರಮಾರ್ಥಂ ತಪ್ಪದೆಂದ ರಾಜಾದಿತ್ಯಂ ॥

[ ಶಕನೃಪಕಾಲಮಂಕಾಂಬರೆ ]

(ಸಂ) ಆರ್ಯಾ ॥........ರಷ್ಟಾದಶ ಗುಣಿತಂ...।...ಪಗತಸಂವತ್ಸರೇಣ ಸಮ್ಮಿಶ್ರಂ ॥
ನವಗಗನಾಬ್ಧಿಸಮೇತಂ । ಶಕನೃಪಕಾಲಂ ವಿಜಾನೀಯಾತ್ ॥

ಟೀಕು ॥ ಷಷ್ಟಿಯೆಂದರೆ ೬೦ಸಿಕ್ಕಿ ಅಷ್ಟಾದಶ ಎಂದರೆ ೧೮ರಿಂ ಗುಣಿಸಿ, ವ್ಯಪಗಪತ್ಸರೇಣ ಸಮ್ಮಿಶ್ರಂ ಎಂದರೆ ಹಿಂದಕ್ಕೆ ಹೋದ ಪ್ರಭವಸಂವತ್ಸರ ಆದಿಯಾಗಿ ಯಿಾ ಕಾಲೋಚಿತಕ್ಕೆ ನಡೆವ ಶಾರ್ವರಿ ಸಂವತ್ಸರಪರಿಯಂತಎಣಿಸಲಾಗಿ ೩೪ ಆಯಿತು ಇವನು ಕೂಡಿ........ಗೆ, ನವಗಗನಾಬ್ಧಿ ಸಮೇತಂ ಎಂದರೆ ೪೦೯ ನುಕೂಡಲು ೧೫೨೩ ಬಹುದು. ಯಿದೀಗ ಶಾಲಿವಾಹನ ಶಕವರುಷವಕ್ಕು ತಪ್ಪದು. ಹಿಂದೆ ಹೆಚ್ಚುಗುಣಿಸಿದ ಹಾರ ೧೮೫ವೊಳಗೆ ಪ್ರಭವಾದಿಯಾಗಿ ಕ್ಷಯಸಂವತ್ಸರಕ್ಕೆ ೪೦ ಸಂವತ್ಸರ ಮುಗಿದರೆ೧ ಕೂಡಲು ೧೯ ಅಹುದು. ಯಿದು ಅಱುವತ್ತ ಹೆಚ್ಚುಗುಣಿಸುವ ಹಾರವಕ್ಕು. ಯಿಾ ಪ್ರಕಾರದಲ್ಲಿ ಅಱುವತ್ತು ಸಂವತ್ಸರ ಮುಗಿಯಿತು. ಎಂವರೆ ಹಿಂದಣ ೧೯೫ ವೊಳಗೆ ಒಂದೊಂದ ಹೆಚ್ಚಿಸಿ ಕೂಡಿಕೊಂಡು ಗುಣಿಸುಪ ಹಾರವ ಮುಡಿಯಿಕ್ಕಿ ಹೆಚ್ಚ ಗುಣಿಸಿಕೊಂಡು ಬಹುದು. ಬಱಿಕವಿಕ್ಕಾದ ಲೆಕ್ಕಗಳ ಕೂಡುವುದೆಲ್ಲಾ ಹಿಂದಣ ಮರಿಯಾದೆಯಲ್ಲಿ ಕೂಡಲು ಶಾಲಿವಾಹನ ಶಕವರುಷಗಳು ತಪ್ಪದೆ ಬಹುದು.

ಅಕ್ಷೌಹಿಣೀ ಬಲವ ಚತುರಂಗಬಲವ ಕಾಂಬರೆ ಗುಣಿತದ ವಿವರ

—ಅಮರಸಿಂಹದೊಳಗೆ ಎರಡನೆಯ ಕಾಂಡದಲ್ಲಿ ಕ್ಷತ್ರಿಯ ವರ್ಗದಲ್ಲಿ ಹೇಳಿದ ಗ್ರಂಥ—

ಶ್ಲೋ ॥ ಏಕೇಭೈಕರಥತ್ರ್ಯಶ್ವಂ ಪತ್ತಿಃ ಪಂಚಪದಾತಿಕಾ ॥
ಪ್ರತ್ಯಂಗ್ಯೈ ಸ್ತ್ರಿಗುಣ್ಯೈಸ್ಸರ್ವೈಃ ಕ್ರಮಾದಾಖ್ಯಾ ಯಥೋತ್ತರಂ ॥
ಸೇನಾಮುಖಂ ಗುಲ್ಮಗಣೌ ವಾಹಿನೀ ಪೃತನಾ ಚಮೂಃ ॥
ಅನೀಕಿನೀ ದಶಾನೀಕಿನ್ಯಕ್ಷೌಹಿಣ್ಯ(ಥ ಸಂಪದಿ) ॥

ಟೀಕು ॥ ಏಕೇಭ ಎಂದರೆ ಆನೆ ೧ ಏಕರಥ ಎಂದರೆ ರಥ ೧ ತ್ರ್ಯಶ್ವಯೆಂದರೆ ಕುದಿರೆ ೩ (ಮೂಱು) ಪಂಚಪದಾತಿಗಾ ಎಂದರೆ ಕಾಲಾಳು ೫ ಯಿವು ನಾಲ್ಕುಬಗೆಯ ಚತುರಂಗ ಬಲವೂ ಒಂದು ಪತ್ತ್ರ್ಯಂಗವೆನಿಸುವುದು. ಯಿಾ ಪತ್ತ್ರ್ಯಂಗ ಬಲದ ಲೆಕ್ಕವನು ಪ್ರತ್ಯೇಕವಾಗಿ ಪ್ರತಿಯಿಟ್ಟು "ತ್ರಿಗುಣ್ಯೈಃ ಸರ್ವೈಃ" ಎಂದರೆ ಮೂಱಱಿಂದ ಗುಣಿಸಲು ಬಂದ ಲಬ್ಧ ಆನೆ ೩ ರಥ ೩ ಕುದಿರೆ ೯ ಕಾಲಾಳು ೧೫ ॥ ಇದು ಸೇನಾಮುಖವೆಂಬ ಬಲವಹುದು ॥ ಯಿಾ ಸೇನಾಮುಖದ ಲೆಕ್ಕವನಿಕ್ಕಿ ಮತ್ತೊಮ್ಮೆ ೩ ಱಿಂದ ಗುಣಿಸಲು ಬಂದ ಲಬ್ಧ ಆನೆ ೯ ರಥ ೯ ಕುದಿರೆ ೨೭ ಕಾಲಾಳು ೪೫ ಯಿದು ಗುಲ್ಮವೆಂಬ ಬಲವೆನಿಸುಗುಂ. ಯಿಾ ಗುಲ್ಮವೆಂಬ ಬಲದ ಲೆಕ್ಕವನಿಕ್ಕಿ ಮತ್ತೊಮ್ಮೆ ೩ಱಱಿಂದೆ ಗುಣಿಸಲು ಬಂದ ಲಬ್ಧ ಆನೆ ೨೭ ರಥ ೨೭ ಕುದಿರೆ ೮೧ ಕಾಲಾಳು ೧೩೫. ಯಿದು

ಗಣವೆಂಬ ಬಲವೆನಿಸುವುದು. ಈ ಗಣವೆಂಬ ಬಲದ ಲೆಕ್ಕವನಿಕ್ಕಿ ಮತ್ತೊಮ್ಮೆ ೩ರಿಂದ ಗುಣಿಸಲು ಬಂದ ಲಬ್ಧ ಆನೆ ೮೧ ರಥ ೮೧ ಕುದಿರೆ ೨೪೩ ಕಾಲಾಳು ೪೦೫. ಇದು ವಾಹಿನಿಯೆಂಬ ಬಲವಹುದು. ವಾಹಿನಿಯೆಂಬ ಲೆಕ್ಕವನಿಕ್ಕಿ ಮತ್ತೊಮ್ಮೆ ೩ರಿಂದೆ ಹೆಚ್ಚಿ ಗುಣಿಸಲು ಬಂದ ಲಬ್ಧ ಆನೆ ೨೪೩ ರಥ ೨೪೩ ಕುದಿರೆ ೭೨೯ ಕಾಲಾಳು ೧೨೧೫ ಯಿದು ೧ [ಪೃತನೆಯೆಂಬ ಬಲವೆನಿಸು ಈ ಪೃತನೆಯೆಂಬ ಬಲದ ಲೆಕ್ಕವನಿಕ್ಕಿ ಮತ್ತೊಮ್ಮೆ ೩]ರಿಂದೆ ಗುಣಿಸಲು ಬಂದ ಲಬ್ಧ ಆನೆ ೭೨೯ ರಥ ೭೨೯ ಕುದಿರೆ ೨೧೮೭ ಕಾಲಾಳು ೩೬೪೫ ಯಿದು ಒಂದು ಚಮೂ ಎಂಬ ಬಲಮಕ್ಕು. ಈ ಚಮೂ ಎಂ[ಬ ಬಲದ ಲೆಕ್ಕವನಿಕ್ಕಿ ಮತ್ತೊಮ್ಮೆ ೩ ರಿಂ ಗುಣಿಸಲು ಬಂಗ ಲಬ್ದ ಆನೆ ೨೧೮೭ ರಥ] ೨೧೮೭ ಕುದಿರೆ ೬೫೬೧ ಕಾಲಾಳು ೧೦೯೩೫. ಯಿದು ೧ ಅನೀಕಿನಿಯೆಂಬ ಬಲವಕ್ಕುಂ. ಈ ಅನೀಕಿನಿ ಎಂಬ ಬಲದ ಲೆಕ್ಕವನಿಕ್ಕಿ ದಶಾನೀ[ಕಿನಿ ಮತ್ತೊಮ್ಮೆ ೧೦ರಿಂದ ಗುಣಿಸಲು ಬಂದ ಲಬ್ಧ] ಆನೆ ೨೧೮[೭೦ ರಥ]೨೧೮೭೦ ಕುದಿರೆ ೬೫೬೧೦ ಕಾಲಾಳು ೧೦೯೩೫೦. ಇದು ೧ ಅಕ್ಷೌಹಿಣಿ ಬಲದ ಮಿತವೆನಿಸುವುದು. ಯೀ ನಾಲ್ಕು ೪ ಬಲದ ಆನೆ| ರಥ| ಕುದಿರೆ| ಕಾಲಾಳು ಯಿಷ್ಟು...........ಗೂಡಲು ೨೧೮೭೦೦ ......ಯೀ ಅಕ್ಷೌಹಿಣಿಗೆ ಬಂದ ಚತುರಂಗ ಬಲದ ವೊಟ್ಟು ಲೆಕ್ಕ ವಕ್ಕು ತಪ್ಪದು ಪಾಂಡವರ ೭ ಅಕ್ಷೌಹಿಣಿ ಬಲದ ಲೆಕ್ಕವಕಾಂಬರೆ ವಿವರ ಒಂದು (೧) ಅಕ್ಷೌಹಿಣಿ ಬಲಕ್ಕೆ ಬಂದ ಆನೆ, ರಥ, ಕುದಿರೆ, ಕಾಲಾಳು ಯೀ ನಾಲ್ಕು ೪ ಬಗೆಯ ಬಲದ ಲೆಕ್ಕವನು ಬೇಱೆ ಬೇಱೆ ಪ್ರತಿಯಿಟ್ಟು ೭ರಿಂದ ಹೆಚ್ಚಿ ಗುಣಿಸಲು ಬಂದ ಲಬ್ಧಗಳು ಆನೆ ೧೫೩೦೯೦, ರಥ ೧೫೩೦೯೦, ಕುದಿರೆ ೪೫೯೨೭೦, ಕಾಲಾಳು ೭೬೫....೫೦ ಯೀ ೭ ಅಕ್ಷೌಹಿಣಿಗ ಬಂದ ಬಲಗಳನು ಒಟ್ಟುಗೂಡಲು ಬಂದ ಲಬ್ಧ ೧೫೩೦೯೦೦, ಕೌರವನ ೧೧ ಅಕ್ಷೌಹಿಣೀ ಚತುರಂಗ ಬಲದ ಮಿತವ ಕಾಂಬರೆ ಗುಣಿತದ ವಿವರ. ಹಿಂದೆ ೧ ಅಕ್ಷೌಹಿಣಿಗೆ ಬಂದ ಆನೆ, ರಥ, ಕುದಿರೆ, ಕಾಲಾಳು ಈ ೪ ಬಲದ ಲೆಕ್ಕವನಿಕ್ಕಿ ಪ್ರತ್ಯೇಕ ಪ್ರತ್ಯೇಕವಾಗಿ ೧೧ರಿಂದ ಹೆಚ್ಚಗುಣಿಸಲು ಬಂದ ಲಬ್ಧಗಳು ಆನೆ ೨೪೦೫೭೦ ರಥ ೨೪೦೫೭೦ ಕುದಿರೆ ೭೨೧೭೧೦ ಕಾಲಾಳು ೧೨೦೨೮೫೦ ಯೀ ೧೧ ಅಕ್ಷೌಹಿಣಿಗೆ ಬಂದ ಚತುರಂಗ ಬಲವೆನಿಸುವುದು. ಯೀ ೪ ಬಲವನು ಒಟ್ಟುಗೂಡಲು ಬಂದ ಲಬ್ಧ ೨೪೦೫೭೦೦.

....ಘಳಿಗೆಯ ಕಾಂಬರೆ ಪಾದ...

ಶಶಿಷೋಡಶಂ ದ್ವಾದಶಂ ದಶಮಂ ಚಾಷ್ಟ ಸಪ್ತ ಷಟ್ ಭೂತಮೇವಚ|| ಶರಧಿ ತ್ರೀಣಿ
ದ್ವಯಂ ರೂಪಂ ಪಾದಾರ್ಧಂ ಘಟಕೋದಯಂ ||

ಟೀಕು ||.................ಮಧ್ಯಾಹ್ನ ಪರಿಯಂತರ ತನ್ನ ಹಜ್ಜೆಯಲ್ಲಿ ಅಳೆಯಲಾಗಿ ಅದಷ್ಟು ಹಜ್ಜೆಗೆ ಘಳಿಗೆಯ ಹೇಳುವ ವಿವರ ||

| | | |
|---|---|---|
| ಹಜ್ಜೆ ೮೧ಕ್ಕೆ ಘಳಿಗೆ ೧ | ಹಜ್ಜೆ ೮ಕ್ಕೆ ಘಳಿಗೆ ೭ | ಹಜ್ಜೆ ೪ಕ್ಕೆ ಘಳಿಗೆ ೧೧ |
| ಹಜ್ಜೆ ೩೯ಕ್ಕೆ ಘಳಿಗೆ ... | ಹಜ್ಜೆ ೭ಕ್ಕೆ ಘಳಿಗೆ ೮ | ಹಜ್ಜೆ ೩ಕ್ಕೆ ಘಳಿಗೆ ೧೨ |
| ಹಜ್ಜೆ ೧೬ಕ್ಕೆ ಘಳಿಗೆ ೪ | ಹಜ್ಜೆ ೬ಕ್ಕೆ ಘಳಿ.. ೯ | ... ೨ಕ್ಕೆ .......೧೩ |
| ಹಜ್ಜೆ ೧೨ಕ್ಕೆ ಘಳಿಗೆ ೫ | ಹಜ್ಜೆ ೫ಕ್ಕೆ ಘಳಿಗೆ ೧೦ | ಹಜ್ಜೆ ೧ಕ್ಕೆ ........೧೪ |
| ಹಜ್ಜೆ ೧೦ಕ್ಕೆ ಘಳಿಗೆ ೬ | | ಹಜ್ಜೆ ಅರ್ಧಕ್ಕೆ ೧೫ |

ಮಧ್ಯಾಹ್ನದಿಂದಂ ಮೇಲೆ ಮೊದಲ ಪ್ರಕಾರದಲ್ಲಿ ತನ್ನ ನೆಳಲ ಹಜ್ಜೆಯನು.................ಳಗೆ ಹಾಗೆ ಬೇಳೆ...ಲ್ಲಿ ಘಳಿಗೆಗಳು ಕೂಡಿ ಒರಲಿಲ್ಲ ಯಿದು ಸಾಧಾರಣ ಮಾತ್ರವಕ್ಕು.

ಸೂತ್ರಂ-೪೩ ವಿಘಳಿಗೆಗಳು ಕೂಡಿ ಬಹ(ಸ)ದ ಛಾಯಕ್ಕೆ ।
.............................. ॥
..............................ವಿಘಳಿಗೆ ॥

ಟೀಕು ॥ ಸೂರ್ಯೋದಯವಾದುದು ಆರಭ್ಯವಾಗಿ ತನ್ನ ನೆಳಲ (ನ್ನು) ತನ್ನ ಹಜ್ಜೆಯಲ್ಲಿ ಅಳೆದುಕೊಂಡು ಆದಷ್ಟನು ಯಿಮ್ಮಡಿಸಿ ಅದಱೊಳಗೆ ೧೧ ಒಡಗೂಡಿ ಮೇಲೆ ಯಿಟ್ಟು ಕೆಳಗೆ ಹಿಂದ[ಣ ಭಾ]ಗಿಸುವ ಹಾರದ ಲೆಕ್ಕವನಿಕ್ಕಿ ೬೦ಕ್ಕೆ ಭಾಗಿಸಲು ಬಂದ ಲಬ್ಧವೇ ಘಳಿಗೆಯಕ್ಕುಂ ಸಂದಶೇಷವೇ ವಿಘಳಿಗೆಯಕ್ಕುಂ.

...ಇಂತು ಓಜಾಸೂತ್ರಗಳು...

—(ರಾಜಾದಿತ್ಯ ಗಣಿತ)—

ಇನ್ನು ಮುಂದೆ ರಾಜಾದಿತ್ಯದ ಗಣಿತದಲ್ಲಿ ತ್ರಯಿರಾಶಿಕ, ಬೆಸ್ತ್ರತ್ರಯಿರಾಶಿಕ, ಪಂಚರಾಶಿಕ, ಬೆಸ್ತ ಪಂಚರಾಶಿಕ, [ಸಪ್ತರಾಶಿಕ, ಬೆಸ್ತ ಸಪ್ತರಾಶಿಕ, ನವರಾ]ಶಿಕ ಬೆಸ್ತನವರಾಶಿಕ....

ಓಜಾಸೂತ್ರಂ—

ಸೂತ್ರಂ—೧ ಇಚ್ಚೆ ಫಲಂ ಪ್ರಮಾಣಮೆಂಬಿವು ।
ನಿಚ್ಚಲು ತಾಂ ಮೂಱುರಾಶಿ ಪೆಸರಿವು ಸಿರುತಂ ॥
ಯಿಚ್ಚೆಯನು ಪಳದಿ ಗುಣಯಿಸಿ ।
ಬೆಚ್ಚರದಿಂ ಪವಣೊಳೊತ್ತೆ ಮಧ್ಯದ ಫಲಮುಂ ॥

ಟೀಕು ॥ ಬಲದ ಭಾಗ ಆದಿಯಾಗಿ ಯಿಚ್ಚೆಯೆಂಬುದೆ ಪ್ರಥಮರಾಶಿ, ಫಳಮೆಂಬುದೆ ಮಧ್ಯ ರಾಶಿ, ಪ್ರಮಾಣಮೆಂಬುದೆ ಕಡೆಯ ರಾಶಿ—ಯೆಂದು ತಿಳಿದುಕೊಂಬುದು. ಇಚ್ಛಾರಾಶಿಯಲ್ಲಿ ಹೊನ್ನು ಇದ್ದು ಪ್ರಮಾಣದ ರಾಶಿಯಲ್ಲಿ ಕಾಣಿಯಿದ್ದರೆ ಇಚ್ಛಾರಾಶಿಯ ಹೊನ್ನನು ಕಾಣಿ ಪರಿಯಂತರಮಾಡಿ ಯಿರಿಸುವುದು. ಬಳಿಕ ಪ್ರಮಾಣದ ರಾಶಿಯಲ್ಲಿ ಹೊನ್ನು ಯಿದ್ದು ಇಚ್ಛಾ ರಾಶಿಯಲ್ಲ ಕಾಣಿಯದ್ದರೆ ಪ್ರಮಾಣದ ರಾಶಿಯನ್ನು ಕಾಣಿಯ ಮಾಡಿ ಯಿರಿಸುವುದು. ಫಳದ ರಾಶಿಯ ಕಡೆಯಲ್ಲಿ ಏನು ತೋಱಯಿದ್ದಿತು ಅಷ್ಟನೂ ತೋರಿದ ಲೆಕ್ಕ ಪರಿಯಂತರಮಾಡಿ ಮಧ್ಯರಾಶಿಯ ಕೆಳಗೆ ಪ್ರತಿಯಿಡುವುದು. ಯಿಾ ಪ್ರಕಾರದಿಂದ ಮೂಱು ರಾಶಿಗಳನೂ ಕ್ಷೀಣಾಧಿಕ ಗಳ ವಿಚಾರಿಸಿ ಎಲ್ಲವನೂ ಸಮರಾಶಿ...........ಫಳದ ರಾಶಿಯಿಂದ ಹೆಚ್ಚ ಗುಣಿಸಿ ಪ್ರಮಾಣದ ರಾಶಿಯನು ಹಾರವಮಾಡಿ ಕೆಳಗಿಕ್ಕಿ ಭಾಗಿಸಲು ಬಂದ ಲಬ್ಧ ಮಧ್ಯರಾಶಿಯಲ್ಲಿ ಪ್ರತಿಯಿಟ್ಟ ಫಲವಹುದು—ತಪ್ಪದು.

ಸೂತ್ರಂ-೨ ಜಿನಗೃಹಕೆ ಬಾಣಶಶಿಗಂ |
ಕನಕಮನಱುವತ್ತ ಕೊಡಲು ಆ ಲೆಕ್ಕದೊಳಂ ||
ಶೂನ್ಯಾಂಬರಾಬ್ಧಿ ಗ್ಲೌಬಸ್ತಿ |
ಗೆನಿತಹುದಂ ಪೇೞೆಮೆಂದ ರಾಜಾದಿತ್ಯಂ ||

ವೊಡ್ಡು || ಬಸ್ತಿ ೧೫ಕ್ಕೆ ಗದ್ಯಾಣ ೬೦ ಯಿಾ ಬಸ್ತಿಗಳು ೧೪೦೦ಗೆ ....... ಲಬ್ಧ ಗ ೫೬೦೦ ಹಾರ ೧೫ ಗುಣಕಾರ ೮೪೦೦೦

ಅಡಕೆಲೆಯ ಪ್ರತಿಪಲ್ಲಟಕ್ರಯಸೂತ್ರಗಳು—

ಸೂತ್ರಂ-೩ ನಿರುತಮಿರ್ಛಾಸಿರದಯ್ವತ್ತಡಕೆ |
ಭರವಸದಯ್ಸಾಸಿರದೇೞನೂಱೆಲೆಯಾಗಲ್ ||
ಪುರಸಾಸಿರದೆಪ್ಪತ್ತಯ್ದಡಕೆಗೆ |
ಭರವಸದಿಂದೆಲೆಯ **ಪೇೞ ಗಣಿತವಿಳಾಸ** ||

ವೊಡ್ಡು || ಅಡಕೆ ೨೦೫೦ಕ್ಕೆ ಎಲೆ ೫೬೦೦ ಲೂ ಅಡಕೆ...೫ಕ್ಕೆ ಎಷ್ಟಾಯಿತ್ತಾ? ಲಬ್ಧ ಎಲೆ ೮೫೫೦ ಹಾರ ೨೦೫೦ ಗುಣಹಾರ ೧೬೫೨೬೫೦೦.

ಸೂತ್ರಂ-೪ ಸಿರಿವಡೆದ ನೂಱು ಎಲೆಗಂ |
ಅರೆವೀಸಂ ಕೂಡಿಯಿರ್ದ ವೀಸಗಳೆರಡುಂ ||
ಪುರಪಣ ಪಾಗಕ್ಕೆಲೆಯುಂ |
ನಿರತದೊಳಂ ಗುಣಿಸಿ ಪೇೞ ಗಣಿತವಿಳಾಸಾ ||

ವೊಡ್ಡು || ಗಂ ೮೦ ವೀಸ....ಲೂ........?—ಲಬ್ಧ ಎಲೆ ೨೬೦೦ ಹಾರ-ಗುಣಕಾರ ೨೬೦೦೦

ಸೂತ್ರಂ-೫ ವಸುಭಾಗದ ಹೋೞ್ ಒಂದಕೆ |
ವಸುಪರ್ಣಂ ಮಾಱುತಿರಲ್ ಕೊಂಬಾ ಲೆಕ್ಕದಿ ||
ವಸುನೂಱು ಅಡಕೆಗೆ ಎಲೆ |
ವಸುಧೇಶಂ ಮೆಚ್ಚೆಪೇೞ [ಗಣಿತವಿಳಾಸಾ] ||

..........................................................ಕೆ ೮೦೦ ಕ್ಕೆ ಎಷ್ಟಾಯಿತ್ತಾ?
ಲಬ್ಧ ಎಲೆ ೫೧೨೦೦ ಹಾರ ೧ ಗುಣಕಾರ ೫೭೨೦೦.

ಸೂತ್ರಂ-೬ ಹತ್ತೆಲೆಗಡಗೂ....ದುಂ ಕಾಲುಂ |
ಬಿತ್ತರಿಸಿದ ಎಲೆಯು ಯಿಪ್ಪತಯ್ದು ಸಾಸಿರಕಂ ||
ಮತ್ತೆ ಅಡಕೆ ಎನಿತುಯೆಂಬುದು |
........ಗುಣಿಸಿ ಪೇೞ ರಾಜಾದಿತ್ಯ ||

ವೊಡ್ಡು || ಎಲೆ ೧೨ಕ್ಕೆ ಅಡಕೆ ೧|ಲೂ ಎಲೆ ೨೫೦೦೦ಕ್ಕೆ ಎಷ್ಟಾಯಿತ್ತಾ? ಲಬ್ಧ ಅಡಕೆ.... ....೦೩೧೨೫ ಪ್ರಥಮ ಹಾರ ೧೦ ದ್ವಿತೀಯ ಹಾರ ೪ ಗು...ಹಾರ ೧೨೫೦೦೦|

....ಅಡಕೆಲೆಯ ಪ್ರತಿಪಲ್ಲಟ ಸೂತ್ರಗಳು ಸಮಾಪ್ತಂ....

ಇನ್ನು ಮುಂದೆ ಮೆಣಸಿನ ಕ್ರಯಕ್ಕೆ ಸೂತ್ರಂಗಳ್—

ಸೂತ್ರಂ—೭ ಈರಯ್ದು ಪೊಂಗೆ ಮೆಣಸುಂ |
ಯಿಾರೆಂಟುಂ ಕೊಳಗಮಾಗಲೇೞ್ವರೆ ಪೊಂಗಂ ||
ಬೇೞಾಗಿಯೆ ಕ್ರಯಗೊಂಡುದ |
ನೀೞಾ ನೀಂ ತಿಳಿಯೆ ಪೇೞ ಗಣಕನಿಧಾನಾ ||

ವೊಡ್ಡು|| ಗ ೧೦ಕ್ಕೆ ಮೆಣಸು ಖಂ ೧ಲೂ ಗ ೭||ಕ್ಕೆ ಎಷ್ಟಾಯಿತ್ತಾ ? ಲಬ್ಧಮೆಣಸು ಖಂ ೨ ಹಾರ...೦೦ ಗುಣಕಾರ ೧೨೦೦.

ಸೂತ್ರಂ—೮ ಇಮ್ಮನವರೆ ಮೆಣಸಿಂಗಂ |
ವೊಮ್ಮೆಯು ಪಣವೊಂದುಪಾಗಮ್ಮೆವಣವೆಕ್ಕುಂ ||
ಘಮ್ಮನೆ ಪೇೞ್ ಮೆಣಸೆನಿತ್ತೈ |
ನಿರ್ಮಳಗುಣನಿಳಯ ರಾಜವರ್ಮಂ ಮೆಚ್ಚಲ್ ||

ವೊಡ್ಡು|| ಗ.......೧|||....ಮೆಣಸು ಮಾನ ೨|| ಲೂ ಗ–||೦||ಕ್ಕೆ ಎಷ್ಟಾಯಿತ್ತಾ? ಲಬ್ಧ...

ಇನ್ನು ಮುಂದೆ ಬೆಲ್ಲದ ಕ್ರಯಕ್ಕೆ ಸೂತ್ರಂ—

ಗುಡಕ್ರಯಕ್ಕೆ ಸೂತ್ರಂ—

ಸೂತ್ರಂ—೯ ಹಣ ಹಾಗಕ್ಕಯ್ನೂೞಾಗಲ್ |
ಹಣಹಾಗಂ ವೀಸಸಹಿತ ಲಕ್ಕಂ ಪೊಂಗೀ ||
ಕ್ಷಣದಿಂ ಗುಣಿಯಿಸಿ ಪೇೞಾ |
ತ್ರಿಣಯನ ನಿಜಭಕ್ತನೆನಿಪ ಗಣಕಸುಜಾಣಾ ||

ವೊಡ್ಡು || ಗ ಹ ೧ | ಕ್ಕೆ ಬೆಲ್ಲ ೫೦೦ ಲೂ ಗ ೧೦೦೦......ಕ್ಕೆ ಎಷ್ಟಾಯಿತ್ತಾ ? ಲಬ್ಧ ಬೆಲ್ಲ ೪೦೦೦೦೦ ೫೨೦ ಹ.ರ ೨೫ ಗುಣಕಾರ ೧೦೦೦೦೧ ೧೩೦೦೦ ||

...ಗುಡಕ್ರಯಂ ಸಮಾಪ್ತಂ...

ಇನ್ನು ಮುಂದೆ ಲವಣ ಕ್ರಯಕ್ಕೆ ಸೂತ್ರಂ—

ಸೂತ್ರಂ—೧೦ ಮುಪ್ಪಾಗಂ ಮೂವೀಸ |
ಕ್ಕುಪ್ಪಾಗಲ್ ಅಯಿದುಕೊಳಗಂ ನಿಯತಂ ||
ಇಪ್ಪತ್ತು ಹಣವು ಹಾಗಕೆ |
ತಪ್ಪಿಲ್ಲದೆ ತಿಳಿಯಪೇೞ ರಾಜನವುತದಿಂ ||

ವೊಡ್ಡು ||| ೩ಕ್ಕೆ ಉಪ್ಪು ಖಂ ೦|೦ ಲೂ ಗ ೨–೦|ಕ್ಕೆ ಎಷ್ಟಾಯಿತ್ತಾ ? ಉಪ್ಪು ಖ ೫||೨|| ಪ್ರಥಮ ಹಾರ ೧೮ ದ್ವಿತೀಯ ಹಾರ ೨೦ ಗುಣಕಾರ ೨೦೨೫ ||

ಸೂತ್ರಂ-೧೧ ಹಾಗಕ್ಕೊಬ್ಬಳ ವುಪ್ಪುಂ |
ಬೇಗದೊಳಂ ಕೊಂಡ ವೊನ್ನು ಸಾವಿರಪಣವೊಂ ||
ದೀಗಳೆ ಗುಣಿಯಿಸಿ ಪೇಟಾ |
ಭಾಗಂ ನಿಲದಂತೆ ರಾಜವರ್ಮಂ ಮೆಚ್ಚಲ್ ||

ವೊಡ್ಡು || ೦ | ಕ್ಕೆ ಉಪ್ಪ ಖಂ ೦|೧ ಲೂ ಗ... ೧ ......೦೦-೧ಗೆ ಎಷ್ಟಾಯಿತ್ತ್ಯಾ ?
ಲಬ್ಧ ಉಪ್ಪು ಖಂ ೬೫-೦ ೧| ಹಾರ ೧ ದ್ವಿತೀಯ ಹಾರ ೩೨೦....ರ ೨೦೦೨೦ ||

ಸೂತ್ರಂ-೧೨ ಮನವಪ್ಪಿಗೆರಡು ಕಾಣಿಯು |
ಘಮ್ಮನೆ ಮುನ್ನೂ ಟುಖಂಡುಗದಟುಗೊಳಗೊಳಲ್... ||
...ಮಾನದಿ......... |
ಘಮ್ಮನೆ ನೀಂ ತಿಳಿಯಪೇಟ ರಾಜಾದಿತ್ಯಾ ||

ವೊಡ್ಡು|| ಉಪ್ಪುಮಾನ....ಕ್ಕೆ...ಕಾಣಿ ೨ ಲೂ ಉಪ್ಪು ಖಂ ೩೦೦|೧ಕ್ಕೆ ಎಷ್ಟಾಯಿತ್ತ್ಯಾ?
ಲಬ್ಧ ಗ|| ೨೪೦-೨- ಪ್ರಹಾರ ೧ ದ್ವಿ. ಹಾ......ಗುಣ ೧೯೨೧೯೩||

....ಉಪ್ಪು ಕ್ರಯ ಸಮಾಪ್ತಂ....

ಇನ್ನು ಮುಂದೆ ಜೀವಿತ ಸೂತ್ರಂಗಳ್—

ಸೂತ್ರಂ-೧೩ ವರುಷಂವೊಂದಕೆ ವೊನ್ನಂ |
ಕಂಗಿರಿ ಜೀವಿತವ ಮಾಡಿಕೊಡಲುಂ ಕಡೆಯೊಳ್ ||
ಶರವಾರ್ಧಿದಿನಕೆ ತುಷ್ಟಿಯ |
ಭರವಸದಿಂ ತಿಳಿಯ ಪೇಟ ರಾಜಾದಿತ್ಯ ||

ವೊಡ್ಡು || ವರುಷ ೧ ಕ್ಕೆ ಒಡ್ಡು ೭ ಲೂ ತಿಂಗಳು ೧ ದಿನ ೧೫ ಕ್ಕೆ ಎಷ್ಟಾಯಿತ್ತ್ಯಾ ?
ಲಬ್ಧ ಜೀವಿತ ಗ ೯ ಹಾರ ೩೬೦ ಗುಣಕಾರ ೩೦೨೪೦.

ಸೂತ್ರಂ-೧೪ ಎರಡುಂ ಗದ್ಯಾಣಂ ಪಣ |
ವೆರಡುಂ ವಾಗಂಗಳೆರಡುಮಾಗಲ್ ತಾ ||
ಮೆರಡುಂ ಪಣಮುಮನೀಯಲ್ |
ಭರವಸದಿಂದಂ ದೆವಸಮೆನಿತಕ್ಕಕ್ಕುಂ ||

ವೊಡ್ಡು || ಗ೨ ಹ೨||ಕ್ಕೆ ವರು ೧ ಲೂ ಗ ೨ಕ್ಕೆ ದಿನವೆಷ್ಟಾಯಿತ್ತ್ಯಾ ?—ಲಬ್ಧ ತಿಂಗಳು ೧
ದಿನ ೨ ಹಾರ ೯೦ ಪ್ರಥಮ ಗುಣಕಾರ ೮ ದ್ವಿತೀಯ ಗುಣಕಾರ ೩೬೦.

ಸೂತ್ರಂ-೧೫ ಎರಡುಂ ಗದ್ಯಾಣಂ ಪಣ |
ನಾಲ್ಕುಂ ಕೊಂಡಾತನೊಂದುವರುಷಂ ನಡೆಯಲ್ ||
ನಿರುತಪಣವೆಂಟ ಕೊಂಡವ |
ಭರವಸದಿಂದೆನಿತು ದೆವಸ ನಡೆವಂ ಗಣಕಾ ||

ವೊಡ್ಡು || ಗ ೨ ಪಣ ೪ಕ್ಕೆ ವರುಷ ೧ ಲೂ ಗ ೮ಕ್ಕೆ..................? ಲಬ್ಧ ತಿಂಗಳು ೪ ಹಾರ ೨೪ ಪ್ರಥಮ ಗುಣಕಾರ ೯೬ ||

ಸೂತ್ರಂ–೧೬ ದಿನವೆರಡುಮಾಸವೊಂದಕ |
ಮನುನಯದಿಂ ಪೊನ್ನದೊಂದು ಪಣವೆಂಟಾಗಲ್ ||
ವಿನಯದಿ ವರುಷವದೊಂದಕೆ |
ವ......ಲಿದ ತಿಳಿಯೆಪೇಟಿ ಗಣಿತವಿಲಾಸಾ ||

ವೊಡ್ಡು|| ತಿಂಗಳು ೧ ದಿನ ೨ಕ್ಕೆ ಜೀವಿತ ಗ ೧|| ಹ ೮ ಲೂ ವರುಷ ೧ ಕ್ಕೆ ಎಷ್ಟಾಯಿತ್ತಾ? ಲಬ್ಧ ಗ ೨೦ ಹಣ ೨|| ಪ್ರಥಮ ಹಾರ ೩೨ ದ್ವಿತೀಯ ಹಾರ ೧೦ ಗುಣಕಾರ ೬೪೮.

ಸೂತ್ರಂ–೧೭ ವರುಷಕ್ಕೆ ಜೀವಿತಂ ಪೊ |
ನ್ನೆರಡುಂ ಪಣವೊಂಭತಾಗೆ ಹತ್ತುಂತಿಂಗ ||
ಳ್ವರೆ ನಡೆದು ಮಾಣ್ದವಂಗೊ |
ಪ್ಪಿರೆ ಕೊಡುವೊಡವಂಗೆ ಲೆಕ್ಕಮಂ ಪೇಟಿ್ ಗಣಕಾ ||

ವೊಡ್ಡು || ವರುಷ ೧ಕ್ಕೆ ಜೀವಿತ ಗ ೨ ಪ ೯ ಲೂ| ತಿಂಗಳು ೧೦ ದಿನ ೧೫ಕ್ಕೆ ಎಷ್ಟಾಯಿತ್ತಾ ? ಲಬ್ಧ ಗ ೨||೦|೨|| ಪ್ರಥಮ ಹಾರ ೩೬೦ ದ್ವಿತೀಯ ಹಾರ ೧೦ ಗುಣಕಾರ ೧೩೫ ||

ಸೂತ್ರಂ–೧೮ ವರುಷದ ಮೇಲೆಪ್ಪತ್ತಯ್ದಕೆ |
ಶಗದ್ಯಾಣಂ ಪಣಂಗಳೆಂಟಾಗಲ್ ಮೇಣ್ ||
ಅರೆದಿಂಗಳಿರ್ದು ಮಾಣ್ದಗೆ |
ನಿರುತಂ ಕೊಡುವೊಡೆ......ದಿಂ ||

ವೊಡ್ಡು || ೭೧ ತಿಂ೨ ದಿನ ೧೫ಕ್ಕೆ ಜೀವಿತ ಗ ೫ ಪ ೮ ಲೂ ದಿನ ೧೫ಕ್ಕೆ ಎಷ್ಟಾಯಿತ್ತಾ ? ಲಬ್ಧ ೨ ಪ್ರಥಮ ಹಾರ ೪೩೫ ಗುಣಕಾರ ೮೭೦

....ಜೀವಿತ ಸೂತ್ರಂಗಳ್ ಸಮಾಪ್ತಂ....

ಇನ್ನು ಮುಂದೆ ಕೊಟ್ಟಣದ ಸೂತ್ರಂಗಳ್—

ಸೂತ್ರಂ–೧೯ ನಾಗೊಳ ಗೋಧಿಗೆ (ಕಣಿಕ) ಪ |
ನಾಗಳೆತಾಂ ಅಯಿದುಕೊಳಗದಿಮ್ಮ ನವರೆಯುಂ ||
..................ಸೆ ಗೋಧಿಯ |
ನೀಗಳೆ ತಾಂ(ಸೊ)ಲಗೆ ನೂಱಕೆ ಕಣಿಕಮದೇನ್ನೆ ||

ವೊಡ್ಡು || ಗೋಧಿ ಕೊಳ ೪ಕ್ಕೆ ಕಣಿಕ ೩ ೦|೦ ಮಾ ೨ || ಲೂ ಗೋಧಿ ಸೊಲ್ಲ ೧೦೦ಕ್ಕೆ ಕಣಿಕವೆಷ್ಟಾಯಿತ್ತಾ ?

ಲಬ್ಧ ೩ ೧೨೮||........ಪ್ರ. ಹಾ ೪ ದ್ವಿ...ಹಾರ ೧೨೮೦ ಗುಣಕಾರ ೬೬೦೦೦೦.

ಸೂತ್ರಂ–೨೦ ಕಂ|| ಒಕ್ಕುಳನೆಲ್ಲಿಂ ಗಕ್ಕಿಯ |
ನಿಕ್ಕುವರೊಂಭತ್ತು ಮಾನ ಕೊಟ್ಟಣವುಂ ತಾಂ ||
ಇಕ್ಕಲಱುವತ್ತು ಖಂಡುಗ |
ಕಕ್ಕಿಯತಾವೆನಿತನಳೆವರಾ ಕೊಟ್ಟ[ಣಿಗ]ರ್ ||

ವೊಡ್ದು || ನೆಲ್ಲು....ಕ್ಕೆ ಅಕ್ಕಿ ಖ ||೦........ನೆಲ್ಲು ಖ ೬೦ಕ್ಕೆ ಅಕ್ಕಿ ಎಷ್ಟಾಯಿತ್ತಾ ? ಲಬ್ಧ ಅಕ್ಕಿ ಖಂ ೩೩ ಪ್ರ. ಹಾ ೧ ದ್ವಿ. ಹಾ ೩೨೦, ಗುಣಕಾರ ೧೦೦೫೦೦.

ಸೂತ್ರಂ–೨೧ ಇಕ್ಕುವರೊಬ್ಬಳನೆಲ್ಲಿಂ (ಗಕ್ಕಿಯ) |
ಗೊಕ್ಕುಳ ದೊಮ್ಮನವ ಕೊಡಲು ಆ ಲೆಕ್ಕದೊಳಂ ||
ಲಕ್ಕ ಖಂಡುಗದೊಳಗಂ |
ಸಿಕ್ಕಿದ ನೆಲ್ಲೆರಡುಮಾನ ಕಡೆಯಲೇನಯ್ಯಾ ||

ವೊಡ್ದು || ನೆಲ್ಲು..........ಅಕ್ಕಿ ಖಂ ೧ ಮಾ ೧ ಲೂ ನೆಲ್ಲು ೯೯೯೯ |||೪||| ೨ಕ್ಕೆ ಲಬ್ಧ ಅಕ್ಕಿ ಖ ೪೭೨೨೨||೪|೨೧ ೨-|| ಭಾಗಿಗೆ ಹಱಿಯದ ಶೇಷ ೨೪ ಪ್ರ.. ಹಾ ೩೭ ದ್ವಿ. ಹಾ ೩೨೦ ಗುಣಕಾರದ ಲೆಕ್ಕ ೫೧೩೯ (೯) ೭೭ ||

ಸೂತ್ರಂ–೨೨ ಇಕ್ಕುಳ ನೆಲ್ಲಿಂಗಕ್ಕಿಯ |
ವೊಕ್ಕಳದೊಳರವನವ ಕಳದು ಕೊಡಲುಂ ತಾಂ ||
ಚಿಕ್ಕನೆ ಸಾಸಿರಗಂಡುಗ(ನೆಲ್ಲಿಂ) |
ದಿಕ್ಕುಳಕೆ......ದಳಿಸಿದಕ್ಕಿಯ ಪವಣೇಂ ||

ವೊಡ್ದು || ನೆಲ್ಲು ಕೊಳ ೨ ಕ್ಕೆ ಅಕ್ಕಿ ಖಂ |||೩||| ಲೂ ನೆಲ್ಲ ಖ ೧೦೦೦ ಕೊ ೨ ಕ್ಕೆ ಅಕ್ಕಿ ಎಷ್ಟಾಯಿತ್ತಾ? ~ಲಬ್ಧ ಅಕ್ಕಿ ಖ ೪೮-|೩|೩|| ಪ್ರ. ಹಾ ೨ ದ್ವಿ. ಹಾ ೧೨೮೦ ಗುಣ ೧೨೪೦೧೨೪.

ಕೊಟ್ಟಣದ ಸೂತ್ರಂ ಸಮಾಪ್ತಂ

ಇನ್ನು ಮುಂದಕ್ಕೆ ತೈಲ ಕ್ರಯಂಗಳ ಸೂತ್ರಂಗಳ್—

ಸೂತ್ರಂ–೨೩ ಅಱುಗುಳದೆಳ್ಳಿಂಗೆಣ್ಣೆಯ |
...ಅಳೆವರು ತಾಂ...ದಿಮ್ಮನವರೆಯುಂ ||
ಅಱುವತ್ತು ಖಂಡುಗೆಳ್ಳಿಗೆ |
ಎಱೆವುದಮಂ ಪರದರೆಣ್ಣೆಯಂ ಪೇೞ್ಗಣಕಾ ||

ವೊಡ್ದು||ಎಳ್ಳು ಖ ಕೊಳ ೭ಕ್ಕೆ ಎಣ್ಣೆ ಖ೧ ಮಾನ ೨ಲೂ ಎಳ್ಳು ಖ ೬೦ಕ್ಕೆಎಷ್ಟಾಯಿತ್ತಾ? ಲಬ್ಧ ಎಣ್ಣೆ ಖ ೧೪|೧| ಪ್ರಥ. ಹಾ ೭| ದ್ವಿ. ಹಾರ ೧೨೮೦ ಗುಣಕಾರ ೧೦೮೦೦೦ ||

ಸೂತ್ರಂ–೨೪ ಹರಳೇೞು ಕೊಳಗಕೆಣ್ಣೆಯು |
ಗಿರಿಸಂಖ್ಯೆಯ ದೆಳ್ಳವಾಗೆ ಕೂ....ಹರಳುಂ ||
ಭರದಿಂ ಶತಖಂಡುಗಕಂ |
ನಿರುತಂ ತಾನೆಣ್ಣೆಯೆನಿತು ಪೇೞಯ್ ಗಣಕಾ ||

ವೊಡ್ಡು || ಅವುಡಲದಹರಳು ಖ ೬ಕ್ಕೆ ಎಣ್ಣೆ ೧ ಲೂ ಹರಳು ಖಂ ೧೦೦ಕ್ಕೆ ಎಣ್ಣೆ ಎಷ್ಟಾಯಿತ್ತ್ಯಾ? ಲಬ್ಧ ಎಣ್ಣೆ ಖ ೨೫ ಪ್ರಥಮ ಹಾರ...ದ್ವಿ. ಹಾರ ೮೦ ಗುಣಕಾರ ೧೪೦೦೦||

ಸೂತ್ರಂ—೨೫ ಹೊಂಗೆಯ ಹರಳೊಕ್ಕುಳಕಂ |
ಹಿಂಗದೆ ತಾಂ ಯೆಣ್ಣೆ ಮಾನನಯ್ದಂ ಕೊಡುವರ್ ||
ಹೊಂಗೆಯ ಹರಳಯ್ಗ್ಗಂಡುಗ |
ದೆಪ್ಪತು ಬಳ್ಳಕೆಣ್ಣೆಯೆನಿತು ಪೇಳಿಯ್ ಗಣಕಾ ||

ವೊಡ್ಡು || ಹೊಂಗೆ ಹರಳು ೧ಕ್ಕೆ ಎಣ್ಣೆ ಖ ೦| ಹೊಂಗೆಹರಳು ಖಂ ೫೦೦|||೨||ಕ್ಕೆ ಎಷ್ಟಾಯಿತ್ತ್ಯಾ? ಲಬ್ಧ ಎಣ್ಣೆ ಖ ೧೫೭|| ೦|೩|| ಪ್ರಥಮ ಹಾ ೪ ದ್ವಿತಿ. ಹಾ....ಗುಣಕಾರ ೨೦೦೩೫೦||—

ಸೂತ್ರಂ—೨೬ ಬೇವಿನ ಬೇಳೆಯು ಖಾರಿಗೆ |
ಯಾವುದು ಎಣ್ಣೆಯನು ಆಯ್ದು ಕೊಳಗದೆ ನಿರುತಂ ||
ಬೇವಿನ ಹರಳೆಪ್ಪತ್ತ(ಯ್ಗ್ಗಂಡುಗಕ್ಕಂ) |
ಭಾವಿಸಿ ಎಣ್ಣೆನಿತು ಪೇಟ ರಾಜಾದಿತ್ಯ ||

ವೊಡ್ಡು || ಬೇವಿನ ಹರಳು ಖ ೧ಕ್ಕೆ ಎಣ್ಣೆ ಖಂ|೦ ಲೂ ಬೇವಿನ ಹರಳು ಖ ೭೫ಕ್ಕೆ ಎಷ್ಟಾಯಿತ್ತ್ಯಾ ? ಲಬ್ಧ ಎಣ್ಣೆ ಖ ೧೮ ಪ್ರಥಮ ಹಾ ೧ ದ್ವಿತಿ. ಹಾ ೨೦ ಗುಣಕಾರ ೩೭೫.

ಸೂತ್ರಂ—೨೭ ಕುಸುಬೆಯು ಆಯ್ಗೊಳಗಕ್ಕಂ |
ವಸುಧೆಯೊಳಂ ಆಱುಬಳ್ಳದೊಮ್ಮ ನೆಣ್ಣೆಯ ಕುಡಲುಂ ||
ಕುಸುಬೇಱು ಸಾಸಿರೆಂಟುಂ (ಖಂಡುಗ) |
ದ ಶ ಕೊಳಗದೊಳಿಪ್ಪರ್ ಕುಸುಬೆಗೆಣ್ಣೆನಿತಕ್ಕುಂ ||

ವೊಡ್ಡು|| ಕುಸುಬೆಬೀಜ ೩೦|೦ಕ್ಕೆ ಎಣ್ಣೆ ಖಂ ಕೊ ೧||೧ಲೂ ಕುಸುಬೆಬೀಜ ಖ೭೦೮||ಕ್ಕೆ ಎಷ್ಟಾಯಿತ್ತ್ಯಾ ? ಲಬ್ಧ ಎಣ್ಣೆ ಖಂ ೧೯೦ || ಮಾ ೨ ಹಾರ........ದ್ವಿತೀಯ ಹಾರ......೦ ಗುಣ... ೩೫....೨೫೦.

ಸೂತ್ರಂ—೨೮ ಎಳ್ಳ ಗಸೆ...ಳ...ಳಗಕ್ಕಂ |
ಬಳ್ಳವುಗಿರಿಸಂಖ್ಯೆ ಮೇಲೆಯೊಮ್ಮ ನವರೆಯುಂ ||
ಬಳ್ಳವೆರಸಿರ್ದಯ್ನೂಱು (ಖಂಡುಗಕ)ಂ |
ಎಳ್ಳಗ...ಲ...ತ...ಪೇಟ್ಟೈ ಗಣಕಾ ||

ಪೊಡ್ಡು || ಎಳ್ಳಗಸೆ ಖಂ |೨ಕ್ಕೆ ಎಣ್ಣೆ ಖ ೧|||೧|| ಲೂ ಎಳ್ಳಗಸೆ ಖಂ ೫೦೦,ಕ್ಕೆ ಎಷ್ಟಾಯಿತ್ತ್ಯಾ ? ಲಬ್ಧ ಎಣ್ಣೆ ಖ ೧೩೧||೩|||೩|||೨| ಹಾರ ೨೮ ದ್ವಿತೀಯ ಹಾರ ೧೨೮೦ ಗುಣಕಾರ ೪೭೨೦೧೧೮.

....ತೈಲದ ಕೊಟ್ಟಣದ ಸೂತ್ರಂಗಳ್ ಸಮಾಪ್ತಂ....

ಇನ್ನು ಮುಂದೆ ಮತ್ತರ ಸೂತ್ರಂಗಳ್—

ಸೂತ್ರಂ–೨೯ ಮತ್ತರು ಹಸನಾಗಿರಲೊಂ |
ಭತ್ತು............ ||
.................. |
[ಮತ್ತರ] ಪವಣಿಂಗೆ ಕಂಭವುಂ ಪೇೞ್ಗಣಕಾ ||

ಟೀಕು || ಮತ್ತರು ಎಂಬುದು ಭೂಮಿಯ ಗಡಿಬ || ಮತ್ತರು ೧ಕ್ಕೆ ಕಂಭಂ ೯೦೦ ಎಂದು ತಿಳಿದುಕೊಂಬುದು. ಕಂಭ ೧ಕ್ಕೆ ಕೆಯ್ ೪. ಕಂಭ ೧ಕ್ಕೆ....ಗ ೪೨-೧೬ ಕಾಣಿ ೬೪ ಗಿದ್ದಗಾಣಿ ೨೫೬ ಕಂಭ ೧ಕ್ಕೆ ಹಾಗ. ಹಾಗ ೧ಕ್ಕೆ ವೀಸ ೪ ವೀಸ ೧ಕ್ಕೆ ಕಾಣಿ ೪, ಕಾಣಿ ೧ಕ್ಕೆ ಗಿದ್ದಗಾಣಿ ೪ ಕಾಣಿ ೧ಕ್ಕೆ ಅದ್ದಗಾಣಿ ೨.

ಸೂತ್ರಂ–೩೦ ಎರಡುಂ ಮತ್ತರು ಮೆಂ[ಭ |
ತ್ತೆರಡುಂ] ಕಂಭಕ್ಕೆ ಮೂಱು ಪಣ·ಮುಪ್ಪಾಗಂ ||
ನಿರುತಂ ತೆಱೆಯಾಗಲ್ ಮ |
ತ್ತರ...ನಾಲ್ವತ್ತೊಂದು ಕಂಭ ಕೆಯ್ಗೇನಕ್ಕುಂ ||

ವೊಡ್ಡು || ಮತ್ತರು ೨ ಕಂಭ ೮೨ಕ್ಕೆ ೩||| ಲೂ ಮತ್ತರು ೧ ಕಂಭ ೪೧ಕ್ಕೆ ಎಷ್ಟಾಯಿತ್ತಾ ? ಲಬ್ಧ ೧|||೨|| ಹಾರ೧೮೮೨ ದ್ವಿತೀಯ ಹಾರ ೪ ಗುಣಕಾರ ೧೪೧೧೫.

ಸೂತ್ರಂ–೩೧ ಮತ್ತರೇಕಾದಶ (ಶತಕಂಭಕ್ಕಂ) |
ಯಿತ್ತರ್ ಮೂರ್ಪೊನ್ನು ಮಂತೆ ಪಣಪಾಗಕ್ಕಂ ||
ಮತ್ತರೆರಡಱೊಳೇೞ್ನೂ |
ರುತ್ತಮ ಕಂ[ಭಕ್ಕೆ ಪೇೞ]ತೆಱೆಯೆನಿತಕ್ಕುಂ ||

ವೊಡ್ಡು || ಮತ್ತರು ೧೧ ಕಂಭ ೧೦೦ಕ್ಕೆ ಗ ೩–೧| ಲೂ ಮತ್ತರು ೨ ಕಂಭ ೭೦೦ಕ್ಕೆ ಎಷ್ಟಾಯಿತ್ತಾ ? ಲಬ್ಧ ಗ ೨ || ೧ ಪ್ರಥಮ ಹಾರ ೧೦೦೦೦ ದ್ವಿ. ಹಾ ೪ ಗುಣಕಾರ ೧೨೫೦೦.

ಸೂತ್ರಂ–೩೨ ಮೂಱುಂ ಮತ್ತರು ಕೆಯ್ಗಂ |
ಆಱುಪಣಂ ಮೂಱು ಪಾಗವಾಗಲ್ ಮತ್ತಾ ||
ಆಱು ಶತ ಮೂಱುಪೊನ್ನಿಗೆ |
ನೀಱಾ ನೀಂ ತಿಳಿಯೆ ಪೇೞ ಗಣಿತವಿಳಾಸಾ ||

ವೊಡ್ಡು || ಗ ೧ಕ್ಕೆ ಮತ್ತರು ೩...ಗ ೬೦೩ಕ್ಕೆ ಎಷ್ಟಾಯಿತ್ತಾ ? ಲಬ್ಧ ಮತ್ತರು ೨೬೮೧ ಪ್ರಥಮ ಹಾರ ೨೭ ದ್ವಿತೀಯ ಹಾರ ೩೬೦೦ ಗುಣಕಾರ ೨೩೬೦.

ಸೂತ್ರಂ–೩೩ ನಿರುತಂ....ನಸಲೊಂದು ಮತ್ತರಿಂಗೆ |
ಪುರಪಣವುಂ ಪಾಗವೆರಡುಮಾಗಲ್ ಬೞಕಂ |
ಎರಡೆಂಭತ್ತೆಂಟಱೊಳಂ |
ಪುರ ಪಾಗದ ಕೆಯ್ಗೆ....ಯ ಪವಣಂ ಪೇೞಾ ||

ವೊಡ್ಡು || ಮತ್ತರು ೧ಕ್ಕೆ ಗ ೩ ಲೂ ಕಂಭ ೧೬೮ಕ್ಕೆ ಎಷ್ಟಾಯಿತ್ತಾ ? ಲಬ್ಧ ಗ ೦||೩ ಗಿದ್ದಗಾ ೨ ಹಾರ ೩.೦೦ ಗುಣಕಾರ ೯೪೫೦.

ಸೂತ್ರಂ-೩೪ ಮತ್ತರು...ಱತೊಂಭತ್ತುಂ |
...ಗದ್ಯಾಣವಾಗೆ ತೆಱೆ ಸಾಸಿರದೆ ||
ಪ್ಪತ್ತೇೞುಂ ಪೊನ್ನಿಗೆ ಭ ೨ |
ಬಿತ್ತರಿಸಿಯೆ ತಿಳಿಯೆ ಪೇೞಿ ಮತ್ತರ ಪವಣಂ ||

ವೊಡ್ಡು || ಗ ಲಕ್ಕೆ ಮತ್ತ ೧೬...ಗದ್ಯಾ ೧೦೭೭ಕ್ಕೆ ಎಷ್ಟಾಯಿತ್ತಾ ? ಲಬ್ಧ ಮತ್ತರು ೧೯೧೪ ಕಂಭ ೬೦೦ ಹಾರ ೯ ಗುಣಕಾರ ೧೭೨೩೨-||

ಸೂತ್ರಂ-೩೫ ಎರಡುಂ ಮತ್ತರ ಕೆಯ್ಗಂ |
ನಿರುತಂ ತಾನಯ್ದು ಪಣವು ಪಾಗಮುದಾಗಲ್ ||
ಇರದೇೞು ಮತ್ತರಿಂಗಂ |
ಭರವಸದಿಂ ತಿಳಿಯಪೇೞಿ ಗಣಕನಿಧಾನಾ ||

( ವೊಡ್ಡು || ಮತ್ತರು ೧೯೧೪ ಕಂಭ ೬೦೦ ಹಾರ ೯ ಗುಣಕಾರ ೧-೨೩೨ ) ?

ವೊಡ್ಡು || ಮತ್ತರು ೨ಕ್ಕೆ ಗ ||೦| ಲೂ ಮತ್ತರು ಏಳಕ್ಕೆ ೭ ಕ್ಕೆ ಎಷ್ಟಾಯಿತ್ತಾ ? ಲಬ್ಧ ಗ ೧||೩೨|| ಹಾರ ೨ ಗುಣಕಾರ ೧೪೭.

ಸೂತ್ರಂ-೩೬ ಮೂ... ........ |
........................ ||
........ಮತ್ತೆರಡುಂ ಮತ್ತರಿಗಂ |
ತೇಱ್ಕೈಸಿ ಗುಣಿಸಿ ಬಂದ ಪೊನ್ನಿನ ಪವಣಂ ||

ವೊಡ್ಡು || ಮತ್ತರು ೩ಕ್ಕಂ ೪೫೦ಕ್ಕೆ ೩|| ಲೂ ಮತ್ತರು ೫೫೨ಕ್ಕೆ ಎಷ್ಟಾಯಿತ್ತಾ ? ಲಬ್ಧ ೫೫-೨ ಲೂ....ಗುಣ ೯೫೫೨೦೦ .....

ಸೂತ್ರಂ-೩೭ [ಎರಡುಂ] ಕಂಭಕ್ಕಡಕೆಯ |
ಗಿರಿಲೆಕ್ಕದಿ ನಾಡ ವಿಭುವು ಜಿನಭವನಕ್ಕಂ ||
ತರಿಸಿ ಕೂಡಲಯ್ನೂಱು ಸಾ |
ಸಿರ ಮತ್ತರಿಗಡಕೆ ಪೇೞಿ ಗಣಿತವಿಳಾಸಾ ||

ವೊಡ್ಡು || ಕಂಭ ೨ಕ್ಕೆ ಅಡಕೆ ೭ ಲೂ ಮತ್ತರು ೨೦ಂಕ್ಕೆ ಎಷ್ಟಾಯಿತ್ತಾ ? ಲಬ್ಧ ಅಡಕೆ ೧೫೭೫೦೦೦೦ ಹಾರ ೨ ಗುಣಕಾರ ೧೫೦೦೦೦೦.

ಸೂತ್ರಂ-೩೮ ಹನ್ನೆರಡು ಮತ್ತರಿಂಗಂ |
ಮನ್ನಿಸಿ ಅರಸಿತ್ತ ಮಾನ್ಯಮತ್ತರು ಯೆರಡುಂ ||
ಇನ್ನುಂ ಮತ್ತರ್ ನೂಱಕೆ |
ಸನ್ನುತಮತಿ ತಿಳಿಯಪೇೞಿ ಗಣಿತವಿಳಾಸಾ ||

ವೊಡ್ಡು || ಮತ್ತರು ೧೨ಕ್ಕೆ ಮಾನ್ಯ ಮತ್ತರು ೨ ಲೂ ಮತ್ತರು ೬೦ಂಕ್ಕೆ ಎಷ್ಟಾಯಿತ್ತಾ ? ಲಬ್ಧ ಮಾನ್ಯ ಮತ್ತರು ೧೦೦ ಹಾರ ೧೨ ಗುಣಕಾರ ೧೨೦೦ ಮತ್ತರು ||—

ಸೂತ್ರಂ–೩೯ ತೊಂಭತ್ತು ಮೆಟ್ಟಿನ ಗಡಿಬ |
ಕ್ಕಿಂಬಾಗಿರ್ದಯ್ದು ಪಣಮು ಗದ್ಯಾಣಂ...ಂದು ||
ಕಂಭವಱುವತ್ತು ಮೆಟ್ಟಿಗೆ |
ಸಂಭವದಿಂ ಪೊನ್ನುಯೆನಿತು ಪೇಱಯ್ ಗಣಕಾ ||

ವೊಡ್ಡು || ಕಂಭ ಮೆಟ್ಟು ೯೦ಕ್ಕೆ ಗ ೧ ||೦ ಲೂ ಕಂಭ ಮೆಟ್ಟು ೬೦ಕ್ಕೆ ಎಷ್ಟಾಯಿತ್ತಾ ? ಲಬ್ಧ ಗ ೧ ಹಾರ ೯೦ ಗುಣಕಾರ...

ಸೂತ್ರಂ–೪೦ ಮೂವತ್ತೆರಡುಂ ಮೆಟ್ಟಿನ |
ಭಾವದ ಕಂಭ ಶಶಿಗೆ ನಾಲ್ಪಣ ಕಳೆದುಂ ||
...................ಪೊನ್ನುಂ |
ಯಿಾವುದು ನೂಱುಱುವತ್ತುಮೆಟ್ಟಿನ ಕಂಭಕ್ಕೇನಯ್ ||

ವೊಡ್ಡು || ಕಂಭದ ಮೆಟ್ಟು ೩೨ಕ್ಕೆ ಗ ೫೬||೪|||....ಕಂಭಮೆಟ್ಟು ೧೬೦ಕ್ಕೆ ಎಷ್ಟಾಯಿತ್ತಾ ? ....ಹಾರ ೪೦ ಗುಣಕಾರ ೩೬೪೬೪೦||

ಸೂತ್ರಂ–೪೧ (ಗತಿ) ಜಲಧಿ ಮೆಟ್ಟು ಗಡಿಬದು |
ಅತಿಶಯದಿಂ ಕಂಭ ನೂಱುಯೆಂಬೀ ಭೂಮಿಯ |
ಮತಿಯಿಂ ಗಡಿಬವನಱಿಯಲ್ |
ಕ್ಷಿತಿಯೊಳಗಿನ್ನೂಱುಕಂಭವಳೆದುಂ ತೊಱೆ೨ ||

ವೊಡ್ಡು || ಕಂಭ ೧೦೦ನೂ ಅಳೆದ ಗಱೆಯ ಮೆಟ್ಟು ೪೪ ಆಗುತ್ತಿರಲು ಕಂಭ ೨೦೦ ಆಗುವ ಹಾಗೆ ಅಳೆದಗಱೆಯಮೆಟ್ಟು ಎಷ್ಟಾಯಿತ್ತ? ಎಂದರೆ ಲಬ್ಧಮೆಟ್ಟು ೩೧ಱಗಱೆಯಕ್ಕುಂ. ಭಾಗಿಗೆ ಹಱಿಯದ ಶೇಷ ೭ ಹಾರ ೨೦೦ ಗುಣಕಾರ ೧೯೩೬೦೦.

ಟೀಕು || ಎರಡು ರಾಶಿಯ ಕಂಭಗಳನು ಬೆಸ್ತವಮಾಡಿಯಿರಿಸುವುದು. ಬಳಿಕ ..ರಾಶಿಯ ಮೆಟ್ಟಂ ವರ್ಗಂಗೊಳಲು ಬಂದುದು ೧೯೩೬ ಯಿದನಿಕ್ಕಿ ಕಂಭ ೧೦ಱಿಂದ ಗುಣಿಸಲು ಬಂದುದು ೧೯೩೬೦೦ ಯಿದನೂ ಕಂಭ ೨೦೦ಱಿಂದ ಭಾಗಿಸಲು ಬಂದುದು ೯೬೮ ಯಿದನೂ ವರ್ಗಮೂಲಂ ಗೊಳಲು ಬಂದ ಲಬ್ಧ ಮೆಟ್ಟು ೭೧ ಯಿದು ಕಂಭ ೨೦೦ ಆಗುವ ಹಾಗೆ ಅಳೆದಗಱೆಯ ಮೆಟ್ಟಕ್ಕುಂ ಭಾಗಿಗೆ ಹಱಿಯದ ಶೇಷ...

ಸೂತ್ರಂ–೪೨ ಅಱುವತ್ತು ನಾಲ್ಕುಮೆಟ್ಟಿನ |
ಅಱುನೂಱುಂ ತಾಳ ಕಂಭವಾಗಲ್ ಮತ್ತಂ ||
ನಿರುತದಿ ಮೂವತ್ತೆರಡುಂ |
ಸರಿಸದಿಗಳ....ಅಳೆಯ ಕಂಭಮದೇನ್ನೈ ||

ವೊಡ್ಡು|| ಮೆಟ್ಟು ೬೪..... ಅಳೆದಿರ್ದ ಕಂಭ ೬೪೦ ಮೆಟ್ಟು ೪೨೫ ಗಱೆಯಲ್ಲಿ ಅಳೆಯಲು ಕಂಭವೆಷ್ಟಾಯಿತ್ತ್ಯಾ ? ಲಬ್ಧ ಕಂಭ ೨೫೬೦ ಹಾರ ೧೦೨೪ ಗುಣಕಾರ ೨೬೨೧೪೪೦.

ಟೀಕು|| ಮೆಟ್ಟು ೬೪ನೂ ವರ್ಗಂಗೊಳಲು ಬಂದುದು ೪೦೯೬ ಯಿದನು ಇಚ್ಛಾರಾಶಿಯೆಂದು ಪ್ರತಿಯನಿಡುವುದು, ಬಳಿಕ ನಡುವಣ ರಾಶಿಯ ಕಂಭ ೬೪೦ ನೂ......೩ ನೂ ವರ್ಗಂಗೊಳ್ಳಲು ಬಂದುದು....೨೪ ಯಿದನು ಪ್ರಮಾಣದ ರಾಶಿಯಿಂದ ಪ್ರತಿಯಿಡುವುದು, ಬಳಿಕ ಗುಣಿಸುವ ವಿವರ ಇಚ್ಛಾರಾಶಿಯ ೪೦೯೬ನೂ ಫಳದ ರಾಶಿಯ ೬೪೦ಱಿಂ...............ಯಿಾ ಗುಣಕಾರವನು, ಪ್ರಮಾಣದ ರಾಶಿಯ ಹಾರ ೧೦೨೪ಱಿಂದ ಭಾಗಿಸಲು ಬಂದ ಲಬ್ಧ[?]ಕಂಭ ೨೫೬೦ ಯಿಾ ಜಾತಿಯನು ಯಿಾ ಕ್ರಮದಿಂ ಗುಣಿಸಿಕೊಂಬುದು ತಪ್ಪದು.

ಮತ್ತರ ಸೂತ್ರಂಗಳ್ ಸಮಾಪ್ತಂ

ಇನ್ನು ಮುಂದೆ ಹೊಟ್ಟಿನ ಸೂತ್ರಗಳು—

ಸೂತ್ರಂ—೪೩ ಕಡಗೊಂಡ ನೂಱು ಖಂಡುಗ |
ದೆಡು ಕೊಡುತಿರ್ದುದು ತುಷದೊಳೀಱ್ಕೊಳಗವ ತಾಂ ||
ಬಿಡೆ ತೂಱಿ ಮೂಱು ಬಳ್ಳಂ |
ತಡೆಯದೆ ಕು...ಲ್ಕದೆನಿತನೀವರ್ ಪರದರ್ ||

ವೊಡ್ಡು || ಭತ್ತ ಖಂ|೧ಕ್ಕೆ ಜಳ್ಳು ಭತ್ತ ಖಂ||೦|| ಲೂ ಶುದ್ಧ ಭತ್ತ ಖಂ...೩ಕ್ಕೆ ಜಳ್ಳು ಎಷ್ಟಾ[ಯಿತ್ತ್ಯಾ ?]

ಲಬ್ಧ ಜಳ್ಳು ಭತ್ತ ಖಂ ||| ೧ ||| ೨ ತಿಹಾಳೆ, ತಿಹಾಳೆಯೆಂದರೆ ಮಾನ ೧ಕ್ಕೆ ಮೂಱು ಹಿಡಿದರೆ ಮಾನ ೧ಕ್ಕೆ ಮೂಱು ತಿಹಾಳೆಯೆಂದು ಯಿಕ್ಕಿಕೊಂಡು ಗುಣಿಸಿಕೊಂಬುದು. ಯಿದು ಭಾಗಹಱಿಯದ ಲೆಕ್ಕಕ್ಕೆ ಗುಣಿಸಿಕೊಂಬುದು. ಪ್ರಥಮ ಹಾರ ೬ ದ್ವಿತೀಯ ಹಾರ ೮೦ ಗುಣಕಾರ ೪೨೪೬||

ಸೂತ್ರಂ-೪೪ ನೂಱೆರಡು ಖಂಡಿ ಭತ್ತವ |
ವೋರಳೆ(ಡೆ)ಯುಂ ಕೊಟ್ಟು ತೆಗೆದು ಅಳೆಯಲ್ ವುತ್ತಂ ||
ಬೇಱುಗೊಳಗವ ತೂಱಲ್ |
ತೂಱುವ....................... ||

ವೊಡ್ಡು || ಶುದ್ಧ ಭತ್ತ ಖಂ|೧ಕ್ಕೆ ಜಳ್ಳು ೧|೧ ಲೂ ಶುದ್ಧ ಭತ್ತ ಖಂ ೧೦೨ಕ್ಕೆ ಎಷ್ಟಾಯಿತ್ತ್ಯಾ ? ಲಬ್ಧ ಜಳ್ಳು ಭತ್ತ ಖಂ ೫|೧| ಪ್ರ. ಹಾರ ೬ ದ್ವಿತೀಯ ಹಾರ ೩೨೦ ಗುಣಕಾರ ೧೦೨೦೦.

ಸೂತ್ರಂ-೪೫ ಆಯ್ತುಗಳದ ಮೂಱುಮಾನಕ ।
ಮಯ್ತುಗಳದೇೞುಮಾನ ಕೊಡುತಿರಲಂತಾಂ ॥
ಯಾವುದು ಮೂಱುಸಾಸಿರದ (ನೂಱಾಱು ಖಂಡುಗ) ।
ಭಾವದ ಲಯ್ತು ಮಾನಕ್ಕೆ ಪ್ರತಿಭತ್ತವದೇನ್ನೈ ?

